prajavani.net prajavani
ಸೋಮವಾರ, ಜನವರಿ 5, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 5 | ಪುಟ 12
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಪೊಂಗಲ್ ಸಂಭ್ರಮ
ಚೆನ್ನೈನಲ್ಲಿ 'ಪೊಂಗಲ್' ಹಬ್ಬದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಕಲಾ ಪ್ರದರ್ಶನ ನೀಡಿದ ಯುವತಿ

ತಕ್ಷಣ ಝುಡ್ ಶ್ರೇಣಿ ಭದ್ರತೆ ಕೊಡಿ: ರೆಡ್ಡಿ ಪತ್ರ 5

ನ್ಯೂಯಾರ್ಕ್ ಜೈಲಿಗೆ ಮಡೂರೊ

ವೆನೆಜುವೆಲಾದಲ್ಲಿ ಅಧಿಕಾರ ವರ್ಗಾವಣೆ; ಮುಂದುವರಿದ ಅನಿಶ್ಚಿತತೆ

ವಾಷಿಂಗ್ಟನ್ (ಎಪಿ/ಎಎಫ್‌ಪಿ): ಅಮೆರಿಕದ ಪಡೆಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಹಿಡಿದು ಒಯ್ದಿರುವ ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಹಾಗೂ ಅವರ ಪತ್ನಿಯನ್ನು ನ್ಯೂಯಾರ್ಕ್‌ನ ಬ್ರೂಕ್ಲಿನ್ ಜೈಲಿನಲ್ಲಿ ಇರಿಸಲಾಗಿದೆ.

ಅಮೆರಿಕ ಸೇನೆ ಶುಕ್ರವಾರ ತಡರಾತ್ರಿ ವೆನೆಜುವೆಲಾದ ರಾಜಧಾನಿ ಕರಾಕಸ್ ಮೇಲೆ ವಾಯು ದಾಳಿ ನಡೆಸಿ ಮಡೂರೊ ಹಾಗೂ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ತನ್ನ ವಶಕ್ಕೆ ತೆಗೆದುಕೊಂಡಿತ್ತು.

ದಾಳಿಯ ಬೆನ್ನಲ್ಲೇ ಇಬ್ಬರನ್ನೂ ಕರಾಕಸ್‌ನಿಂದ ಹೆಲಿಕಾಪ್ಟರ್‌ನಲ್ಲಿ ಅಮೆರಿಕದ ಯುದ್ಧನೌಕೆಗೆ ಕರೆದೊಯ್ಯಲಾಯಿತು. ಶನಿವಾರ ಅಲ್ಲಿಂದ ವಿಮಾನದಲ್ಲಿ ಅಮೆರಿಕದ ಸೇನಾ ನೆಲೆಯೊಂದಕ್ಕೆ ಸ್ಥಳಾಂತರಿಸಲಾಯಿತು ಆ ಬಳಿಕ ಹೆಲಿಕಾಪ್ಟರ್‌ನಲ್ಲಿ ನ್ಯೂಯಾರ್ಕ್‌ಗೆ ಸ್ಥಳಾಂತರಿಸಲಾಯಿತು. ಮಾದಕ ವಸ್ತು ಕಳ್ಳಸಾಗಣೆ ಆರೋಪಕ್ಕೆ ಸಂಬಂಧಿಸಿದಂತೆ ದಂಪತಿ ವಿಚಾರಣೆ ಎದುರಿಸಲಿದ್ದಾರೆ.

ಅಮೆರಿಕದ ಪೊಲೀಸ್ ಅಧಿಕಾರಿಗಳು ಕೈಕೋಳ ತೊಡಿಸಿ ಮಡೂರೊ ಅವರನ್ನು ನ್ಯೂಯಾರ್ಕ್‌ನ ಮಾದಕ ಪದಾರ್ಥ ತಡೆ ಕೇಂದ್ರದ ಕಚೇರಿಗೆ ಕರೆದೊಯ್ದ ವಿಡಿಯೊವನ್ನು ಶ್ವೇತಭವನವು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ. 63 ವರ್ಷ ವಯಸ್ಸಿನ ಮಡೂರೊ ಈ ವೇಳೆ ಅಲ್ಲಿದ್ದ ಅಧಿಕಾರಿಗಳನ್ನುದ್ದೇಶಿಸಿ, 'ಶುಭರಾತ್ರಿ, ಹೊಸ ವರ್ಷದ ಶುಭಾಶಯಗಳು' ಎಂದು ಹೇಳಿರುವುದು ವಿಡಿಯೊದಲ್ಲಿದೆ.

'ಮಾದಕ ದ್ರವ್ಯ-ಭಯೋತ್ಪಾದನೆ' ಪಿತೂರಿ ಸೇರಿದಂತೆ ವಿವಿಧ ಆರೋಪಗಳನ್ನು ಅವರ ಮೇಲೆ ಅಮೆರಿಕ ಹೊರಿಸಿದೆ. ಮಡೂರೊ ಅವರನ್ನು ಸೋಮವಾರ ಮ್ಯಾನ್‌ಹಟನ್‌ನ ಫೆಡರಲ್ ನ್ಯಾಯಾಲಯಕ್ಕೆ ಹಾಜರು ಪಡಿಸುವ ಸಾಧ್ಯತೆಯಿದೆ ಎಂದು ನ್ಯಾಯಾಂಗ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 8

ನಿಕೊಲಸ್ ಮಡೂರೊ (ಮಧ್ಯ) ಅವರನ್ನು ನ್ಯೂಯಾರ್ಕ್‌ನ ಮಾದಕ ಪದಾರ್ಥ ತಡೆ ಕೇಂದ್ರದ ಕಚೇರಿಗೆ ಕರೆತಂದಾಗಿನ ದೃಶ್ಯ —ಎಎಫ್‌ಪಿ ಚಿತ್ರ

ನ್ಯಾಯಾಲಯಕ್ಕೆ ಇಂದು ಹಾಜರು

- ಮಡೂರೊ ಅವರನ್ನು ಇಂದು ನ್ಯೂಯಾರ್ಕ್‌ನ ಮ್ಯಾನ್‌ಹಟನ್ ನ್ಯಾಯಾಲಯಕ್ಕೆ ಹಾಜರುಪಡಿಸುವ ಸಾಧ್ಯತೆಯಿದೆ
- ಉಪಾಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವಂತೆ ವೆನೆಜುವೆಲಾ ನ್ಯಾಯಾಲಯ ಆದೇಶಿಸಿದೆ
- ಅಮೆರಿಕದ ದಾಳಿಯಲ್ಲಿ ಕೆಲವು ನಾಗರಿಕರು ಹಾಗೂ ಭದ್ರತಾ ಪಡೆಗಳ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಡೆಲ್ಸಿ ರಾಡ್ರಿಗಸ್ ಹೇಳಿದ್ದಾರೆ. ಆದರೆ, ಮೃತರ ನಿಖರ ಸಂಖ್ಯೆ ನೀಡಿಲ್ಲ
- ವೆನೆಜುವೆಲಾ ಸ್ವತಂತ್ರ ರಾಷ್ಟ್ರವಾಗಿಯೇ ಉಳಿಯಬೇಕು: ಪೋಪ್ ಲಿಯೊ ಕರೆ
- ವಿಶ್ವದ ವಿವಿಧ ನಗರಗಳಲ್ಲಿ ಅಮೆರಿಕ ಪರ–ವಿರೋಧ ರ‍್ಯಾಲಿ

ವೆನೆಜುವೆಲಾದ ಉಳಿದ ನಾಯಕರು 'ಸರಿಯಾದ ದಿಕ್ಕಿನಲ್ಲಿ' ಮುನ್ನಡೆದರೆ ಅವರೊಂದಿಗೆ ಸೇರಿ ಕೆಲಸ ಮಾಡಲು ಅಮೆರಿಕ ಸಿದ್ಧವಾಗಿದೆ
ಮಾರ್ಕೊ ರುಬಿಯೊ, ವಿದೇಶಾಂಗ ಕಾರ್ಯದರ್ಶಿ

ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸುವ ಇಂತಹ ಬೆಳವಣಿಗೆಗಳು ಅಪಾಯಕಾರಿ ಪೂರ್ವನಿದರ್ಶನವನ್ನು ಸೃಷ್ಟಿಸುತ್ತವೆ
ಅಂಟೊನಿಯೊ ಗುಟೆರಸ್, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಯುದ್ಧಕ್ಕೆ ಸಮನಾದ ಕೃತ್ಯ: ಮಮ್ದಾನಿ

ನ್ಯೂಯಾರ್ಕ್‌ನ ನೂತನ ಮೇಯರ್ ಜೊಹ್ರಾನ್ ಮಮ್ದಾನಿ ಅವರು ಅಮೆರಿಕ ಸೇನೆ ನಡೆಸಿದ ಕಾರ್ಯಾಚರಣೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. 'ಟ್ರಂಪ್ ಅವರ ಜತೆ ಮಾತನಾಡಿ ನನ್ನ ವಿರೋಧ ವ್ಯಕ್ತಪಡಿಸಿದ್ದೇನೆ' ಎಂದು ಮಮ್ದಾನಿ ಹೇಳಿದ್ದಾರೆ. 8

ನೇರವಾಗಿ ಟೀಕಿಸದ ಭಾರತ

ನವದೆಹಲಿ: ವೆನೆಜುವೆಲಾದಲ್ಲಿ ಅಮೆರಿಕ ಕೈಗೊಂಡ ಕಾರ್ಯಾಚರಣೆಯನ್ನು ಭಾರತವು ನೇರವಾಗಿ ಟೀಕಿಸುವುದಕ್ಕೆ ಮುಂದಾಗಿಲ್ಲ. ಅಲ್ಲಿನ ಬೆಳವಣಿಗೆ ಬಗ್ಗೆ 'ಕಳವಳ' ಮಾತ್ರ ವ್ಯಕ್ತಪಡಿಸಿದೆ. ಆ ಮೂಲಕ 'ಬ್ರಿಕ್ಸ್' ಗುಂಪಿನ ಇತರ ಸ್ಥಾಪಕ ಸದಸ್ಯ ರಾಷ್ಟ್ರಗಳಾಗಿರುವ ಬ್ರೆಜಿಲ್, ರಷ್ಯಾ ಮತ್ತು ಚೀನಾಕ್ಕಿಂತ ಭಿನ್ನ ನಿಲುವು ತಳೆದಿದೆ. 'ವೆನೆಜುವೆಲಾದಲ್ಲಿನ ಈಚೆಗಿನ ಬೆಳವಣಿಗೆಗಳು ತೀವ್ರ ಕಳವಳ ಉಂಟುಮಾಡಿವೆ. ನಾವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರತಿಕ್ರಿಯಿಸಿದೆ. 8

ಚಿತ್ತಾರಗಳ ಸಂತೆ...

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ

ಬೆಂಗಳೂರಿನಲ್ಲಿ ಭಾನುವಾರ ಕರ್ನಾಟಕ ಚಿತ್ರಕಲಾ ಪರಿಷತ್ತು ಆಯೋಜಿಸಿದ್ದ '23ನೇ ಚಿತ್ರಸಂತೆ' ಯಲ್ಲಿ ಕಲಾಕೃತಿಗಳನ್ನು ಕುತೂಹಲದಿಂದ ವೀಕ್ಷಿಸಿದ ಕಲಾರಸಿಕರು

ವಿದ್ಯುತ್ ಕೊರತೆ: ಗ್ರಾಹಕ ನ್ಯಾಯಾಲಯ ಆದೇಶ

ರೈತನಿಗೆ ₹ 50 ಸಾವಿರ ಪರಿಹಾರ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ಕೃಷಿ ಪಂಪ್ ಸೆಟ್‌ಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಆಗದೆ ಬೆಳೆಹಾನಿ ಅನುಭವಿಸಿದ್ದ ಔರಾದ್‌ನ ರೈತರೊಬ್ಬರಿಗೆ ಪರಿಹಾರ ನೀಡುವಂತೆ ಬೀದರ್ ಜಿಲ್ಲಾ ಗ್ರಾಹಕರ ನ್ಯಾಯಾಲಯ ಜ.2ರಂದು ಮಹತ್ವದ ಆದೇಶ ನೀಡಿದೆ.

ರೈತ ಸಂಜುಕುಮಾರ ವೀರಪ್ಪ ಉಚ್ಚೆ ಅವರಿಗೆ ₹50 ಸಾವಿರ ಬೆಳೆನಷ್ಟ ಪರಿಹಾರ ಹಾಗೂ ₹5 ಸಾವಿರ ದಾವೆ ವೆಚ್ಚ ಪಾವತಿಸಲು ಜೆಸ್ಕಾಂಗೆ ಆದೇಶ ಮಾಡಿದೆ. ಅಲ್ಲದೆ 45 ದಿನಗಳ ಒಳಗೆ ಆದೇಶ ಪಾಲಿಸಬೇಕು ಹಾಗೂ ರೈತನ ಪಂಪ್ ಸೆಟ್‌ಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದೆ.

ಸಂಜುಕುಮಾರ ಉಚ್ಚೆ

'ನನಗೆ 2.34 ಎಕರೆ ಜಮೀನು ಇದೆ. ಸಾಲ ಮಾಡಿ ಬಾವಿ ಕೊರೆದು 5 ಎಚ್‌ಪಿ ಮೋಟಾರ್ ಕೂಡಿಸಿದ್ದೇನೆ. ವಿದ್ಯುತ್ ವೋಲ್ಟೇಜ್ ಸರಿಯಾಗಿ ಸಿಗದೆ ಬೆಳೆ ಹಾನಿಯಾಗಿದೆ. ಇದರಿಂದಾಗಿ ತುಂಬಾ ನೊಂದಿರುವ ನಾನು ಒಂದು ವರ್ಷದ ಹಿಂದೆ ಜಿಲ್ಲಾ ಗ್ರಾಹಕರ ನ್ಯಾಯಾಲಯಕ್ಕೆ ಮೊರೆ ಹೋಗಿದ್ದು, ಮೊನ್ನೆ ಬಂದ ಆದೇಶ ನನ್ನ ಆತ್ಮವಿಶ್ವಾಸ ಹೆಚ್ಚಿಸಿದೆ' ಎಂದು ರೈತ ಸಂಜುಕುಮಾರ ವೀರಪ್ಪ ಉಚ್ಚೆ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.



ದೊಂಬಿ ಪ್ರಕರಣ: 6 ಎಫ್‌ಐಆರ್ ದಾಖಲು

ಗನ್‌ಮ್ಯಾನ್ ಸೇರಿ 26 ಮಂದಿ ಸೆರೆ

● ಹರಿಶಂಕರ್.ಆರ್

ಬಳ್ಳಾರಿ: ಹೊಸ ವರ್ಷದ ಮೊದಲ ದಿನ ಇಲ್ಲಿ ನಡೆದಿದ್ದ ದೊಂಬಿ, ಗಾಳಿಯಲ್ಲಿ ಗುಂಡಿ ಹಾರಾಟಕ್ಕೆ ಸಂಬಂಧಿಸಿ ಗನ್‌ಮ್ಯಾನ್ ಸೇರಿ 26 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಅಲ್ಲದೆ, ಗುಂಡು ಸಿಡಿಸಿದ್ದ ಘಟನೆ ಸಂಬಂಧ ಶಾಸಕ ನಾರಾ ಭರತ್ ರೆಡ್ಡಿ ಕಡೆಯ ನಾಲ್ವರು ಖಾಸಗಿ ಅಂಗರಕ್ಷಕರನ್ನು ವಶಕ್ಕೆ ಪಡೆದಿದ್ದಾರೆ.

ದೊಂಬಿ, ಘರ್ಷಣೆಗೆ ಸಂಬಂಧಿಸಿದಂತೆ ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿದ್ದು, ಅದರಲ್ಲಿ ಉಲ್ಲೇಖಿಸಿದ್ದವರ ಪೈಕಿ ಯಾರೊಬ್ಬರೂ ಈಗ ಪೊಲೀಸರು ಬಂಧಿಸಿರುವ ಆರೋಪಿಗಳ ಪಟ್ಟಿಯಲ್ಲಿ ಸೇರಿಲ್ಲ.

'ಸಿರುಗುಪ್ಪ ರಸ್ತೆಯ ಅವ್ವಂಬಾವಿಯಲ್ಲಿರುವ ಜನಾರ್ದನ ರೆಡ್ಡಿ ನಿವಾಸದ ಎದುರು ಬ್ಯಾನರ್ ಅಳವಡಿಕೆ ಸಂಬಂಧ ನಡೆದಿದ್ದ ದೊಂಬಿ ಕುರಿತು 6 ಎಫ್‌ಐಆರ್ ದಾಖಲಾಗಿದ್ದವು. ತನಿಖೆ ವೇಳೆ ಸಾಕ್ಷ್ಯ, ವಿಡಿಯೊ ದೃಶ್ಯಾವಳಿ ಆಧರಿಸಿ 26 ಜನರನ್ನು ದಸ್ತಗಿರಿ ಮಾಡಲಾಗಿದೆ' ಎಂದು ಪೊಲೀಸ್ ಇಲಾಖೆ ಹೇಳಿಕೆ ನೀಡಿದೆ. 5

ಆರೋಪಿಗಳನ್ನು ಭಾನುವಾರ ವೈದ್ಯಕೀಯ ಪರೀಕ್ಷೆಗೆ ಕರೆದೊಯ್ಯಲಾಯಿತು

ವ್ಯಾಡ್ ಚಿತ್ರ ಹರಿದಾಟ

ಮೃತ ರಾಜಶೇಖರ ಅವರ ದೇಹವನ್ನು ಹೊಕ್ಕಿದ್ದ ಬಂದೂಕಿನ ವ್ಯಾಡ್‌ನ ಚಿತ್ರ ಭಾನುವಾರ ಮಾಧ್ಯಮಗಳಿಗೆ ಲಭ್ಯವಾಯಿತು. ದೇಹದಲ್ಲಿ ಪತ್ತೆಯಾಗಿದ್ದು ಇದೇ ವ್ಯಾಡ್ ಎಂದು ವೈದ್ಯಕೀಯ ಮೂಲಗಳೂ ಖಚಿತಪಡಿಸಿವೆ. 'ವ್ಯಾಡ್, ಭರತ್ ರೆಡ್ಡಿ ಅವರ ಕಡೆಯವರ ಖಾಸಗಿ ಅಂಗರಕ್ಷಕ ಬಳಿಯಿದ್ದ ಬಂದೂಕಿನೊಂದಿಗೆ ಹೋಲಿಕೆಯಾಗಿದೆ' ಎಂದು ಮೂಲಗಳ ಮಾಹಿತಿ ಉಲ್ಲೇಖಿಸಿ 'ಪ್ರಜಾವಾಣಿ'ಯ ಜ.3ರ ಸಂಚಿಕೆಯಲ್ಲಿ ವರದಿ ಪ್ರಕಟಿಸಲಾಗಿತ್ತು. 5

ವಿವಾದದಿಂದ 'ಕೈ' ಶಾಸಕರು ದೂರ

ಜಿಲ್ಲೆಯ 'ಕೈ' ಶಾಸಕರು ಮತ್ತು ಸಂಸದರು ಅಂತರ ಕಾಯ್ದುಕೊಂಡಿದ್ದಾರೆ. ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಹೊರತುಪಡಿಸಿ ಎಲ್ಲರೂ ಇದರಿಂದ ದೂರ ಉಳಿದಿದ್ದಾರೆ. ಗ್ರಾಮಾಂತರ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಜ. 2ರಂದು ಬಳ್ಳಾರಿಗೆ ಬಂದಿದ್ದರಾದರೂ, ಮುಖ್ಯಮಂತ್ರಿ ಸೂಚನೆಯಂತೆ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಮುಂದೂಡಿ, ಭರತ್ ಬಳಿ ಕ್ಷಮೆ ಕೇಳಿಸಿ ಕೂಡಲೇ ಬಳ್ಳಾರಿಯಿಂದ ನಿರ್ಗಮಿಸಿದ್ದರು.

ಸಂಸದ ತುಕಾರಾಂ ಅವರು, ಜಿಲ್ಲೆಯಲ್ಲಿ ಕಾರ್ಯಾಂಗ ಕುಸಿದಿದೆ ಎಂದು ಪ್ರತಿಕ್ರಿಯಿಸಿದ್ದರೆ, ಸಂಡೂರು ಶಾಸಕಿ ಅನ್ನಪೂರ್ಣ, ಸಿರುಗುಪ್ಪ ಶಾಸಕ ಬಿ.ಎಂ ನಾಗರಾಜ್ ಮೌನತಳೆದಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

₹1,464 ಕೋಟಿ ಮೊತ್ತದ ನಕಲಿ ಇನ್‌ವಾಯ್ಸ್ ಸೃಷ್ಟಿಸಿ ವಂಚಿಸಿದ್ದ ನಾಲ್ವರ ಬಂಧನ

ಜಿಎಸ್‌ಟಿ ಐಟಿಸಿ: ₹355 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ನಿರ್ಮಾಣ ಸಾಮಗ್ರಿಗಳ ಮಾರಾಟದ ಹೆಸರಿನಲ್ಲಿ ₹1,464 ಕೋಟಿ ಮೊತ್ತದ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ, ಸರ್ಕಾರದಿಂದ ₹355 ಕೋಟಿ ಮೊತ್ತದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಂಡಿದ್ದ ವಂಚಕ ಜಾಲವನ್ನು ವಾಣಿಜ್ಯ ತೆರಿಗೆ ಇಲಾಖೆಯು ಪತ್ತೆ ಮಾಡಿದೆ.

ಈ ಸಂಬಂಧ ನಾಲ್ವರನ್ನು ಬಂಧಿಸಿದ್ದ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು, ಆರ್ಥಿಕ ಅಪರಾಧಗಳ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಲಾಗಿತ್ತು. ನಾಲ್ವರು ಆರೋಪಿಗಳನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಿ, ನ್ಯಾಯಾಧೀಶರು ಆದೇಶಿಸಿದ್ದಾರೆ.

2025ರ ನವೆಂಬರ್‌ನಲ್ಲಿ ಬೆಂಗಳೂರು ನಗರದ ಎಸ್‌ಜೆಪಿ ರಸ್ತೆ, ಜೆ.ಸಿ ರಸ್ತೆ, ಕಲಾಸಿಪಾಳ್ಯ, ಬಿವಿಕೆ ಅಯ್ಯಂಗಾರ್ ರಸ್ತೆಗಳಲ್ಲಿ ಕಾರ್ಯಾಚರಣೆ ನಡೆಸಿದ್ದ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗದ ಅಧಿಕಾರಿಗಳು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಂಚನೆ ನಡೆಯುತ್ತಿರುವುದನ್ನು ಪತ್ತೆ ಮಾಡಿದ್ದರು. ಮುಂದುವರಿದ ಕಾರ್ಯಾಚರಣೆ ಭಾಗವಾಗಿ ಬೆಂಗಳೂರು ಮತ್ತು ತಮಿಳುನಾಡಿನ ಹಲವೆಡೆ ಶೋಧ ನಡೆಸಿದ್ದರು. 4B

ವಂಚನೆಯ ಪರಿ

- ಆರೋಪಿಗಳು ಖೊಟ್ಟಿ ವಿಳಾಸ ನೀಡಿ ಬಾಡಿಗೆ ಮತ್ತು ಭೋಗ್ಯ ಕರಾರು ಪತ್ರ ಪಡೆದುಕೊಳ್ಳುತ್ತಿದ್ದರು. ಈ ಪತ್ರಗಳನ್ನು ನೋಂದಣಿ ಮಾಡಿಸುತ್ತಿದ್ದರು
- ಇನ್ಯಾರದೋ ಪ್ಯಾನ್ ಮತ್ತು ಆಧಾರ್ ವಿವರ ಬಳಸಿಕೊಂಡು ಏಕವ್ಯಕ್ತಿ ಮಾಲೀಕತ್ವ ಅಥವಾ ಸೀಮಿತ ಹೊಣೆಗಾರಿಕೆಯ ಪಾಲುದಾರಿಕೆ ಕಂಪನಿಗಳನ್ನು ಆರಂಭಿಸುತ್ತಿದ್ದರು
- ಬಾಡಿಗೆ ಕರಾರು ಪತ್ರ, ಕಂಪನಿ ನೋಂದಣಿ ಪತ್ರ ನೀಡಿ ಜಿಎಸ್‌ಟಿ ನೋಂದಣಿ ಮಾಡಿಸುತ್ತಿದ್ದರು. ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಲು ಈ ಜಿಎಸ್‌ಟಿ ನಂಬರ್‌ಗಳನ್ನೇ ಬಳಸಿಕೊಳ್ಳುತ್ತಿದ್ದರು
- ನಕಲಿ ಇನ್‌ವಾಯ್ಸ್ ಮತ್ತು ಅಕ್ರಮ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಬಗ್ಗೆ ಅಧಿಕಾರಿಗಳಿಗೆ ಅನುಮಾನ ಬಂದು ನೋಟಿಸ್ ನೀಡುತ್ತಿದ್ದಂತೆಯೇ, ಆ ಕಂಪನಿಗಳ ನೋಂದಣಿಯನ್ನು ಆರೋಪಿಗಳು ರದ್ದುಪಡಿಸುತ್ತಿದ್ದರು. ನಂತರ ಹೊಸ ಕಂಪನಿ ಆರಂಭಿಸುತ್ತಿದ್ದರು
- ವಕೀಲರ ಹೆಸರಿನಲ್ಲಿ ನಕಲಿ 'ನೋಟರಿ' ಮುದ್ರೆಗಳನ್ನು ಬಳಸುತ್ತಿದ್ದರು
- ಕಾರ್ಯಾಚರಣೆ ವೇಳೆ ಹಲವು ಲ್ಯಾಪ್‌ಟಾಪ್, 24 ಮೊಬೈಲ್‌ಗಳು, 51 ಸಿಮ್‌ಕಾರ್ಡ್, ಹಲವು ಬ್ಯಾಂಕ್ ಖಾತೆಗಳ ಸ್ಟೇಟ್‌ಮೆಂಟ್‌ಗಳನ್ನು ವಶಕ್ಕೆ

ಪ್ರಜಾವಾಣಿ
ಕಬ್ಬಿಣ ವ್ಯಾಪಾರ: ಜಿಎಸ್‌ಟಿ ಅಕ್ರಮ

ವರದಿ ಪ್ರಕಟಿಸಿದ್ದ 'ಪ್ರಜಾವಾಣಿ'

ಕಟ್ಟಡ ನಿರ್ಮಾಣ ಸಾಮಗ್ರಿ ಪೂರೈಕೆ ಹೆಸರಿನಲ್ಲಿ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ, ಅಕ್ರಮವಾಗಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಳ್ಳುವ ಜಾಲ ಬೆಂಗಳೂರಿನಲ್ಲಿ ಪತ್ತೆಯಾಗಿದೆ ಎಂಬ ಮಾಹಿತಿ ಇದ್ದ 'ಕಬ್ಬಿಣ ವ್ಯಾಪಾರ: ಜಿಎಸ್‌ಟಿ ಅಕ್ರಮ' ವರದಿಯು 'ಪ್ರಜಾವಾಣಿ'ಯ ನವೆಂಬರ್ 29ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ ಇರಲಿದೆ.

ಭವಿಷ್ಯ ಹೇಳುವ ನೆಪ: ಯುವತಿಗೆ ₹2.05 ಲಕ್ಷ ವಂಚನೆ

ಬೆಂಗಳೂರು: ಆಡುಗೋಡಿ ಠಾಣೆ ವ್ಯಾಪ್ತಿಯ ಪೇಯಿಂಗ್ ಗೆಸ್ಟ್‌ನಲ್ಲಿ (ಪಿ.ಜಿ) ವಾಸವಾಗಿದ್ದ ಯುವತಿಗೆ ಭವಿಷ್ಯ ಹೇಳುವ ನೆಪದಲ್ಲಿ ₹2.05 ಲಕ್ಷ ವಂಚಿಸಿರುವ ಘಟನೆ ನಡೆದಿದೆ.

21 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಚಂದ್ರಶೇಖರ್ ಸುಗತ್ ಗುರೂಜಿ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ 'ಕಷ್ಟಕ್ಕೆ ಪರಿಹಾರ' ಎಂಬ ಜಾಹೀರಾತು ಗಮನಿಸಿದ ಯುವತಿ, ತನಗೆ ಮದುವೆ ಆಗುತ್ತದೆಯೇ ಎಂಬ ಬಗ್ಗೆ ವಿಚಾರಿಸಿದ್ದಾರೆ. ಅದಕ್ಕೆ ಹಣ ಖರ್ಚಾಗುತ್ತದೆ ಎಂದು ಗುರೂಜಿ ಹೇಳಿದ್ದಾರೆ. ಗುರೂಜಿ ನೀಡಿದ ನಂಬರ್‌ಗೆ ಆನ್‌ಲೈನ್ ಮೂಲಕ ಹಂತ ಹಂತವಾಗಿ ₹2.05 ಲಕ್ಷ ವರ್ಗಾವಣೆ ಮಾಡಿದ್ದಾರೆ. ನಂತರ ಮತ್ತೆ ₹4 ಲಕ್ಷ ಕೇಳಿದಾಗ ಯುವತಿಗೆ ಅನುಮಾನ ಬಂದಿದೆ.

'ಮದುವೆ ಬಗ್ಗೆ ಸುಳ್ಳು ಮಾಹಿತಿ ನೀಡಿದ್ದರಿಂದ ಹಣ ವಾಪಸ್ ಕೇಳಿದೆ. ಹಣ ನೀಡುವುದಿಲ್ಲ ಎಂದು ಗುರೂಜಿ ಬೆದರಿಕೆ ಹಾಕಿದ್ದಾರೆ' ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಹಣ ವರ್ಗಾವಣೆ, ಮಾತುಕತೆ ಎಲ್ಲವೂ ಆನ್‌ಲೈನ್ ಮೂಲಕ ನಡೆದಿದೆ. ಪ್ರಕರಣದ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064.
ವೆಬ್ ಸೈಟ್ : www.Indianrailways.gov.in

ಇ ಟೆಂಡರ್ ಸೂಚನೆ
ಸಂ: ಆರ್ ಡಬ್ಲ್ಯೂಎಫ್/ಎಸ್/146/2025–26/12
ದಿನಾಂಕ. 30/12/2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಅನುಭವಿ ಹಾಗೂ ಪ್ರತಿಷ್ಠಿತ ಗುತ್ತಿಗೆದಾರರಿಂದ ಕೆಳಕಂಡ ಕೆಲಸಗಳಿಗೆ ಇಲೆಕ್ಟ್ರಾನಿಕ್ ಟೆಂಡರ್‌ಗಳನ್ನು www.ireps.gov.in ವೆಬ್‌ಸೈಟ್ ಮೂಲಕ ಆಹ್ವಾನಿಸಿದ್ದಾರೆ.
ಟೆಂಡರ್ ಸಂಖ್ಯೆ: ಆರ್ ಡಬ್ಲ್ಯೂಎಫ್‌ಎಸ್ ಡಬ್ಲ್ಯೂಓಆರ್ ಕೆಎಸ್_ಇಆರ್ ಸಿ1st ಸ್ಲಾಬ್_25–26, **ದೂರದ ಮಿತಿ:** 0–500 ಕಿ.ಮೀ. (ಕನಿಷ್ಠ ಬಿಲ್ ಮಾಡುವ ದೂರ 100 ಕಿ.ಮೀ.), **ಪ್ರಮಾಣ:** 3600 ಮೆಟ್ರಿಕ್ ಟನ್, **ಅಂದಾಜು ವೆಚ್ಚ:** ರೂ. 1,56,06,000, **ಇ.ಎಂ.ಡಿ ಮೊತ್ತ:** ರೂ. 2,28,000, **ಟೆಂಡರ್ ಕೊನೆ ಗೊಳ್ಳುವ ದಿನಾಂಕ ಮತ್ತು ಸಮಯ:** 20/01/2026 ಮಧ್ಯಾಹ್ನ 2.15 ಗಂಟೆ
ಟೆಂಡರ್ ಸಂಖ್ಯೆ: ಆರ್ ಡಬ್ಲ್ಯೂ ಎಫ್‌ಎಸ್ ಟಿಪಿಟಿ_ಸಿಡಬ್ಲ್ಯೂಡಿ_1st ಸ್ಲಾಬ್ _2526, **ದೂರದ ಮಿತಿ:** 0 (ಶೂನ್ಯ) ರಿಂದ 500 ಕಿ.ಮೀ., **ಪ್ರಮಾಣ:** 11,900 ಮೆಟ್ರಿಕ್ ಟನ್, **ಅಂದಾಜು ವೆಚ್ಚ:** ರೂ. 2,75,48,500, **ಇ.ಎಂ.ಡಿ ಮೊತ್ತ:** ರೂ. 2,87,800, ಕೆಲಸದ ವ್ಯಾಪ್ತಿ ಹಾಗೂ ವಿಶೇಷ ಸೂಚನೆಗಳಿಗಾಗಿ ಆರ್ ಡಬ್ಲ್ಯೂಎಫ್ ಮತ್ತು ಐಆರ್ ಇಪಿಎಸ್ ವೆಬ್‌ಸೈಟ್‌ಗಳನ್ನು ಪರಿಶೀಲಿಸಿ, **ಒಪ್ಪಂದದ ಅವಧಿ:** ಸ್ವೀಕೃತಿ ಪತ್ರ (LOA) ನೀಡಿದ ದಿನಾಂಕದಿಂದ ಕನಿಷ್ಠ 12 (ಹನ್ನೆರಡು) ತಿಂಗಳುಗಳು, **ಟೆಂಡರ್ ಕೊನೆ ಗೊಳ್ಳುವ ದಿನಾಂಕ ಮತ್ತು ಸಮಯ:** 02/02/2026 ಮಧ್ಯಾಹ್ನ 2.15 ಗಂಟೆ
ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಓಂ ಶಕ್ತಿ ಮಾಲಾಧಾರಿಗಳ ಮೇಲೆ ಕಲ್ಲೆಸೆತ

ತೇರು ಎಳೆಯುವ ವೇಳೆ ದುಷ್ಕೃತ್ಯ
• ಬಿಗುವಿನ ವಾತಾವರಣ ನಿರ್ಮಾಣ

ಪ್ರಮುಖ ಅಂಶಗಳು
- ಜೆ.ಜೆ.ನಗರದ ವಿ.ಎಸ್ ಗಾರ್ಡನ್ ಬಳಿ ನಡೆದಿರುವ ಘಟನೆ
- ಬಾಲಕಿ, ಇಬ್ಬರು ಮಹಿಳೆಯರಿಗೆ ಗಾಯ
- ಕೆಎಸ್‌ಆರ್‌ಪಿ ತುಕಡಿ ನಿಯೋಜನೆ, ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ, ಪರಿಶಿಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವಿಯ ತೇರು ಎಳೆಯುವ ವೇಳೆ ಓಂ ಶಕ್ತಿ ಮಾಲಾಧಾರಿಗಳ ಮೇಲೆ ದುಷ್ಕರ್ಮಿಗಳು ಕಲ್ಲು ತೂರಿರುವ ಘಟನೆ ಜೆ.ಜೆ. ನಗರ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ನಡೆದಿದ್ದು, ಸ್ಥಳದಲ್ಲಿ ಕೆಲ ಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು

ಜೆ.ಜೆ.ನಗರದ ವಿ.ಎಸ್ ಗಾರ್ಡನ್ ಓಂ ಶಕ್ತಿ ದೇವಸ್ಥಾನದ ಬಳಿ ಭಾನುವಾರ ರಾತ್ರಿ 8 ಗಂಟೆಗೆ ಈ ಘಟನೆ ನಡೆದಿದೆ.

ಘಟನೆಯಲ್ಲಿ ವರದರಾಜನ್ ಅವರ ಮಗಳ ತಲೆಗೆ ಗಂಭೀರವಾದ ಗಾಯವಾಗಿದೆ. ಜತೆಗೆ ಇಬ್ಬರು ಮಹಿಳೆಯರ ಕಾಲಿಗೆ ಗಾಯವಾಗಿದೆ.

ಸ್ಥಳಕ್ಕೆ ಜೆ.ಜೆ ನಗರ ಠಾಣೆ ಪೊಲೀಸರು, ಎಸಿಪಿ ಭರತ್‌ರೆಡ್ಡಿ ಹಾಗೂ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಠಾಣೆ ಮುಂದೆ ಪ್ರತಿಭಟನೆ: ಕಲ್ಲು ತೂರಿದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಓಂ ಶಕ್ತಿ ಮಾಲಾಧಾರಿಗಳು ಮತ್ತು ನೂರಾರು ಸ್ಥಳೀಯರು ಜೆ.ಜೆ ನಗರ ಠಾಣೆ ಮುಂದೆ ಜಮಾಯಿಸಿ ಪ್ರತಿಭಟನೆ ನಡೆಸಿದರು.

ಮುಂಜಾಗ್ರತಾ ಕ್ರಮವಾಗಿ ದೇಗುಲದ ಮುಂದೆ ಹಾಗೂ ಜೆ.ಜೆ ನಗರ ಠಾಣೆ ಮುಂದೆ ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾಗಿದೆ. ಪೊಲೀಸರು ಪ್ರತಿಭಟನಕಾರರ ಮನವೊಲಿಸಿ ಸ್ಥಳದಿಂದ ತೆರಳುವಂತೆ ಸೂಚಿಸಿದರು. ಇದಕ್ಕೆ ಜಗ್ಗದೇ ನೂರಾರು ಮಂದಿ ಪ್ರತಿಭಟನೆ ನಡೆಸಿ ನ್ಯಾಯಕ್ಕಾಗಿ ಘೋಷಣೆ ಕೂಗಿದರು. ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

'ಮಾರಮ್ಮ ದೇವಾಲಯದ ಬಳಿ ಕಳೆದ ಬಾರಿ ಅನ್ಯಕೋಮಿನವರು ಕಲ್ಲು ತೂರಿದ್ದರು. ಇತ್ತೀಚೆಗೆ ಅಯ್ಯಪ್ಪನ ಭಜನೆ ಮಾಡುತ್ತಿರುವಾಗ ಅನ್ಯಕೋಮಿನವರು ನೀರಿನ ಬಾಟಲ್‌ಗಳನ್ನು ತೂರಿದ್ದರು. ಈ ರೀತಿಯ ಘಟನೆ 3-4 ಬಾರಿ ಆಗಿದೆ. ಕಲ್ಲು ತೂರಿದ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಕಲ್ಲು ಎಸೆದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಬಾಲಕಿ ತಂದೆ ವರದರಾಜನ್ ಆಗ್ರಹಿಸಿದರು.

ಕಲ್ಲು ತೂರಾಟ ನಡೆಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮಾಲಾಧಾರಿಗಳು ಮತ್ತು ಸ್ಥಳೀಯರು ಜೆ.ಜೆ.ನಗರ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು (ಬಲಚಿತ್ರ) ಘಟನಾ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದರು –ಪ್ರಜಾವಾಣಿ ಚಿತ್ರಗಳು

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಹೊಸ ಘಳಿಗೆ ಆರಂಭದ ಶುಭ ಸೂಚನೆ

ಆನೇಕಲ್: ರಾಜ್ಯದಲ್ಲಿ ಹೊಸ ಘಳಿಗೆ, ಹೊಸ ದಿನಗಳು ಆರಂಭವಾಗುವ ಶುಭ ಸೂಚನೆಗಳು ಕಾಣಿಸುತ್ತಿವೆ ಎಂದು ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಸುಳಿವು ನೀಡಿದ್ದಾರೆ.

ಒಕ್ಕಲಿಗರ ಸಂಘ ಬನ್ನೇರುಘಟ್ಟದಲ್ಲಿ ಭಾನುವಾರ ಒಕ್ಕಲಿಗ ಸಮುದಾಯದ ಜನಪ್ರತಿನಿಧಿಗಳಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಅವಕಾಶ ಸಿಕ್ಕಾಗ ಸಮಾಜದ ಪ್ರತಿಯೊಬ್ಬರು ಡಿ.ಕೆ.ಶಿವಕುಮಾರ್ ಅವರ ಜೊತೆ ಗಟ್ಟಿಯಾಗಿ ನಿಲ್ಲಬೇಕು ಎಂದು ಅವರು ಒಕ್ಕಲಿಗ ಸಮುದಾಯದಕ್ಕೆ ಮನವಿ ಮಾಡಿದರು.



ಡಿ.ಕೆ.ಶಿವಕುಮಾರ್ ಅವರಿಗೆ ರಾಜಕೀಯ ಶಕ್ತಿ ದೊರೆಯುವಂತಾಗಲು ಪ್ರತಿಯೊಬ್ಬರೂ ಸಹಕಾರ ನೀಡಬೇಕು. ದೇವೇಗೌಡರು ಒಕ್ಕಲಿಗ ಸಮುದಾಯದ ಪ್ರಶ್ನಾತೀತ ನಾಯಕ. ಅವರಿಗೆ ನೀಡಿದ ಸಹಕಾರವನ್ನು ಶಿವಕುಮಾರ್ ಅವರಿಗೂ ನೀಡುವುದರಿಂದ ಒಕ್ಕಲಿಗ ಸಮುದಾಯದ ನಾಯಕನಿಗೆ ರಾಜ್ಯದಲ್ಲಿ ಉನ್ನತ ರಾಜಕೀಯ ಸ್ಥಾನಮಾನ ದೊರೆಯುತ್ತದೆ ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್ ಹೇಳಿದರು.

ಲಿಂಗರಾಜಪುರ: ಕಲುಷಿತ ನೀರು ತಡೆಗೆ ಮುಂದಾದ ಜಲಮಂಡಳಿ

ಬೆಂಗಳೂರು: ಲಿಂಗರಾಜಪುರ ಪ್ರದೇಶದಲ್ಲಿ ಕಲುಷಿತ ನೀರು ಪೂರೈಕೆಯಾಗುತ್ತಿರುವ ಬಗ್ಗೆ ದೂರುಗಳು ಬರುತ್ತಿರುವ ಕಾರಣ, ರೋಬೋಟಿಕ್ ತಂತ್ರಜ್ಞಾನ ಬಳಸಿ ಇದರ ಮೂಲವನ್ನು ನಿಖರವಾಗಿ ಮತ್ತು ತ್ವರಿತವಾಗಿ ಪತ್ತೆಹಚ್ಚಲು ಜಲಮಂಡಳಿ ಮುಂದಾಗಿದೆ.

ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಸಮಸ್ಯೆ ಇರುವ ಪ್ರದೇಶಗಳಲ್ಲಿ ನೀರು ಸರಬರಾಜನ್ನು ಸ್ಥಗಿತಗೊಳಿಸಲಾಗಿದೆ.

ದುರಸ್ತಿ ಕಾರ್ಯದ ಸಮಯದಲ್ಲಿ ನಿವಾಸಿಗಳಿಗೆ ನೀರಿನ ಅಭಾವ ಉಂಟಾಗದಂತೆ ನೋಡಿಕೊಳ್ಳಲು, ಜಲಮಂಡಳಿ ಈಗಾಗಲೇ ಸಂಚಾರಿ ಕಾವೇರಿ ಮೊಬೈಲ್ ಟ್ಯಾಂಕರ್‌ಗಳನ್ನು ನಿಯೋಜಿಸಿದೆ.

'ಇಡೀ ಪ್ರದೇಶವನ್ನು ಅಗೆಯುವ ಬದಲು, ದೋಷವಿರುವ ಜಾಗ ಪತ್ತೆಹಚ್ಚಲು ಲಭ್ಯವಿರುವ ಎಲ್ಲ ತಾಂತ್ರಿಕ ಸಂಪನ್ಮೂಲ ಬಳಸುತ್ತಿದ್ದೇವೆ. ಸೋಮವಾರ ಸಂಜೆಯೊಳಗೆ ಮೂಲ ಪತ್ತೆಹಚ್ಚಿ, ಪೈಪ್‌ಲೈನ್ ಸರಿಪಡಿಸಿದ ನಂತರ ಶುದ್ಧ ನೀರು ಪೂರೈಸಲಾಗುವುದು' ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಫ್ಲ್ಯಾಟ್‌ನಲ್ಲಿ ಬೆಂಕಿ ಅವಘಡ: ಟೆಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು:ರಾಮಮೂರ್ತಿನಗರ ಬಳಿಯ ಸುಬ್ರಹ್ಮಣ್ಯ ಲೇಔಟ್‌ನ ವಸತಿ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ಶನಿವಾರ ರಾತ್ರಿ ಅಗ್ನಿ ಅನಾಹುತ ಸಂಭವಿಸಿದ್ದು, ಘಟನೆಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಶರ್ಮಿಳಾ (34) ಮೃತಪಟ್ಟಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಶರ್ಮಿಳಾ ಅವರು ಸ್ನೇಹಿತೆಯ ಜತೆ ಫ್ಲ್ಯಾಟ್‌ನಲ್ಲಿ ವಾಸವಾಗಿದ್ದರು. ಅವರು ಬೆಳ್ಳಂದೂರಿನ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಶರ್ಮಿಳಾರ ಸ್ನೇಹಿತೆ ರಜೆಯ ಕಾರಣ ಕೆಲ ದಿನಗಳ ಹಿಂದೆ ಊರಿಗೆ ಹೋಗಿದ್ದರು. ಹೀಗಾಗಿ, ಅವರು ಒಬ್ಬರೇ ಫ್ಲ್ಯಾಟ್‌ನಲ್ಲಿ ಇದ್ದರು. ರಾತ್ರಿ ವಿದ್ಯುತ್ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಹೊತ್ತಿಕೊಂಡಿದೆ. ಈ ವೇಳೆ ಗಾಢ ನಿದ್ದೆಯಲ್ಲಿದ್ದ ಕಾರಣ ಬೆಂಕಿ ಹೊತ್ತಿಕೊಂಡಿರುವುದು ತಕ್ಷಣವೇ ಅವರ ಗಮನಕ್ಕೆ ಬಂದಿಲ್ಲ. ಬಳಿಕ ಮನೆಯ ತುಂಬೆಲ್ಲಾ ಹೊಗೆ ಆವರಿಸಿಕೊಂಡಿದೆ. ಸಾಕಷ್ಟು ಸಮಯದ ಬಳಿಕ ಎಚ್ಚರಗೊಂಡ ಶರ್ಮಿಳಾ, ಫ್ಲ್ಯಾಟ್‌ನಿಂದ ಹೊರ ಬರಲಾಗದೆ ಉಸಿರುಗಟ್ಟಿ ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಫ್ಲ್ಯಾಟ್‌ನಿಂದ ಹೊಗೆ ಬರುತ್ತಿರುವುದನ್ನು ನೋಡಿದ ನೆರೆಹೊರೆಯವರು ಠಾಣೆಗೆ ಮಾಹಿತಿ ನೀಡಿದರು. ಬಳಿಕ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಅವರು ಮೃತಪಟ್ಟಿರುವುದು ಗೊತ್ತಾಯಿತು.

ಸಿಲಿಂಡರ್‌ನಿಂದ ಅಡುಗೆ ಅನಿಲ ಸೋರಿಕೆ ಯಾಗಿರುವ ಯಾವುದೇ ಕುರುಹುಗಳಿಲ್ಲ. ಹೀಗಾಗಿ, ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡು ಈ ಅವಘಡ ನಡೆದಿದೆ ಎಂದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಫ್ಲ್ಯಾಟ್‌ನಲ್ಲಿದ್ದ ಪೀಠೋಪಕರಣಗಳು, ಎಲೆಕ್ಟ್ರಾನಿಕ್ ವಸ್ತುಗಳು ಸುಟ್ಟು ಹೋಗಿವೆ. ರಾಮಮೂರ್ತಿನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಲಾರಿ ಡಿಕ್ಕಿ: ಬೈಕ್ ಸವಾರ ದುರ್ಮರಣ

ಬೆಂಗಳೂರು: ನಗರದ ನಾಗರಬಾವಿಯ ಮಲೆ ಮಹದೇಶ್ವರ ದೇವಸ್ಥಾನದ ಬಳಿ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟಿರುವ ಘಟನೆ ನಡೆದಿದೆ.

'ನಮ್ಮೂರ ತಿಂಡಿ' ಸಮೀಪದ ದೇವಸ್ಥಾನ ಬಳಿ ಶನಿವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತುಮರಿ ಗ್ರಾಮದ ಪ್ರಕಾಶ್ ಎಂ. ಡಿ. (29) ಮೃತಪಟ್ಟಿದ್ದಾರೆ. ಹಿಂಬದಿ ಸವಾರನಿಗೆ ಸಣ್ಣ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ನೇಹಿತನ ಜತೆ ಬೈಕ್‌ನಲ್ಲಿ ಪರಿಚಯಸ್ಥರೊಬ್ಬರ ಮಗುವಿನ ಜನ್ಮದಿನ ಕಾರ್ಯಕ್ರಮಕ್ಕೆ ಹೋಗಿ ವಾಪಸ್ ಆಗುತ್ತಿದ್ದ ವೇಳೆ, ಲಾರಿ ಡಿಕ್ಕಿ ಹೊಡೆದಿದೆ.

ಪ್ರಕಾಶ್ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಸಾವಿಗೀಡಾದರು. ಗೋಲ್ಡ್ ಲೋನ್ ಖಾಸಗಿ ಕಂಪನಿಯಲ್ಲಿ ಪ್ರಕಾಶ್ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರು. ಜ್ಞಾನ ಭಾರತಿ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಲಾರಿ ವಶಕ್ಕೆ ಪಡೆದು, ಚಾಲಕನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೈಲಿನಲ್ಲಿ ಮೊಬೈಲ್, ಸಿಮ್ ಕಾರ್ಡ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ದಲ್ಲಿ ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಬಂದಿಗಳಿರುವ ವಿವಿಧ ಬ್ಯಾರಕ್‌ಗಳಲ್ಲಿ ಜೈಲಿನ ಸಿಬ್ಬಂದಿ ದಾಳಿ ನಡೆಸಿ ಪರಿಶೀಲಿಸಿದಾಗ ಮೊಬೈಲ್ ಹಾಗೂ ಸಿಮ್ ಕಾರ್ಡ್‌ಗಳು ಪತ್ತೆಯಾಗಿವೆ.

'ಕಾರಾಗೃಹ ಸುಧಾರಣಾ ಸಂಕಲ್ಪ ಅಭಿಯಾನ'ದ ಅಡಿ ಶನಿವಾರ ಅಧಿಕಾರಿಗಳ ತಂಡ ತಪಾಸಣೆ ನಡೆಸಿದ ವೇಳೆ ಐದು ಮೊಬೈಲ್, ಆರು ಸಿಮ್ ಕಾರ್ಡ್, ಚಾರ್ಜರ್ ಕೇಬಲ್, ಇಯರ್ ಫೋನ್ ದೊರೆತಿದೆ.

ಕಾರಾಗೃಹ ಮುಖ್ಯ ಅಧೀಕ್ಷಕರ ದೂರಿನ ಮೇರೆಗೆ ಮೊಬೈಲ್ ಸಾಗಿಸಿದವರು, ಇದಕ್ಕೆ ಸಹಕರಿಸಿದವರು ಹಾಗೂ ನಿಷೇಧಿತ ವಸ್ತುವನ್ನು ಕಾರಾಗೃಹದಲ್ಲಿ ಉಪಯೋಗಿಸಿದವರ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಮಹಾ ನಿರ್ದೇಶಕ ಅಲೋಕ್ ಕುಮಾರ್ ಅವರು ಅನಿರೀಕ್ಷಿತ ತಪಾಸಣೆ ವೇಳೆ ಭಾಗಿಯಾದ ಅಧಿಕಾರಿ ಮತ್ತು ಸಿಬ್ಬಂದಿಗೆ ₹10 ಸಾವಿರ ನಗದು ಬಹುಮಾನ ಮತ್ತು ಪ್ರಶಂಸಾ ಪತ್ರ ನೀಡಿ ಗೌರವಿಸಿದ್ದಾರೆ.

ಕ್ಯಾಬ್ ಚಾಲಕ, ಬೈಕ್ ಸವಾರ ಗಲಾಟೆ

ದೇವನಹಳ್ಳಿ: ಕೆಂಪೇಗೌಡ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣ ಮುಖ್ಯ ರಸ್ತೆಯಲ್ಲಿ ಕ್ಯಾಬ್ ಹಾಗೂ ಬೈಕ್ ಚಾಲಕರ ನಡುವೆ ಕ್ಷುಲ್ಲಕ ವಿಚಾರಕ್ಕೆ ಗಲಾಟೆ ನಡೆದಿದ್ದು, ಈ ಸಂಬಂಧದ ರಸ್ತೆ ರಂಪಾಟದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ವಿಮಾನ ನಿಲ್ದಾಣ ಪ್ರವೇಶಕ್ಕೂ ಮುನ್ನ ಇರುವ ಸಿಐಎಸ್‌ಎಫ್ ನಾಕಾ ಚೆಕ್‌ಪೋಸ್ಟ್ ಸಮೀಪ ಶನಿವಾರ ರಾತ್ರಿ (ಜ.3) ಘಟನೆ ನಡೆದಿದೆ ಎನ್ನಲಾಗಿದೆ.

ಕ್ಯಾಬ್‌ನಲ್ಲಿದ್ದ ಮಹಿಳೆ ಮತ್ತು ಬೈಕ್ ಸವಾರ ಇಬ್ಬರು ಪ್ರೇಮಿಗಳು ಎಂದು ಮೂಲಗಳು ತಿಳಿಸಿವೆ.

ವಿಜಯಲಕ್ಷ್ಮೀಗೆ ಅಶ್ಲೀಲ ಸಂದೇಶ ಕಳುಹಿಸಿದ ಪ್ರಕರಣ
ಬಂಕ್ ಮ್ಯಾನೇಜರ್, ಲೆಕ್ಕಪರಿಶೋಧಕ ಸೆರೆ

ಬೆಂಗಳೂರು: ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಸಂದೇಶ ಕಳುಹಿಸಿ, ಬೆದರಿಕೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೆಟ್ರೋಲ್ ಬಂಕ್ ಮ್ಯಾನೇಜರ್ ಹಾಗೂ ಲೆಕ್ಕಪರಿಶೋಧಕರೊಬ್ಬರನ್ನು ಸೈಬರ್ ಅಪರಾಧ ಠಾಣೆಯ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ವಿಜಯಲಕ್ಷ್ಮಿ

ಹುಬ್ಬಳ್ಳಿಯ ಕೇಶವಪುರ ನಿವಾಸಿ ಪೆಟ್ರೋಲ್ ಬಂಕ್ ಮ್ಯಾನೇಜರ್ ನಾಗರಾಜ್ ಗುಳ್ಳಪ್ಪ ತಳವಾರ ಮತ್ತು ಧಾರವಾಡದ ಯಳವಾಲ ನಿವಾಸಿ ಲೆಕ್ಕಪರಿಶೋಧಕ ಪ್ರಶಾಂತ್ ತಳವಾರ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

ಆರೋಪಿಗಳ ಬಂಧನಕ್ಕೆ ಮೂರು ವಿಶೇಷ ತಂಡ ರಚಿಸಲಾಗಿತ್ತು. ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಲಾಗಿದ್ದು, ಇದರೊಂದಿಗೆ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ನಾಲ್ಕಕ್ಕೇರಿದೆ. ಉಳಿದ 14 ಖಾತೆಗಳ ಕುರಿತು ತನಿಖೆ ಮುಂದುವರಿಸಲಾಗಿದೆ. ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ವಿಜಯಲಕ್ಷ್ಮಿ ಅವರು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ಡಿ.24ರಂದು ದೂರು ನೀಡಿದ್ದರು. ಇದನ್ನು ಆಧರಿಸಿ ಯೋಗಿ 'ಕಿಚ್ಚ', ಮಿ.ಅನಾಥ, ಮಹಿ 'ಕಿಚ್ಚ', ವಿರಾಟ್ 'ಕಿಚ್ಚ' ಹೆಸರಿನಲ್ಲಿದ್ದ ಖಾತೆ ಸೇರಿದಂತೆ 18 ಇನ್‌ಸ್ಟಾಗ್ರಾಂ ಖಾತೆಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ದೂರು ದಾಖಲಾದ ಮೇಲೆ ಎಚ್ಚೆತ್ತುಕೊಂಡಿದ್ದ ಆರೋಪಿಗಳು, ಪೋಸ್ಟ್ ಅಳಿಸಿ ಹಾಕಿದ್ದರು. ಆದರೆ, ಐ.ಪಿ ವಿಳಾಸದ ಮೂಲಕ ಆರೋಪಿಗಳ ಮೂಲ ಪತ್ತೆ ಮಾಡಿ, ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

I, DEEKSHANTH NARASIMHA, Residing at #4, Doddabidarakallu Nagasandra Post, Bangalore-73 have changed my name as DEEKSHANTH NARASIMHA. K.A. vide affidavit dated 02/01/2026 before Notary V.Anjanappa Bangalore

I, MAHESH LAXMANA POOJARY, residing at Kundapura, Udupi-576230 have changed my name as MAHESH LAXMAN POOJARY, vide affidavit dated 03/01/2026 before Notary K.S. Bammappanavar, Bengaluru

I, NAVYA, Residing at Bengaluru- 560108 have changed my name as NAVYA JHA, vide affidavit dated 03/01/2026 before Notary K.S. Bammappanavar, Bengaluru

REAL ESTATE SELLING

Sites

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD
THANKSGIVING
Book your Thanksgiving Advertisement in Deccan Herald for
ANNUAL FEAST OF INFANT JESUS ON
14th January 2026
@ 2100 with GST
(Size 4cmx5cm)
For more Details Contact:
Ph :080 - 45557163 | 164 | 9731810277

IHCL
THE INDIAN HOTELS COMPANY LIMITED
E-TENDER NOTICE
Invite quotations from established suppliers for the supply of the following items on an Annual Rate Contract basis from **1st April 2026 to 31st March 2027 for Taj West End Bengaluru, Taj Bangalore Airport, Taj Yeshwantpur Bengaluru, Taj MG Road Bengaluru, Vivanta Bengaluru Residency Road, Vivanta Bengaluru Whitefield, and Taj SATS Air Catering Limited Bengaluru of Karnataka for the below-mentioned categories:**
A) Atta-Maida, Dry Fruits, English Vegetables, Fish Fillet, Fish, Flowers, Fruits, Green Peas & Corn, Imported Vegetables and Fruits, Mutton, Eggs, Peeled Items, Provisions, Shredded Coconut, Vegetables, Milk, Milk Products, Seafood, Charcoal, Buffalo Meat, Tofu, Ice Cubes, Microgreens, Pork, Fresh Noodles, Bakery Products, Poultry, Dry Ice,Coconut.
Vendors can register by accessing the link below to obtain the registration forms/tender forms. Quotations must be submitted online only; printed or physical copies will not be accepted.The E-Tender online portal will be available from **5th January 2026 till 19th January 2026** using the credentials provided.
For tender form allocation, those who aspire to apply should remit Rs.1,000.00 (non-refundable) online for obtaining the tender forms in each category. Completed tender forms along with quotations must be submitted online on or before **19th January 2026.**
All tenderers proposing to apply should note; All tenderers must possess mandatory licenses required to conduct business and comply with FSSAI Act, rules, and regulations applicable at all times. Certification/labelling for all products and temperature control for chilled and frozen items as per FSSAI standards is mandatory. HACCP/ISO-certified vendors will be preferred.
The window for submitting initial rates will remain open until 12:00 AM on 19th January 2026.
WE THE MANAGEMENT OF "The Indian Hotels Company Limited" RESERVE THE RIGHT TO ACCEPT / REJECT THE QUOTATIONS.
Contact: Mr. Mohan Papanna
Email: mohan.papanna@tajhotels.com
Contact: 08066605627 / 08066604367 / 08066900233
Link for downloading Tender Documents & for participating in E-Tender:https://etendering.tajhotels.com/bengaluru
TAJ CLARIDGES SELEQTIONS GATEWAY VIVANTA GINGER TREE OF LIFE ama Qmin TAJ sats

कार्यालय कार्यपालन यंत्री
नया भोपाल संभाग लोक निर्माण विभाग, भोपाल (म.प्र.)
निविदा सूचना
निविदा सूचना क्रमांक 34/व.ले.लि./2025–26 भोपाल, दिनांक 24.12.2025
निम्नलिखित कार्यों हेतु निविदायें आमंत्रित की जाती हैं। उल्लेखित कार्य का विस्तृत विवरण वेबसाइट mptenders.gov.in पर देखा जा सकता है।

1	2	3	4	5	6
क्र.	पोर्टल टेंडर क्र.	कार्य का नाम	आमंत्रण क्र.	ठेके की अनु. राशि (लाख में)	अमानत राशि
1	2025_PWDRB_471160_1	नया भोपाल संभाग, लो.नि.वि. भोपाल अंतर्गत उपसंभाग क्र.–3 के मुख्य मार्ग क्र.–3 (नेहरु नगर से प्रशासनिक अकादमी), 7 न. से ओल्ड कैम्पियन स्कूल, ओल्ड कैम्पियन स्कूल से मुख्य मार्ग क्र.–3, 11 नं. स्टॉप से 12 नं. स्टॉप, 1100 चौराहा से भोजपुर क्लब, 74 बंगला के पहुंचमार्ग में एस.टी.एम.सी. कार्य।	प्रथम आमंत्रण	84.98	84980.00
2	2025_PWDRB_471163_1	नया भोपाल संभाग, लो.नि.वि. भोपाल अंतर्गत उपसंभाग क्र.–3 के शाहपुरा बावड़िया रोड नं. 2, 3 एवं 130 फीट चौड़ा मार्ग कोटरा सुल्तानाबाद में पी.बी.एम.सी. का कार्य (समूह–अ)	प्रथम आमंत्रण	405.78	405780.00
3	2025_PWDRB_471164_1	नया भोपाल संभाग, लो.नि.वि. भोपाल अंतर्गत उपसंभाग क्र.–3 के 80 फीट एवं 150 फीट चौड़ा मार्ग कोटरा सुल्तानाबाद में पी.बी.एम.सी. कार्य (समूह–ब)	प्रथम आमंत्रण	382.70	382700.00
		योग:–		873.46	

उपरोक्त वेबसाइट ऑनलाइन भुगतान करने के उपरान्त पी.बी.एम.सी. एवं एस.टी.एम.सी. निविदा प्रपत्र (टेंडर डाक्यूमेंट) वेबसाइट के माध्यम से प्राप्त हो सकेगा। निविदा प्रपत्र क्रय एवं सबमिशन करने की अंतिम तिथि 07.01.2026 सायं 5.30 बजे निर्धारित है। निविदा में किसी भी प्रकार का संशोधन होने पर उसे उपरोक्त वेबसाइट पर देखा जा सकेगा। विस्तृत एन.आई.टी. एवं अन्य जानकारी उपरोक्त वेबसाइट में देखी जा सकती है।
कार्यपालन यंत्री
नया भोपाल संभाग लो.नि.वि. भोपाल (म.प्र.)
G-23817/25

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ನಿತ್ಯ ಕಸ ಸಂಗ್ರಹಿಸಲು ಒತ್ತಾಯ'

ಮನೆ ಬಾಗಿಲಿಗೆ ಬಂದು ಹಸಿ ಮತ್ತು ಒಣ ಕಸ ಸಂಗ್ರಹಿಸುವ ವ್ಯವಸ್ಥೆ ಜಾರಿಯಲ್ಲಿದೆ. ಆದರೆ ಪಾಲಿಕೆಯ ಪೌರ ಕಾರ್ಮಿಕರ ನಿರ್ಲಕ್ಷ್ಯದಿಂದ ಮನೆ ಬಾಗಿಲಿಗೆ ಬಂದು ತ್ಯಾಜ್ಯ ಸಂಗ್ರಹಿಸುವ ಕೆಲಸ ನಡೆಯುತ್ತಿಲ್ಲ. ಇದರಿಂದ ಒಬ್ಬರೇ ವಾಸಿಸುವ ವೃದ್ಧರಿಗೆ ತೊಂದರೆ ಆಗುತ್ತಿದೆ. ಕಸ ಸಂಗ್ರಹಿಸಲು ದಿನನಿತ್ಯ ಮನೆಗೆ ಬರಬೇಕಾದ ಪೌರಕಾರ್ಮಿಕರು ವಾರಗಟ್ಟಲೆಯಾದರೂ ಬಾರದೇ ಇರುವುದರಿಂದ, ಮನೆಯಲ್ಲಿ ಸಂಗ್ರಹವಾದ ಕಸ ಗಬ್ಬೆದ್ದು ನಾರುತ್ತಿದ್ದು, ಅನಾರೋಗ್ಯದ ಸಮಸ್ಯೆಗೂ ಕಾರಣವಾಗುತ್ತಿದೆ. ಚಾಮುಂಡಿ ನಗರ ಬಿಡಿಎ ಲೇಔಟ್‌ನ ದೀಪಾಂಜಲಿ ನಗರದ 158ನೇ ವಾರ್ಡ್‌ನಲ್ಲಿ ಈ ಸಮಸ್ಯೆ ಹೆಚ್ಚಾಗಿದೆ. ಈ ಬಗ್ಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಎಸ್. ಶಿವಪ್ರಸಾದ್, ದೀಪಾಂಜಲಿನಗರ

'ಕಸ ಸಂಗ್ರಹಿಸದ ಪೌರಕಾರ್ಮಿಕರು'

ಕಮಲಾನಗರ ಮುಖ್ಯರಸ್ತೆಯ ಮನೆ–ಮನೆಗೆ ತೆರಳಿ ಕಸ ಸಂಗ್ರಹಿಸುವ ಕೆಲಸ ಆಗುತ್ತಿಲ್ಲ. ಒಣ ಕಸ ಹಾಗೂ ಹಸಿ ಕಸವನ್ನು ವಿಂಗಡಿಸಿ ಕಸದ ಬುಟ್ಟಿಯಲ್ಲಿ ಇಟ್ಟರೂ ಪಾಲಿಕೆಯ ಪೌರಕಾರ್ಮಿಕರು ಸಂಗ್ರಹಿಸಿಕೊಂಡು ಹೋಗುತ್ತಿಲ್ಲ. ಈ ಬಗ್ಗೆ ವಿಚಾರಿಸಿದರೆ ಮೇಲ್ವಿಚಾರಕರೊಂದಿಗೆ ಮಾತನಾಡಿ ಎಂದು ದೂರವಾಣಿ ಸಂಖ್ಯೆ ನೀಡುತ್ತಿದ್ದಾರೆ. ಅವರಿಗೆ ಕರೆ ಮಾಡಿ, ದೂರು ನೀಡಿದರೆ, ಸಂಬಂಧಪಟ್ಟ ಮಾರ್ಷಲ್‌ಗಳ ದೂರವಾಣಿ ಸಂಖ್ಯೆ ನೀಡುತ್ತಿದ್ದಾರೆ. ಮಾರ್ಷಲ್‌ಗಳಿಗೆ ಕರೆ ಮಾಡಿದರೆ ಅವರು ಸ್ಪಂದಿಸುತ್ತಿಲ್ಲ. ಇತ್ತ ಪೌರ ಕಾರ್ಮಿಕರು ಕಸವನ್ನು ತೆಗೆದುಕೊಂಡು ಹೋಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಕಮಲಾನಗರ ಮುಖ್ಯರಸ್ತೆಯ ನೊಂದ ನಾಗರಿಕರು.

'ಬ್ಯಾನರ್ ಹಾವಳಿ ನಿಯಂತ್ರಿಸಿ'

ವಿಜಯನಗರ, ಕೆ.ಆರ್. ಪುರ ಹಾಗೂ ಬೆಂಗಳೂರಿನ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಬ್ಯಾನರ್ ಹಾವಳಿ ಹೆಚ್ಚಾಗಿದೆ. ಬ್ಯಾನರ್ ತೆರವುಗೊಳಿಸುವಂತೆ ಹೈಕೋರ್ಟ್ ಆದೇಶ ನೀಡಿದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ರಸ್ತೆಯ ಪ್ರತಿಯೊಂದು ಸಿಗ್ನಲ್‌ನಲ್ಲಿ ಬ್ಯಾನರ್‌ಗಳು ರಾರಾಜಿಸುತ್ತಿವೆ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಬ್ಯಾನರ್ ಹಾಕುವವರ ವಿರುದ್ಧ ಎಫ್‌ಐಆರ್ ದಾಖಲಿಸುವ ಕೆಲಸ ಮಾಡಬೇಕು. ನಗರದ ಸೌಂದರ್ಯ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು.

ರತ್ನಾಕರ್, ಸುಂಕದಕಟ್ಟೆ

'ತ್ಯಾಜ್ಯ ವಿಲೇವಾರಿಗೆ ಒತ್ತಾಯ'

ಬನಶಂಕರಿ ಆರನೇ ಹಂತದ ನಾಲ್ಕನೇ ಟಿ ಬ್ಲಾಕ್‌ನಿಂದ ಶಂಕರ ಲೇಕ್ ವ್ಯೂ ಲೇಔಟ್ ಮೂಲಕ ಕನಕಪುರ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಬದಿಯಲ್ಲಿ ಕಸ ಸುರಿಯಲಾಗುತ್ತಿದೆ. ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಬೀದಿ ನಾಯಿಗಳು ಹಾಗೂ ಹಸುಗಳು ಈ ತ್ಯಾಜ್ಯವನ್ನು ಬೀದಿಗೆ ಎಳೆದು ತರುತ್ತಿವೆ. ಕೆಲ ಕಿಡಿಗೇಡಿಗಳು ಈ ಕಸಕ್ಕೆ ಬೆಂಕಿ ಹಚ್ಚುವುದರಿಂದ ವಾಯುಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ.

ಆರ್. ಜಯಸಿಂಹ, ಬನಶಂಕರಿ

'ಏರೋನಾಟಿಕ್ಸ್ 2047' ವಿಚಾರ ಸಂಕಿರಣದಲ್ಲಿ ಎ.ಪಿ ಸಿಂಗ್
'ವಾಯುಪಡೆ ಸದಾ ಸನ್ನದ್ಧವಾಗಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರಂತರವಾಗಿ ವಿಕಸನಗೊಳ್ಳುತ್ತಿರುವ ಇಂದಿನ ಕಾಲಘಟ್ಟದಲ್ಲಿ ಭಾರತೀಯ ವಾಯುಪಡೆಯು ಯಾವುದೇ ಸಂದರ್ಭದಲ್ಲಿ ಕಾರ್ಯಾಚರಣೆಗೆ ಸಿದ್ಧವಾಗಿರುವಂತೆ ರೂಪಿಸಬೇಕು ಎಂದು ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಎಂದು ತಿಳಿಸಿದರು.

ವೈಮಾನಿಕ ಅಭಿವೃದ್ಧಿ ಸಂಸ್ಥೆಯು ಸೆಂಟರ್ ಫಾರ್ ಏರ್‌ಬೋರ್ನ್ ಸಿಸ್ಟಮ್ಸ್‌ನಲ್ಲಿ ಆಯೋಜಿಸಿದ್ದ 'ಏರೋನಾಟಿಕ್ಸ್ 2047' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಲಘು ಯುದ್ಧ ವಿಮಾನ ತೇಜಸ್ ಹಾರಾಟ ಶುರು ಮಾಡಿ 25 ವರ್ಷಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ವೈಮಾನಿಕ ಅಭಿವೃದ್ಧಿ ಸಂಸ್ಥೆಯನ್ನು ಅವರು ಅಭಿನಂದಿಸಿದರು.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮತ್ತು ಡಿಆರ್‌ಡಿಒ ಅಧ್ಯಕ್ಷ ಸಮೀರ್ ವಿ. ಕಾಮತ್ ಮಾತನಾಡಿ, 'ವಿಕಸಿತ ಭಾರತ–2047ರ ದೃಷ್ಟಿಕೋನವನ್ನು ಅರಿತುಕೊಂಡು, ಆಮದು ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬೇಕು. ಅದಕ್ಕಾಗಿ ಸ್ಥಳೀಯ ಅತ್ಯಾಧುನಿಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕು' ಎಂದು ಸಲಹೆ ನೀಡಿದರು.

ಏರೋನಾಟಿಕ್ಸ್ ವಿಕಸನ, ವಿನ್ಯಾಸ ನಾವೀನ್ಯ, ಉತ್ಪಾದನೆ ಮತ್ತು ಭವಿಷ್ಯದ ಗಡಿಗಳ ಕುರಿತು ತಜ್ಞರು, ಕೈಗಾರಿಕಾ ಪಾಲುದಾರರು ಒಳನೋಟಗಳನ್ನು ಹಂಚಿಕೊಂಡರು. ಮುಂದಿನ ಪೀಳಿಗೆಯ ವಿಮಾನಗಳಿಗೆ ಉತ್ಪಾದನೆ ಮತ್ತು ಜೋಡಣೆ, ಡಿಜಿಟಲ್ ಉತ್ಪಾದನೆ ಮುಂತಾದ ವಿಚಾರಗಳ ಬಗ್ಗೆ ವಿಚಾರ ಸಂಕಿರಣದಲ್ಲಿ ಚರ್ಚೆಯಾಗಲಿದೆ.

ವಿಚಾರ ಸಂಕಿರಣದ ಭಾಗವಾಗಿ ಪಿಎಸ್‌ಯು, ಡಿಪಿಎಸ್‌ಯು, ಕೈಗಾರಿಕೆಗಳು, ಎಂಎಸ್‌ಎಂಇಗಳು ವಾಯುಗಾಮಿ ಅನ್ವಯಿಕೆಗಳಿಗಾಗಿ ಸ್ಥಳೀಯವಾಗಿ ವಿನ್ಯಾಸಗೊಳಿಸಲಾದ ಮತ್ತು ಅಭಿವೃದ್ಧಿಪಡಿಸಿದ ಉತ್ಪನ್ನಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

'ಏರೋನಾಟಿಕ್ಸ್ –2047' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಮಾತನಾಡಿದರು

- ಚಿತ್ರಸಂತೆಗೆ ಹರಿದು ಬಂದ ಕಲಾಸಕ್ತರ ದಂಡು
- ಚಿತ್ತಾಕರ್ಷಕ ಕಲಾಕೃತಿಗಳ ಪ್ರದರ್ಶನ, ಮಾರಾಟ

ಕಲಾಕೃತಿಗಳ ಸಂಗಮ, ಕಲಾಸಕ್ತರಿಗೆ ರಸದೌತಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯ ಎರಡೂ ಬದಿಯಲ್ಲಿ ಎತ್ತ ನೋಡಿದರತ್ತ ಬಣ್ಣ–ಬಣ್ಣಗಳ ಚಿತ್ತಾರ, ಕಲಾವಿದನ ಕುಂಚದಲ್ಲಿ ಅರಳಿದ ಗ್ರಾಮೀಣ ಸೊಗಡು, ಪ್ರಕೃತಿಯ ವೈಭವ, ಮರಳಿನಲ್ಲಿ ಅರಳಿದ ಹುಲಿ, ಚಿರತೆಯ ಕಲಾಕೃತಿಗಳನ್ನು ಕಣ್ತುಂಬಿಕೊಳ್ಳಲು ಜನಸಾಗರವೇ ಬಂದಿತ್ತು.

ಈ ದೃಶ್ಯ ಕಂಡು ಬಂದದ್ದು ಕುಮಾರ ಕೃಪಾ ರಸ್ತೆಯಲ್ಲಿ. ಕರ್ನಾಟಕ ಚಿತ್ರಕಲಾ ಪರಿಷತ್ತು ಭಾನುವಾರ ಹಮ್ಮಿಕೊಂಡಿದ್ದ 23ನೇ ಚಿತ್ರಸಂತೆಯಲ್ಲಿ ಕಲಾಲೋಕವೇ ಅನಾವರಣಗೊಂಡಿತ್ತು. ಈ ಚಿತ್ರಸಂತೆಯು ಕಲಾವಿದರ ಪ್ರತಿಭೆಗೆ ವೇದಿಕೆ ಕಲ್ಪಿಸುವುದರ ಜತೆಗೆ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೂ ಅವಕಾಶ ಒದಗಿಸಿತ್ತು. ಚಿತ್ರಸಂತೆಯು ಕಲಾವಿದರು ಮತ್ತು ಕಲಾಸಕ್ತರ ನಡುವೆ ಬಾಂಧವ್ಯ ಬೆಸೆಯುವ ಸೇತುವೆಯಂತೆ ಭಾಸವಾಯಿತು. ವರ್ಣಮಯ ಕಲಾಕೃತಿಗಳು ಕಲಾರಸಿಕರ ಸಂಭ್ರಮವನ್ನು ಇಮ್ಮಡಿಗೊಳಿಸಿದವು.

ಈ ಬಾರಿಯ ಚಿತ್ರಸಂತೆಯನ್ನು ‘ಪರಿಸರ’ಕ್ಕೆ ಸಮರ್ಪಿಸಲಾಗಿತ್ತು. ಪರಿಷತ್ತಿನ ಪ್ರವೇಶ ದ್ವಾರದಲ್ಲಿಯೇ ಜೇನುಗೂಡಿನ ಬೃಹತ್ ಮಾದರಿ ನಿರ್ಮಿಸಲಾಗಿತ್ತು. ಇದು ನೆರೆದಿದ್ದ ಕಲಾ ಪ್ರೇಮಿಗಳ ಗಮನಸೆಳೆಯಿತು. ಪರಿಷತ್ತಿನ ಆವರಣದಲ್ಲಿ ಕಲಾಕೃತಿಗಳ ಜತೆಗೆ ಕರಕುಶಲ ವಸ್ತುಗಳು ಹಾಗೂ ಕಲಾಕೃತಿ ರಚನೆಗೆ ಅಗತ್ಯವಿರುವ ಬಣ್ಣ ಮತ್ತು ಅಗತ್ಯ ವಸ್ತುಗಳ ಮಾರಾಟಕ್ಕೆ ಅವಕಾಶ ನೀಡಲಾಗಿತ್ತು.

ಮಹಿಳೆಯರ ವಿವಿಧ ಭಂಗಿಗಳು, ಜಲಪಾತಗಳು, ಸರೋವರ, ಕಂಬಳದ ಜೋಡೆತ್ತುಗಳು, ಐತಿಹಾಸಿಕ ದೇವಸ್ಥಾನಗಳು, ಪೌರಾಣಿಕ ಪಾತ್ರಧಾರಿಗಳು, ಮಾರುಕಟ್ಟೆಯಲ್ಲಿ ಹೂವು ಮಾರುವ ದೃಶ್ಯ, ಗೌತಮ ಬುದ್ಧ, ಗಣಪತಿ, ಶಿವನ ವಿವಿಧ ಭಂಗಿಗಳು ಹಾಗೂ ಪರಿಸರಕ್ಕೆ ಸಂಬಂಧಿಸಿದ ವಿವಿಧ ಶೈಲಿಯ ಕಲಾಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದವು. ಒಂದಕ್ಕಿಂತ ಮತ್ತೊಂದು ಕಲಾಕೃತಿಗಳು ಆಲೋಚನೆಗೆ ಹಚ್ಚಿದವು.

ವಿವಿಧ ರಾಜ್ಯಗಳಿಂದ ಬಂದಿದ್ದ ಕಲಾವಿದರ ಸಮ್ಮಿಲನಕ್ಕೆ ಚಿತ್ರಸಂತೆ ವೇದಿಕೆ ಕಲ್ಪಿಸಿತ್ತು. ₹50 ರಿಂದ ₹5 ಲಕ್ಷದವರೆಗಿನ ಕಲಾಕೃತಿಗಳಿದ್ದವು. ಕೆಲವರು ದುಬಾರಿ ಬೆಲೆ ಕೇಳಿ ಅಚ್ಚರಿಪಟ್ಟರೂ, ಕಲಾವಿದರ ಪ್ರತಿಭೆಗೆ ಮತ್ತು ಶ್ರಮಕ್ಕೆ ತಲೆದೂಗಿದರು.

ಈ ಚಿತ್ರಸಂತೆಯಲ್ಲಿ 3 ಲಕ್ಷಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು. ₹3 ಕೋಟಿಗೂ ಅಧಿಕ ವಹಿವಾಟು ನಡೆದಿದೆ ಎಂದು ಚಿತ್ರಕಲಾ ಪರಿಷತ್ತಿನ ಮೂಲಗಳು ತಿಳಿಸಿವೆ.



ಕಲಾವಿದ ಭರಣಿ ಧರಣ್ ಅವರು ತೈಲವರ್ಣದಲ್ಲಿ ರಚಿಸಿದ ₹ 1 ಲಕ್ಷ ಬೆಲೆಯ ನವಿಲುಗಳ ಕಲಾಕೃತಿಯನ್ನು ಸಾರ್ವಜನಿಕರೊಬ್ಬರು ಮೊಬೈಲ್‌ನಲ್ಲಿ ಸೆರೆಹಿಡಿದರು ಚಿತ್ರ: ಪುಷ್ಕರ್ ವಿ.

> ಚಿತ್ರಸಂತೆ ಕಲಾವಿದರಿಗೆ ವೇದಿಕೆಯಾಗಿದೆ. ದೇಶದ ವಿವಿಧ ಭಾಗಗಳಿಂದ ಆಗಮಿಸುವ ಕಲಾಸಕ್ತರ ಪರಿಚಯವಾಗುವುದರ ಜೊತೆಗೆ ಹೊಸತನ ಕಲಿಯಲು ಸಹಾಯಕವಾಗುತ್ತದೆ
> **ಶೋಭಾರಾಣಿ,** ಕಲಾವಿದೆ ಮೈಸೂರು

> ಚಿತ್ರಸಂತೆಯಲ್ಲಿ ಕಲಾಸಕ್ತರ ಜತೆ ಸಂಪರ್ಕ, ಬಾಂಧವ್ಯ ಬೆಳೆಯಲು ವೇದಿಕೆ ಆಗಿದೆ. ಪ್ರತಿಬಾರಿಯೂ ಚಿತ್ರಸಂತೆ ಒಂದು ಹೊಸ ಅನುಭವ ನೀಡುತ್ತದೆ
> **ಮಹಮ್ಮದ್‌ಅಲಿ,** ಕಲಾವಿದ

> ಚಿತ್ರಸಂತೆಯ ಸ್ವರೂಪ ವರ್ಷದಿಂದ ವರ್ಷಕ್ಕೆ ಬದಲಾಗುತ್ತಿದೆ. ನೈಜ ಕಲೆ ಹಾಗೂ ಕಲಾವಿದರನ್ನು ಗುರುತಿಸುವ ಕೆಲಸ ಮಾಡಬೇಕು
> **ರವಿ,** ಕಲಾವಿದ

ಚಿತ್ರಸಂತೆ ವೀಕ್ಷಿಸಲು ಕುಮಾರಕೃಪಾ ರಸ್ತೆಯಲ್ಲಿ ಸೇರಿದ್ದ ಜನಸ್ತೋಮ ಚಿತ್ರಗಳು: ಪ್ರಶಾಂತ್ ಎಚ್‌.ಜಿ

ಚಿತ್ರಸಂತೆಯಲ್ಲಿ ಮಹಿಳೆಯರು ಕಲಾಕೃತಿಯನ್ನು ವೀಕ್ಷಿಸಿದರು

ಹೂವು ಮಾರಾಟ ಮಾಡುತ್ತಿರುವ ಕಲಾಕೃತಿಯನ್ನು ಸಾರ್ವಜನಿಕರು ವೀಕ್ಷಿಸಿದರು

ಹಲವು ಬಗೆಯ ಕಲಾಕೃತಿಗಳ ಪ್ರದರ್ಶನ

ಚಾರಕೋಲ್ ಪೇಂಟಿಂಗ್, ಕಾಫಿ ವರ್ಕ್, ಲ್ಯಾಂಡ್ ಸ್ಕೇಪ್, ನೈಜ, ಸಮಕಾಲೀನ ಹಾಗೂ ಅಮೂರ್ತ ಕಲಾಕೃತಿಗಳು, ಮಧುಬನಿ, ತಂಜಾವೂರು ಶೈಲಿ, ಮಂಡಲ ಕಲೆ, ಕಲಾಂಕಾರಿ ಕಲೆ, ಸಾಂಪ್ರದಾಯಿಕ ಕಲೆ, ರಾಜಸ್ಥಾನಿ ಶೈಲಿ, ಮೈಸೂರು ಶೈಲಿ, ಕ್ಯಾಲಿಗ್ರಫಿ, ಮರದ ಕಲಾಕೃತಿಗಳು, ಮ್ಯೂರಲ್ ಸೇರಿದಂತೆ ನಾನಾ ಪ್ರಕಾರದ ಕಲಾಕೃತಿಗಳು ಗಮನ ಸೆಳೆದವು. ತೆಂಗಿನ ಚಿಪ್ಪಿನಲ್ಲಿ ಮಾಡಿದ ಕಲಾಕೃತಿಗಳು ಕಲಾಸಕ್ತರನ್ನು ಆಕರ್ಷಿಸಿದವು.

‘ಕಲೆ ರಾಜ್ಯದ ಸಂಸ್ಕೃತಿಯ ಕನ್ನಡಿ’

‘ಕಲೆ ರಾಜ್ಯದ ಸಂಸ್ಕೃತಿಯ ಕನ್ನಡಿ ಇದ್ದಂತೆ. ಕಲಾವಿದರು, ಕಲಾಸಕ್ತರಿಗೆ ಚಿತ್ರಸಂತೆ ವೇದಿಕೆಯನ್ನು ಕಲ್ಪಿಸಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಚಿತ್ರ ಸಂತೆಗೆ ಚಾಲನೆ ನೀಡಿ ಮಾತನಾಡಿದ ಅವರು, ‘ಕಲಾವಿದರನ್ನು ಪ್ರೋತ್ಸಾಹಿಸುವುದು, ಅವರ ಚಿತ್ರಗಳ ಪ್ರದರ್ಶನ ಹಾಗೂ ಅವುಗಳ ಮಾರಾಟಕ್ಕೆ ವೇದಿಕೆ ಸೃಷ್ಟಿ ಮಾಡುವ ಕೆಲಸವನ್ನು ಚಿತ್ರಕಲಾ ಪರಿಷತ್ತು 60 ವರ್ಷಗಳಿಂದ ಮಾಡುತ್ತಿದ್ದು, ಇದಕ್ಕೆ ನಮ್ಮ ಸರ್ಕಾರ ಸಂಪೂರ್ಣ ಬೆಂಬಲ ನೀಡುತ್ತಿದೆ’ ಎಂದರು.

‘ಪ್ರತಿಯೊಂದು ಜಿಲ್ಲೆಯಲ್ಲಿ ಸಾಧಕರ ವಸ್ತು ಸಂಗ್ರಹಾಲಯ ನಿರ್ಮಿಸುವ ಬೇಡಿಕೆಯಿದ್ದು, ಸರ್ಕಾರ ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸಲಿದೆ. ಪರಿಸರವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಬೆಂಗಳೂರು ನಗರ ಸೇರಿದಂತೆ ದೇಶದ ಅನೇಕ ರಾಜಧಾನಿಗಳಲ್ಲಿ ಪರಿಸರ ಮಾಲಿನ್ಯ ಹೆಚ್ಚಾಗಿದೆ. ದೆಹಲಿಯಲ್ಲಿ ಬದುಕಲು ಸಾಧ್ಯವಿಲ್ಲದ ವಾತಾವರಣ ನಿರ್ಮಾಣವಾಗುತ್ತಿದೆ. ಪರಿಸರದ ರಕ್ಷಣೆ ಇಂದಿನ ಅಗತ್ಯವಾಗಿದೆ’ ಎಂದರು.

‘ಪ್ರತಿ ವರ್ಷ ಮೂರರಿಂದ ಐದು ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಯಾವುದೇ ಪ್ರದೇಶದಲ್ಲಿ ಶೇ 30ರಷ್ಟು ಕಾಡು ಇರಬೇಕು. ನಮ್ಮಲ್ಲಿ ಶೇಕಡ 20ರಷ್ಟು ಅರಣ್ಯ ಪ್ರದೇಶವಿದೆ. ಇದನ್ನು ಹೆಚ್ಚಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು’ ಎಂದು ಭರವಸೆ ನೀಡಿದರು.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್ ಉಪಸ್ಥಿತರಿದ್ದರು.

- ಬೆಂಗಳೂರಿನ ಕಲಾವಿದ ಭರಣಿ ಧರಣ್ ಅವರು ತೈಲವರ್ಣದಲ್ಲಿ ರಚಿಸಿದ ನವಿಲುಗಳ ಕಲಾಕೃತಿಯು ₹1 ಲಕ್ಷಕ್ಕೆ ಮಾರಾಟವಾಯಿತು. ಇವರ ಹುಲಿಯ ಕಲಾಕೃತಿ ಸಂತೆಯಲ್ಲಿ ಗಮನ ಸೆಳೆಯಿತು.
- ಮೈಸೂರಿನ ಕಲಾವಿದ ವೀರೇಶ್ ಅವರು ರಚಿಸಿದ ಪ್ರಕೃತಿಯೊಳಗೆ ಶಿವ ಇರುವ ಕಲಾಕೃತಿಯು ₹1.30 ಲಕ್ಷಕ್ಕೆ ಮಾರಾಟವಾಯಿತು.
- ಕೊಯಮತ್ತೂರಿನ ಸತೀಶ್ ಅವರು ರಚಿಸಿದ ವಿಶ್ವದ ಪ್ರಸಿದ್ಧ ವ್ಯಕ್ತಿಗಳು ಒಂದೆಡೆ ಸೇರಿ ಕುಶಲೋಪರಿಯಲ್ಲಿ ತೊಡಗಿರುವ ಕಲಾಕೃತಿಯು ₹3 ಲಕ್ಷಕ್ಕೆ ಮಾರಾಟವಾಯಿತು.
- ತಮಿಳುನಾಡಿನ ಕೊಯಮತ್ತೂರಿನ ವಿಜಯ್ ಅವರ ಹೂವು ಮಾರಾಟ ಮಾಡುವ 6 ಅಡಿ ಉದ್ದ, 5 ಅಡಿ ಅಗಲದ ಕಲಾಕೃತಿಗೆ ₹3.50 ಲಕ್ಷ ದರ ನಿಗದಿಪಡಿಸಿದ್ದರು. ರೈತ ಭತ್ತದ ಪೈರು ಮುಖದ ಬಳಿ ಹಿಡಿದುಕೊಂಡಿರುವ ಕಲಾಕೃತಿಗೆ ₹1.50 ಲಕ್ಷ ಹಾಗೂ ಭತ್ತ ಪೈರು ಹಿಡಿದುಕೊಂಡು ನಗುತ್ತಿರುವ ರೈತ ಮಹಿಳೆಯ ಚಿತ್ರಕ್ಕೆ ₹2.50 ಲಕ್ಷ ದರ ನಿಗದಿಪಡಿಸಿದ್ದರು. ಮತ್ತೊಬ್ಬ ಕಲಾವಿದ ಜೀವನ್ ಅವರು ರಚಿಸಿದ ಗ್ರಾಮೀಣ ಸೊಗಡಿನ ಹಸು, ಎಮ್ಮೆ ನಾಯಿ ಕುರಿಗಳನ್ನು ಹಿಡಿದು ಸಾಗುವ ರೈತ ಹಾಗೂ ಮಹಿಳೆಯ ಕಲಾಕೃತಿಗೆ ₹3 ಲಕ್ಷ ಬೆಲೆ ನಿಗದಿಪಡಿಸಿದ್ದರು.
- ಸಂತೆಯಲ್ಲಿ 9.5 ಅಡಿ ಉದ್ದ ಹಾಗೂ 4.5 ಅಡಿ ಅಗಲದ ಟೀಕ್ ವುಡ್‌ನಲ್ಲಿ ನಿರ್ಮಿಸಿರುವ ಬಾಗಿಲು ಗಮನ ಸೆಳೆಯಿತು. ಇದಕ್ಕೆ ₹8 ಲಕ್ಷ ಬೆಲೆ ನಿಗದಿಪಡಿಸಲಾಗಿತ್ತು.

ಆನೇಕಲ್: ಕಾಡಂಚಿನ ಗ್ರಾಮ, ರಸ್ತೆಗಳಲ್ಲಿ ಪ್ರತ್ಯಕ್ಷ • ಕಾಡಿಗಟ್ಟುವ ಯತ್ನ ವಿಫಲ

ವಾರದಿಂದ ಬೀಡುಬಿಟ್ಟ ಕಾಡಾನೆ ಹಿಂಡು

ಪ್ರಜಾವಾಣಿ ವಾರ್ತೆ

ಆನೇಕಲ್: ಕಳೆದ ಒಂದು ವಾರದಿಂದ ತಾಲ್ಲೂಕಿನ ಕಾಡಂಚಿನ ಗ್ರಾಮಗಳ ನೀಲಗಿರಿ ತೋಪುಗಳಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳ ಹಿಂಡು ಭಾನುವಾರ ಮುತ್ಯಾಲಮಡುವು ಸಮೀಪದಲ್ಲಿ ರಸ್ತೆಯಲ್ಲಿ ಕಾಣಿಸಿಕೊಂಡಿದೆ.

ನೀಲಗಿರಿ ತೋಪಿನಲ್ಲಿ ಅತ್ತಿಂದಿತ್ತ ಓಡಾಡುತ್ತಿರು ಒಂಬತ್ತು ಕಾಡಾನೆಗಳನ್ನು ಕಾಡಿಗೆ ಅಟ್ಟಲು ಅರಣ್ಯ ಇಲಾಖೆ ಸಿಬ್ಬಂದಿ ಇನ್ನಿಲ್ಲದ ಕಸರತ್ತು ಮಾಡುತ್ತಿದ್ದಾರೆ. ಆದರೆ, ಸಿಬ್ಬಂದಿ ಯಾವ ಪ್ರಯತ್ನಗಳೂ ಫಲ ನೀಡಲಿಲ್ಲ. ಇದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದ ಕಾಡಾನೆಗಳ ಹಿಂಡು ನಿಶ್ಚಿಂತೆಯಿಂದ ನಿಂತಿತ್ತು. ಸ್ಥಳದಿಂದ ಒಂದಿನಿತೂ ಕದಲಿಲ್ಲ.

ಕೊನೆಗೆ ಪಟಾಕಿ ಮೊರೆ ಹೋದ ಅರಣ್ಯ ಸಿಬ್ಬಂದಿ ಪಟಾಕಿ ಸಿಡಿಸಿ ಕಾಡಿಗೆ ಓಡಿಸುವ ಪ್ರಯತ್ನ ಮಾಡಿದರು. ಇದರಿಂದ ಮತ್ತಷ್ಟು ಕೆರಳಿದ ಕಾಡಾನೆಗಳ ಹಿಂಡು ಘೀಳಿಡುತ್ತ ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ಪ್ರತಿದಾಳಿ ನಡೆಸಿದವು. ಆನೆಗಳ ಸಿಟ್ಟು ಅರಿತ ಅರಣ್ಯ ಸಿಬ್ಬಂದಿ ಸ್ಥಳದಿಂದ ಓಟ ಕಿತ್ತು ಪ್ರಾಣ ರಕ್ಷಿಸಿಕೊಂಡರು.

ಮುತ್ಯಾಲಮಡುವು ಸಮೀಪ ಮನೆಯ ಮುಂದೆ ನಿಲ್ಲಿಸಿದ್ದ ಎರಡು ಬೈಕ್ ಕಾಡಾನೆಗಳ ಸಿಟ್ಟಿಗೆ ಪುಡಿ, ಪುಡಿಯಾಗಿವೆ.

ಆಹಾರ ಅರಸಿ ಕಾಡಿನಿಂದ ಬಂದಿರುವ ಕಾಡಾನೆಗಳ ಹಿಂಡು ವಾರದಿಂದ ಆನೇಕಲ್ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ರಾಗಿಯ ಬೆಳೆಯನ್ನು ನಾಶಪಡಿಸಿವೆ.

ಮೆಣಸಿಗನಹಳ್ಳಿ, ಮುತ್ಯಾಲಮಡುವು ಸೇರಿದಂತೆ ತಾಲ್ಲೂಕಿನ ಅರಣ್ಯದಂಚಿನ ಗ್ರಾಮಗಳ ಸುತ್ತಮುತ್ತ ಕಾಣಿಸಿಕೊಂಡಿರುವ ಕಾಡಾನೆಗಳ ಹಿಂಡು ಆಗಾಗ ರಸ್ತೆ ಬದಿಗಳಲ್ಲಿ ಪ್ರತ್ಯಕ್ಷವಾಗುತ್ತಿದೆ. ಇದರಿಂದಾಗಿ ವಾಹನ ಸವಾರರು, ಪಾದಚಾರಿಗಳು ಆತಂಕದಲ್ಲಿ ರಸ್ತೆಯಲ್ಲಿ ಸಂಚರಿಸುತ್ತಿದ್ದಾರೆ.



ಆನೇಕಲ್ ತಾಲ್ಲೂಕಿನ ಮುತ್ಯಾಲಮಡುವು ಬಳಿ ಕಾಣಿಸಿಕೊಂಡ ಕಾಡಾನೆ ಹಿಂಡು

‘ವರ್ಗಾವಣೆ ಬಿಡ್ಡಿಂಗ್‌ಗೆ ಪವನ್ ನೆಜ್ಜೂರ್ ಬಲಿಪಶು’

ಬೆಂಗಳೂರು: ‘ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ಬಿಡ್ಡಿಂಗ್ ನಡೆಸಲಾಗುತ್ತಿದೆ. ಬಳ್ಳಾರಿ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರ ಬಿಡ್ಡಿಂಗ್‌ಗೆ ಐಪಿಎಸ್ ಅಧಿಕಾರಿ ಪವನ್ ನೆಜ್ಜೂರ್ ಬಲಿಪಶುವಾಗಿದ್ದಾರೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಡ್ಡಿಂಗ್ ನಡೆಸಿ, ಹಣ ವಸೂಲಿ ಮಾಡಿ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗುತ್ತಿದೆ. 11 ತಿಂಗಳಲ್ಲೇ ಮತ್ತೆ ವರ್ಗಾವಣೆ ಮಾಡುತ್ತಾರೆ. ಆ ಅವಧಿಯೊಳಗೆ ಅಧಿಕಾರಿಗಳು ಹಣ ಹೊಂದಿಸಿಕೊಳ್ಳಬೇಕು. ಈ ಸರ್ಕಾರದಲ್ಲಿ ಭ್ರಷ್ಟಾಚಾರ ತುಂಬಿತುಳುಕುತ್ತಿದೆ’ ಎಂದರು.

ಇಂದಿನಿಂದ ಹೆಜ್ಜೆ ಗುರುತು ಸಂಗ್ರಹ

ಪ್ರಜಾವಾಣಿ ವಾರ್ತೆ

ಹುಲಿ ಸಮೀಕ್ಷೆ

ಬೆಂಗಳೂರು: ಕರ್ನಾಟಕದಲ್ಲಿ ಹುಲಿ ಸಮೀಕ್ಷೆ 2026ರ 2ನೇ ಹಂತದ ಪ್ರಕ್ರಿಯೆ ಸೋಮವಾರ(ಜ.5) ಆರಂಭಗೊಳ್ಳಲಿದ್ದು, ಐದು ಹುಲಿ ಸಂರಕ್ಷಿತ ಪ್ರದೇಶ ಹಾಗೂ ಅವುಗಳಿಗೆ ಹೊಂದಿಕೊಂಡಿರುವ ವನ್ಯಜೀವಿ ಹಾಗೂ ಪ್ರಾದೇಶಿಕ ವಿಭಾಗಗಳಲ್ಲೂ ಅರಣ್ಯ ಇಲಾಖೆ ಸಿಬ್ಬಂದಿ ಅರಣ್ಯ ಹಾಗೂ ಅರಣ್ಯದಂಚಿನಲ್ಲಿ ಹೆಜ್ಜೆ ಹಾಕಿ ಮಾಹಿತಿ ಕಲೆಹಾಕಲಿದ್ದಾರೆ.

ಈಗಾಗಲೇ ಕ್ಯಾಮರಾಗಳನ್ನು ಬಳಸಿ ಸಮೀಕ್ಷೆ ಕಾರ್ಯ ಕರ್ನಾಟಕದ ಐದು ಹುಲಿ ಯೋಜನೆ ಪ್ರದೇಶಗಳಾದ ಬಂಡೀಪುರ, ನಾಗರಹೊಳೆ, ಬಿಆರ್‌ಟಿ, ಭದ್ರಾ ಹಾಗೂ ಕಾಳಿ ಜಾರಿಯಲ್ಲಿದೆ. ಎರಡನೇ ಹಂತದಲ್ಲಿ ಮೂರು ದಿನ ಹುಲಿಗಳ ಹೆಜ್ಜೆ ಗುರುತು ಹಾಗೂ ಇರುವಿಕೆ ಆಧರಿಸಿ(ಸೈನ್) ಮಾಹಿತಿ ಕಲೆ ಹಾಕಲಾಗುತ್ತದೆ. ಇತರೆ ಮಾಂಸಾಹಾರಿ ಪ್ರಾಣಿಗಳ ಹೆಜ್ಜೆ ಗುರುತು ಸಂಗ್ರಹಿಸಲಾಗುತ್ತದೆ. ಮೂರನೇ ಹಂತವಾಗಿ ಲೈನ್ಸ್ ಟ್ರಾನ್ಸಾಕ್ಟ್ ಪದ್ಧತಿಯಡಿ ಜ.9ರಿಂದ ನಾಲ್ಕು ದಿನ ಸಮೀಕ್ಷೆ ನಡೆಸಲಾಗುತ್ತದೆ.

ಎನ್‌ಟಿಸಿಎ ಸಹಯೋಗದಲ್ಲಿ ಭಾರತದ ವನ್ಯಜೀವಿ ಸಂಸ್ಥೆ (ಐಡಬ್ಲ್ಯುಐ) ಅಭಿವೃದ್ಧಿಪಡಿಸಿರುವ ಆಂಡ್ರಾಯ್ಡ್ ಆಧಾರಿತ ಮೊಬೈಲ್ ಆ್ಯಪ್ ಎಂ ಸ್ಟ್ರೈಪ್‌ನಲ್ಲಿ ಎಲ್ಲಾ ಮಾಹಿತಿ ಕಲೆ ಹಾಕಲಾಗುತ್ತದೆ. ಅರಣ್ಯ ಇಲಾಖೆ ಸಿಬ್ಬಂದಿ, ಅರಣ್ಯ ಕಾಲೇಜುಗಳ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ಬಾರಿ ಸ್ವಯಂಸೇವಕರಿಗೆ ಅವಕಾಶ ನೀಡಿಲ್ಲ.

‘ಪ್ರತಿ ನಾಲ್ಕು ವರ್ಷಕ್ಕೊಮ್ಮೆ ದೇಶದಾದ್ಯಂತ ಏಕಕಾಲಕ್ಕೆ ಹುಲಿ ಅಂದಾಜು ಸಮೀಕ್ಷೆ ಚಟುವಟಿಕೆ ನಡೆಯುತ್ತದೆ. ಆರನೇ ಆವೃತ್ತಿಯ ಸಮೀಕ್ಷೆ ಈಗ ಶುರುವಾಗಿದೆ. ಮುಂದಿನ ಕೆಲವು ದಿನ ಈ ಪ್ರಕ್ರಿಯೆ ಮುಗಿಸಿ ಎಲ್ಲಾ ಮಾಹಿತಿಯನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ಒದಗಿಸಲಾಗುತ್ತದೆ. ತಜ್ಞರ ತಂಡ ಸಂಪೂರ್ಣ ಮಾಹಿತಿ ವಿಶ್ಲೇಷಿಸಲಿದೆ. ಕೇಂದ್ರ ಸರ್ಕಾರ ರಾಜ್ಯವಾರು ಹುಲಿಗಳ ಅಂದಾಜನ್ನು ಮುಂದಿನ ವರ್ಷ ಬಿಡುಗಡೆ ಮಾಡಲಿದೆ’ ಎಂದು ಕರ್ನಾಟಕ ಹುಲಿ ಯೋಜನಾ ನಿರ್ದೇಶಕ ಹಾಗೂ ಗಣತಿ ನೋಡಲ್ ಅಧಿಕಾರಿ ಡಾ.ಪಿ.ರಮೇಶ್ ಕುಮಾರ್ ತಿಳಿಸಿದ್ದಾರೆ.

ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಲೇಔಟ್ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವಂತೆ ಪ್ರಗತಿಪರ ಸಂಘಟನೆಗಳು ಆಗ್ರಹಿಸಿದವು.

ಕೋಗಿಲು ಲೇಔಟ್ ಸ್ಲಂ ನಿವಾಸಿಗಳ ಹೋರಾಟ ಸಮಿತಿ ನೇತೃತ್ವದಲ್ಲಿ ಭಾನುವಾರ ಫಕೀರ್ ಕಾಲೋನಿಯಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಪ್ರಗತಿಪರ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಂವಿಧಾನದ ಪೀಠಿಕೆ ಓದುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ದುಡಿಯುವ ಜನರ ವೇದಿಕೆ ವತಿಯಿಂದ ಮನೋಹರ್ ಎಲವರ್ತಿ ಮಾತನಾಡಿ, ‘ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವವರೆಗೆ ಹೋರಾಟ ಮುಂದುವರಿಸುತ್ತೇವೆ’ ಎಂದರು.

ಜನವಾದಿ ಮಹಿಳಾ ಸಂಘಟನೆಯ ಗೌರಮ್ಮ, ‘ಯಾವುದೇ ಪೂರ್ವ ಸೂಚನೆ ಇಲ್ಲದೇ ಮನೆಗಳನ್ನು ನೆಲಸಮಗೊಳಿಸಿದ್ದಾರೆ. ರಾಜ್ಯ ಮಾನವ ಹಕ್ಕುಗಳ ಆಯೋಗ ಮಾಡಿರುವ ಶಿಫಾರಸುಗಳನ್ನು ಕೂಡಲೇ ಜಾರಿಗೆ ತರಬೇಕು’ ಎಂದರು.

ಸ್ಲಂ ಜನರ ಸಂಘಟನೆಯಿಂದ ಐಸ್ಸಾಕ್ ಅಮೃತರಾಜ್, ಸಿಐಟಿಯುನ ಉಮೇಶ್, ದುಡಿಯುವ ಜನರ ವೇದಿಕೆಯ ನಂದಿನಿ, ಕರ್ನಾಟಕ ಜನಾಂದೋಲನ ಸಂಘಟನೆ ವತಿಯಿಂದ ಮರಿಯಪ್ಪ ಮಾತನಾಡಿದರು. ಕರ್ನಾಟಕ ಜನಶಕ್ತಿ, ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಜೇಷನ್, ಎನ್‌ಎಫ್ಐಡಬ್ಲ್ಯು, ಸಿಐಟಿಯು ಹಾಗೂ ಇತರ ಜನಪರ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಗತಿಪರ ಸಂಘಟನೆಗಳು ಫಕೀರ್ ಕಾಲೋನಿಯಲ್ಲಿ ಸಾರ್ವಜನಿಕ ಸಭೆ ನಡೆಸಿದವು

‘ಅಮೆರಿಕದಿಂದ ಭದ್ರತೆ ತರಿಸಿಕೊಳ್ಳಲಿ’

ಪ್ರಜಾವಾಣಿ ವಾರ್ತೆ

ಡಿಕೆಶಿ ವ್ಯಂಗ್ಯ

ಬೆಂಗಳೂರು: ‘ಬಳ್ಳಾರಿ ಗಲಭೆಗೆ ಸಂಬಂಧಿಸಿದಂತೆ ಎಚ್‌.ಎಂ .ರೇವಣ್ಣ ಅವರು ಒಳ್ಳೆಯ ಮಾಹಿತಿಗಳನ್ನು ಪಡೆದುಕೊಂಡು ಬಂದಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಬಳ್ಳಾರಿ ಗಲಭೆ ಕುರಿತು ಅಧ್ಯಯನ ನಡೆಸಲು ಕೆಪಿಸಿಸಿ ರಚಿಸಿರುವ ಎಚ್‌.ಎಂ.ರೇವಣ್ಣ ನೇತೃತ್ವದ ಸಮಿತಿ ವರದಿ ನೀಡಿದೆಯೇ’ ಎಂದು ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ರೇವಣ್ಣ ನನ್ನನ್ನು ಭೇಟಿ ಮಾಡಿ ಅಧಿಕೃತ ಹಾಗೂ ಅನಧಿಕೃತ ವಿಚಾರಗಳನ್ನು ತಿಳಿಸಿದ್ದಾರೆ’ ಎಂದರು.

‘ಎಲ್ಲ ಕಡೆಗಳಲ್ಲೂ ಪ್ರತಿಮೆಗಳನ್ನು ಸ್ಥಾಪಿಸುತ್ತಾರೆ. ಅದಕ್ಕೆ ಅಸೂಯೆ ಏಕೆ ಪಡಬೇಕು. ವಾಲ್ಮೀಕಿ ಮಹರ್ಷಿ ಒಂದು ಸಮುದಾಯಕ್ಕೆ ಸೇರಿದವರೇ? ಹೀಗಿರುವಾಗ ಅವರ ಬ್ಯಾನರ್ ಹಾಕಲು ಜನಾರ್ದನ ರೆಡ್ಡಿ ಆಕ್ಷೇಪ ವ್ಯಕ್ತಪಡಿಸಿದ್ದು ಸರಿಯಲ್ಲ’ ಎಂದರು.

ಜನಾರ್ದನ ರೆಡ್ಡಿ ಝೆಡ್ ಪ್ಲಸ್ ಭದ್ರತೆ ಕೇಳಿರುವ ಕುರಿತು ಕೇಳಿದ್ದಕ್ಕೆ ‘ಝಡ್ ಭದ್ರತೆಯಾದರೂ ಕೇಳಲಿ. ಇರಾನ್, ಅಮೆರಿಕದಿಂದಾದರೂ ಭದ್ರತೆ ತೆಗೆದುಕೊಂಡು ಬರಲಿ. ಬೇಡ ಅಂದವರು ಯಾರು’ ಎಂದು ಪ್ರಶ್ನಿಸಿದರು.

‘ಶಾಸಕ ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿಯ ಗನ್ ಮ್ಯಾನ್ ಹಾರಿಸಿದ ಗುಂಡು ತಗಲಿ ಸಾವು ಸಂಭವಿಸಿತ್ತು’ ಎನ್ನುವ ವರದಿ ಬಗ್ಗೆ ಕೇಳಿದಾಗ, ‘ಯಾರದ್ದೇ ಆಗಿದ್ದರೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ವರದಿ ಬಗ್ಗೆ ನನಗೆ ಗೊತ್ತಿಲ್ಲ’ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ ಸೂಚನೆ

‘ಸಿಬ್ಬಂದಿಗೆ ಅವಧಿ ವಿಮೆ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳ ವೈದ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿ ತಮ್ಮ ಪ್ರಸ್ತುತ ಸಂಬಳ ಮತ್ತು ಹುದ್ದೆಗೆ ಅನುಗುಣವಾಗಿ ಅವಧಿ ವಿಮೆ (ಟರ್ಮ್ ಇನ್‌ಶ್ಯೂರೆನ್ಸ್) ಕಡ್ಡಾಯವಾಗಿ ಪಡೆಯಬೇಕು’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ತಿಳಿಸಿದ್ದಾರೆ.

ಈ ಕುರಿತಂತೆ ತಕ್ಷಣ ಆದೇಶ ಹೊರಡಿಸುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್ ಅವರಿಗೆ ಸಚಿವರು ಸೂಚಿಸಿದ್ದಾರೆ.

ಇತ್ತೀಚೆಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರ ವಿಮಾ ಹಣ ಪಡೆಯಲು ಅವರ ಕುಟುಂಬದ ಸದಸ್ಯರು ತಾಂತ್ರಿಕ ಸಮಸ್ಯೆಗಳು ಎದುರಿಸಿದ ಕಾರಣ, ತಮ್ಮ ಇಲಾಖೆಯ ಅಡಿಯಲ್ಲಿರುವ ಎಲ್ಲ ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ಸಾಮಾಜಿಕ ಭದ್ರತಾ ಕ್ರಮವಾಗಿ ಕಡ್ಡಾಯವಾಗಿ ಅವಧಿ ವಿಮೆ ಪಡೆಯುವಂತೆ ಸಚಿವರು ಸೂಚನೆ ನೀಡಿದ್ದಾರೆ.

ಶನಿವಾರ ನಡೆದ ವೈದ್ಯಕೀಯ ಕಾಲೇಜಿನ ಆಡಳಿತ ಮಂಡಳಿ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಯಿತು. ವಿಮಾ ಹಣ ಪಡೆಯಲು ಬೀಳಗಿ ಅವರ ಕುಟುಂಬಕ್ಕೆ ಎದುರಾದ ಸಮಸ್ಯೆಯನ್ನು ಸಭೆಯಲ್ಲಿ ಪ್ರಸ್ತಾಪಿಸಿದ ಆರ್ಥಿಕ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು, ‘ಐಎಎಸ್‌ಗೆ ಬಡ್ತಿ ಪಡೆದ ನಂತರ ಅವಧಿ ವಿಮಾ ವ್ಯವಸ್ಥೆಯಲ್ಲಿ ತಮ್ಮ ಸೇವಾ ವಿವರವನ್ನು ಬೀಳಗಿಯವರು ದಾಖಲಿಸಿರಲಿಲ್ಲ. ಇದರಿಂದಾಗಿ ಅವರ ಕುಟುಂಬ ವರ್ಗದವರಿಗೆ ಸುಮಾರು ₹ 50 ಲಕ್ಷ ಕಡಿಮೆ ವಿಮೆ ಮೊತ್ತ ಸಿಕ್ಕಿದೆ’ ಎಂದಿದ್ದಾರೆ.

ಇದನ್ನು ಗಂಭೀರವಾಗಿ ಪರಿಗಣಿಸಿದ ಸಚಿವರು, ಅವಧಿ ವಿಮೆ ಪಡೆಯುವುದನ್ನು ಕಡ್ಡಾಯಗೊಳಿಸುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದಾರೆ. ಅಲ್ಲದೇ, ಎಲ್ಲ ಸಿಬ್ಬಂದಿಗೂ ವಿಶೇಷವಾಗಿ ಕಡಿಮೆ ವೇತನ ಶ್ರೇಣಿಯಲ್ಲಿರುವವರಿಗೆ ವಿಮೆ ಆಯ್ಕೆ ಕುರಿತು ಅರಿವು ಮೂಡಿಸಬೇಕು’ ಎಂದು ಸಚಿವರು ಹೇಳಿದ್ದಾರೆ.

ಗುತ್ತಿಗೆ ನೇಮಕ: ‘ಇಲಾಖೆಯಲ್ಲಿರುವ ಅರ್ಹ ಹೊರಗುತ್ತಿಗೆ ನೌಕರರನ್ನು ಗುತ್ತಿಗೆ ಹುದ್ದೆ ವ್ಯಾಪ್ತಿಗೆ ತರುವ ಕುರಿತು, ಸೂಕ್ತ ಮೀಸಲಾತಿ ರೋಸ್ಟರ್ ಪಾಲಿಸಬೇಕು. ಉದ್ಯೋಗದಲ್ಲಿ ನ್ಯಾಯ ಒದಗಿಸಲು ಈ ರೀತಿಯ ಕ್ರಮ ಅಗತ್ಯವಾಗಿದೆ’ ಎಂದೂ ಸಚಿವರು ತಿಳಿಸಿದ್ದಾರೆ.

‘ಬ್ಯಾಂಕ್, ವಿಮಾ ಕಂಪನಿ ಜೊತೆ ಚರ್ಚೆ’



ಶರಣಪ್ರಕಾಶ್ ಪಾಟೀಲ

‘ಪ್ರಮುಖ ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳೊಂದಿಗೆ ಸಭೆ ನಡೆಸಿ ಇಲಾಖೆಯ ಉದ್ಯೋಗಿಗಳಿಗೆ ಕೈಗೆಟುಕುವ ದರಗಳಲ್ಲಿ ಅತ್ಯುತ್ತಮ ವಿಮಾ ಯೋಜನೆ ನೀಡಲು ಕ್ರಮ ಕೈಗೊಳ್ಳಬೇಕು. ನೌಕರರ ಕುಟುಂಬಗಳಿಗೆ ಸಮಗ್ರ ಆರ್ಥಿಕ ಭದ್ರತೆ ಒದಗಿಸುವುದು ಇದರ ಉದ್ದೇಶವಾಗಿದೆ. ಇಲಾಖೆಯಲ್ಲಿ ಕೆಲಸ ಮಾಡುವ ಗುತ್ತಿಗೆ ನೌಕರರಿಗೆ ಅವಧಿ ವಿಮಾ ಪ್ರಯೋಜನಗಳನ್ನು ವಿಸ್ತರಿಸುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸಬೇಕು ಎಂದೂ ಅಧಿಕಾರಿಗಳಿಗೆ ಶರಣಪ್ರಕಾಶ್ ಪಾಟೀಲ ಸೂಚನೆ ನೀಡಿದ್ದಾರೆ.

ನಗರದಲ್ಲಿ ಇಂದು

ಧನುರ್ಮಾಸದ ಸಂಗೀತ ರುದ್ರ ಸಹಿತ ಇಷ್ಟಲಿಂಗ ಮಹಾ ಶಿವಪೂಜೆ, ಸಮಾರೋಪ ಸಮಾರಂಭ: ಆಯೋಜನೆ: ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಬೆಳಿಗ್ಗೆ 7

ಶ್ರೀಪುರಂದರದಾಸರ, ತ್ಯಾಗರಾಜರ ಆರಾಧನೆ, ವಾರ್ಷಿಕೋತ್ಸವ ಸಮಾರಂಭ: ಸಂಗೀತ ಕಛೇರಿ, ವಿಶೇಷ ತಬಲಾ ತನಿ ಆವರ್ತನ: ಸಮೀರ್ ಚಟರ್ಜಿ, ಪೀಟಿಲು: ರಂಜನ್ ಬೇವರ, ಗಾಯನ: ಹಿರಣ್ಮಯೀ ಎಸ್., ಆಯೋಜನೆ: ಶ್ರೀಪುರಂದರ ತ್ಯಾಗರಾಜ ದೇವಾಲಯ, ಸಂಗೀತ ಸೇವಾ ಮಂಡಲಿ, ಸ್ಥಳ: ಶ್ರೀಭವಾನಿ ಶಂಕರ ದೇವಸ್ಥಾನ, ವಸಂತಪುರ, ಬೆಳಿಗ್ಗೆ 9.30ರಿಂದ

ವಿಶ್ವ ಬ್ರೈಲ್ ದಿನಾಚರಣೆ: ಅತಿಥಿ: ಡಿ. ಸುಧಾಕರ್, ಅಧ್ಯಕ್ಷತೆ: ಡಾ.ಸಿ.ಎನ್. ಮಂಜುನಾಥ್, ಆಯೋಜನೆ: ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್, ಸ್ಥಳ: ಕಾಸಿಯಾ, ವಿಜಯನಗರ, ಮಧ್ಯಾಹ್ನ 3

ಮಾರ್ಗಶೀರ್ಷೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಕೆ.ಎಸ್. ವಿಷ್ಣುದೇವ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

Since 1983
MIT-WPU
Dr. Vishwanath Karad
MIT WORLD PEACE UNIVERSITY | PUNE
TECHNOLOGY, RESEARCH, SOCIAL INNOVATION & PARTNERSHIPS

A University for Life Transformation

43+ Years of Legacy | 25,000+ Students on Campus | 1,00,000+ Alumni Globally
100+ Students Clubs | 2000+ Industry Connects | 700+ Companies Visited for Placements (2025)

ADMISSIONS OPEN 2026

Choose your UG & PG Programmes from the Following Disciplines
Computer Science & Technology | Psychology | Education | Clinical Sciences
Design & Visual Arts | Engineering | Biotechnology | Pharmacy
Management Studies | Economics & Commerce | Film Studies
Media & Communication | Politics & Governance | Law
Health Science & Technology | Liberal Arts
Pure Sciences & Environmental Studies | & More

Experiential Learning Opportunities
- iOS Development Centre Powered by Apple and Infosys
- AI-powered Smart Classrooms and Advanced R&D Labs
- 5-day Residential Programme at Life Transformation Centre (LTC)
- Co-creation, Yoga, and Peace Studies for Holistic Development
- International, National, and Rural Immersion Programmes
- Social Leadership Development Programme

Scholarships: Meritorious students are eligible for scholarships ranging from 25% to 100%.

+91 20 7117 7104
+91 98814 92848 (Message only)
admissions@mitwpu.edu.in
mitwpu.edu.in
MIT-WPU, Pune

ಸ್ವಾತಂತ್ರ್ಯದ ಮುಂದೆ ಗೌಣವಾಯ್ತೇ ಪ್ರೀತಿ, ಕಾಳಜಿ?!

ಸಮಾಧಾನ

ಡಾ. ಡಿ.ಎಂ. ಹೆಗಡೆ, ಆಪ್ತಸಮಾಲೋಚಕ

• ನಮಸ್ತೆ, ಬೆಂಗಳೂರಿನಲ್ಲಿ ನೆಲಸಿರುವ ನಮಗೆ ಇಬ್ಬರು ಮಕ್ಕಳು. ಮಗ ಎಂಬಿಎ ಹಾಗೂ ಮಗಳು ಎಂಜಿನಿಯರಿಂಗ್ ಓದಿ, ಕೆಲಸಕ್ಕೆ ಸೇರಿಕೊಂಡಿದ್ದಾರೆ. ಇಬ್ಬರೂ ತಮ್ಮ ತಮ್ಮ ವೃತ್ತಿಯ ಅನುಕೂಲಕ್ಕಾಗಿ ಇದೇ ಊರಿನಲ್ಲಿ ಬೇರೆ ಬೇರೆ ಮನೆ ಮಾಡಿಕೊಂಡಿದ್ದಾರೆ. ಮಕ್ಕಳನ್ನು ಚೆನ್ನಾಗಿ ಓದಿಸಿ, ಮುಂದೆ ನಾವೆಲ್ಲರೂ ಒಟ್ಟಿಗೆ ಸುಖವಾಗಿರಬೇಕು ಎಂದುಕೊಂಡಿದ್ದೆವು. ಆದರೆ ಮಕ್ಕಳು ಹೀಗೇಕೆ ಮಾಡುತ್ತಾರೆ? ಪಾಲಕರ ಪ್ರೀತಿ, ಕಾಳಜಿ ಅವರಿಗೆ ಅರ್ಥವಾಗುವುದಿಲ್ಲವೇ? ಅವರನ್ನು ವಾಪಸ್ ಮನೆಗೆ ಕರೆತರಲು ಹೇಗೆ ಮನವೊಲಿಸುವುದು?

ರಘುರಾಮ, ಬೆಂಗಳೂರು

ವಿಶೇಷವಾಗಿ, ಇವತ್ತಿನ ಮೆಟ್ರೊ ನಗರಗಳಲ್ಲಿ ಜೀವನಪದ್ಧತಿ, ರೀತಿ, ರಿವಾಜುಗಳು ನಮ್ಮ ಕಲ್ಪನೆಗೂ ಮೀರಿ ಬದಲಾಗಿವೆ. ಬೆಂಗಳೂರಿನಲ್ಲಿ ಇದು ಬೆಳೆಯುತ್ತಿರುವ ಸಂಕೀರ್ಣವಾದ ಸಾಮಾಜಿಕ ಸಮಸ್ಯೆಯಾಗಿದೆ. ಇದರಲ್ಲಿ ಯಾರದ್ದು ಸರಿ, ಯಾರದ್ದು ತಪ್ಪು ಎಂದು ನಿಖರವಾಗಿ ಬೆರಳು ಮಾಡಿ ತೋರಿಸುವುದು ಕಷ್ಟ.

ಮಕ್ಕಳನ್ನು ಬೆಳೆಸುವ ವಿಧಾನದಲ್ಲಿ ಪಾಲಕರು ಎಡವಿದ್ದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಹಾಗಂತ ನಿಮ್ಮಿಂದಲೇ ಏನೋ, ಎಲ್ಲವೂ ತಪ್ಪಾಗಿದೆ ಎಂದು ಪಶ್ಚಾತ್ತಾಪ ಪಡುವ ಅಗತ್ಯವಿಲ್ಲ. ಹಾಗೆ ಮಾಡುವುದರಿಂದ ಪ್ರಯೋಜನವಿಲ್ಲ. ಖಲೀಲ್ ಗಿಬ್ರಾನ್ ಹೇಳಿದಂತೆ, 'ನಾವು ನಮ್ಮ ಮಕ್ಕಳ ಯಜಮಾನರಲ್ಲ. ನಮ್ಮ ಮೂಲಕ ನಮ್ಮ ಮಕ್ಕಳು ಈ ಭೂಮಿಗೆ ಬರುವುದಕ್ಕೆ ಕಾರಣರಷ್ಟೇ!'. ಮಕ್ಕಳನ್ನು ಪ್ರೀತಿಸಬೇಕು. ನಮ್ಮ ಕೈಲಾದಷ್ಟು ಕಾಳಜಿಯಿಂದ ಅವರನ್ನು ಸಾಕಬೇಕು. ಅವರನ್ನು ಹೆತ್ತು, ಹೊತ್ತು ಬೆಳೆಸುವ ಪ್ರಕ್ರಿಯೆಯಲ್ಲಿ ನಮಗೆ ಸಂತೋಷ, ಸಾರ್ಥಕತೆ ಸಿಗುತ್ತದೆ. ಅಷ್ಟು ಮಾತ್ರ ಪಾಲಕರಿಗೆ ಸಿಗುವ ಸುಖ. ಇನ್ನು ಮಕ್ಕಳು ಪಾಲಕರನ್ನು ಅಷ್ಟೇ ಕಾಳಜಿಯಿಂದ, ಪ್ರೀತಿಯಿಂದ ನೋಡಿಕೊಂಡರೆ ಅದು ಪಾಲಕರ ವಿಶೇಷ ಪುಣ್ಯ. ಆದರೆ, ಮಕ್ಕಳು ಚಿಕ್ಕಂದಿನಿಂದ ಯಾವ ಪರಿಸರದಲ್ಲಿ ಬೆಳೆಯುತ್ತಾರೋ ಆ ಪರಿಸರದ ಪ್ರಭಾವಕ್ಕೆ ಒಳಗಾಗುತ್ತಾರೆ.

ಇನ್ನು, ನಿಮ್ಮ ಮನೆಯಲ್ಲಿ ಮಕ್ಕಳು ಹುಟ್ಟಿದಾಗಿನಿಂದಲೂ ಹೆಚ್ಚಾಗಿ ನೀವು ನಾಲ್ವರೇ ಇದ್ದೀರಿ. ಮನೆಗೆ ಬಂದು ಹೋಗುವವರು, ನೆಂಟರಿಷ್ಟರು ಇದ್ದಾರಾದರೂ ಯಾರಿಗೂ ಯಾರೊಂದಿಗೂ ಅವಿನಾಭಾವ ಸಂಬಂಧ ಇಲ್ಲ. ಮಕ್ಕಳು ಹಾಗೆಯೇ ಬೆಳೆದಿದ್ದಾರೆ. ಅವರಿಗೆ ಅಜ್ಜ–ಅಜ್ಜಿಯ ವಾತ್ಸಲ್ಯದ ಬಿಸುಪು ಸಿಗಲಿಲ್ಲ. ಕೂಡು ಕುಟುಂಬದ ಸಕಾರಾತ್ಮಕ ಪರಿಣಾಮ ಇರುವುದು ಇಲ್ಲಿಯೇ. ಮನೆಯಲ್ಲಿ ಎಲ್ಲರೂ ಒಟ್ಟಿಗೆ ಊಟ, ತಿಂಡಿ ಮಾಡುವ ರೂಢಿಯಿಂದಲೂ ಒಳ್ಳೆಯದಾಗುತ್ತದೆ. ನಾವಿಬ್ಬರು–ನಮಗಿಬ್ಬರು ಎನ್ನುವ ಕುಟುಂಬಕ್ಕಿಂತಲೂ ಕೂಡು ಕುಟುಂಬದಲ್ಲಿ ಇರುವವರು ಹೆಚ್ಚು ನೆಮ್ಮದಿಯಿಂದ, ಮಾನಸಿಕ ಆರೋಗ್ಯದಿಂದ ಇರುತ್ತಾರೆ. ಇದು ಕಾಲಾಂತರದಿಂದ ನಡೆದುಬಂದ ಕೌಟುಂಬಿಕ ವ್ಯವಸ್ಥೆ. ಕಾರಣಾಂತರಗಳಿಂದ ನಾವಿಬ್ಬರು–ನಮಗಿಬ್ಬರು ಕುಟುಂಬಗಳು ಹೆಚ್ಚಾಗಿವೆ. ಇದರ ಪರಿಣಾಮವನ್ನು ಈಗಿನ ಪಾಲಕರು ಅನುಭವಿಸಬೇಕಾಗಿದೆ. ಇನ್ನು, ಹದಿಹರೆಯವನ್ನು ದಾಟಿದ ಮಕ್ಕಳಿಗೆ ಸ್ವಾತಂತ್ರ್ಯ ಬೇಕು ಎನಿಸುತ್ತದೆ. ತಮ್ಮಿಚ್ಛೆಯ ಬದುಕನ್ನು ಕಟ್ಟಿಕೊಳ್ಳುವ ಅವಸರವಿರುತ್ತದೆ.

ಯಶಸ್ಸಿನ ಬಗ್ಗೆ ಏನೇನು ಕಲ್ಪನೆಗಳನ್ನು ಪಾಲಕರು ಮಕ್ಕಳ ತಲೆಯಲ್ಲಿ ತುಂಬಿರುತ್ತಾರೋ ಅವುಗಳ ಸಾಧ್ಯತೆಯನ್ನು ಸಾಧಿಸಲು ಅವರು ಮುನ್ನುಗ್ಗುತ್ತಾರೆ. ಅವರಿಗೆ ಅದಕ್ಕಿಂತಲೂ ಹೆಚ್ಚಿನ ಮಹತ್ವದ್ದು ಬೇರೆ ಯಾವುದೂ ಕಾಣುವುದಿಲ್ಲ ಅಥವಾ ಅವರಿಗೆ ಪಾಲಕರ ಇಂದಿನ ಮಾನಸಿಕ ಬೇಗುದಿಯಾಗಲೀ ಪಾಲಕರಿಗೆ ತಮ್ಮ ಅಗತ್ಯವಿದೆ ಎನ್ನುವುದಾಗಲೀ ತಿಳಿಯುವುದಿಲ್ಲ. ಅವೆಲ್ಲವೂ ಅವರು ಪಾಲಕರಾಗಿ, ಅವರಿಗೆ ನಿಮ್ಮಷ್ಟು ವಯಸ್ಸಾದಾಗ ಅರ್ಥವಾದೀತು. ಹಾಗಾಗಿ, ನೀವು ಮಕ್ಕಳ ನಿರ್ಧಾರಗಳ ಬಗ್ಗೆ ಜಾಸ್ತಿ ಚಿಂತೆ ಮಾಡಬೇಡಿ. ಅವರನ್ನು ನಿಮ್ಮ ಇಚ್ಛೆಯಂತೆ ಪ್ರೀತಿಸಿ. ನಿಮ್ಮ ಬೇಕು ಬೇಡಗಳ ಬಗ್ಗೆ ಅವರೊಂದಿಗೆ ಮುಕ್ತವಾಗಿ ಮಾತನಾಡಿ. ಅವರು ನಿಮ್ಮಿಂದ ದೂರವಾದರು ಎಂದು ಕೊರಗಬೇಡಿ. ಅವರ ಸ್ವಾತಂತ್ರ್ಯವನ್ನು ಗೌರವಿಸಿ. ನಿಮ್ಮ ನಿರೀಕ್ಷೆಯನ್ನು ಅವರಿಗೆ ತಿಳಿಸಿ. ಅವರೂ ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬಹುದು. ❖

ದಿನಪತ್ರಿಕೆ ಎಂಬ ಜಗದ ಕಿಟಕಿ

ಸಾಂದರ್ಭಿಕ ಚಿತ್ರ

• ಸದಾಶಿವ ಸೊರಟೂರು

ಪಠ್ಯಪುಸ್ತಕದ ಒಂದಷ್ಟು ಪ್ರಶ್ನೋತ್ತರ, ಅಷ್ಟೊ ಇಷ್ಟೊ ಅಂಕಗಳು ಮತ್ತು ಅಲ್ಲಿಂದ ಸೀದಾ ಮೊಬೈಲ್ ಪರದೆಗೆ ಜಾರುವುದು... ಇದು ಈಗಿನ ಮಕ್ಕಳ ಜಗತ್ತು. ಇವರಿಗೆ ಭಾಷೆ ಗೊತ್ತು, ಅದರ ಸ್ವಾದ ಗೊತ್ತಿಲ್ಲ. ವಿಷಯ ಗೊತ್ತು, ಅದರ ಒಳನೋಟ ಗೊತ್ತಿಲ್ಲ. ಮೊನ್ನೆ ರಸಪ್ರಶ್ನೆ ಸ್ಪರ್ಧೆಯೊಂದರಲ್ಲಿ, 'ದೇಶದ ಯಾವ ನಗರದ ಮಾಲಿನ್ಯ ಉಸಿರುಗಟ್ಟಿಸುವಷ್ಟು ಕೆಟ್ಟುಹೋಗಿದೆ?' ಎಂದು ಶಿಕ್ಷಕರೊಬ್ಬರು ಕೇಳಿದಾಗ, ಉತ್ತರ ತಿಳಿಯದೆ ಮಕ್ಕಳು ಕಂಗಾಲಾದರು.

ಶಾಲೆ, ಪರೀಕ್ಷೆ, ಅಂಕಗಳು, ಮೊಬೈಲ್, ರೀಲ್ಸ್– ಇಷ್ಟು ಬಿಟ್ಟರೆ ಆಚೆಗೆ ಏನೂ ಗೊತ್ತಿಲ್ಲ. ಮಕ್ಕಳ ಎದೆಯಲ್ಲಿ ಭಾಷೆ ಇದೆ, ಆದರೆ ಅದು ಇರುವುದು ಪದಗಳಲ್ಲಿ ಮಾತ್ರ. ಅವರು ಬರೆಯುವ ವಾಕ್ಯಗಳು ಅವರವಲ್ಲ. ಕಾಲದ ವಿವೇಚನೆ ಇಲ್ಲ.

ಇಂತಹ ಸ್ಥಿತಿಯಲ್ಲಿ ನಮ್ಮ ಮಕ್ಕಳಿಗೆ ತರಗತಿಯಿಂದ ಆಚೆ ಇಣುಕಲು ಕಿಟಕಿಯೊಂದು ಬೇಕಾಗಿದೆ. ಮೊಬೈಲ್‌ನಲ್ಲಿ ಕಾಣುವ ಜಗತ್ತಿಗಿಂತ ಬೇರೆಯದೇ ಆದ ಜಗತ್ತೊಂದು ಇದೆ ಎಂದು ಅವರಿಗೆ ತೋರಿಸಬೇಕಿದೆ. ಬಹುಶಃ ಈ ಕೆಲಸಗಳನ್ನು 'ದಿನಪತ್ರಿಕೆಗಳ ಓದು' ಸಮರ್ಥವಾಗಿ ಮಾಡಬಲ್ಲದು.

ದೊಡ್ಡವರು ಪತ್ರಿಕೆಗಳಿಂದ ದೂರ ಸರಿಯುತ್ತಿರುವುದಕ್ಕಿಂತ ಮಕ್ಕಳು ಪತ್ರಿಕೆಯಿಂದ ದೂರ ಉಳಿಯುವುದು ಬಹಳ ಅಪಾಯಕಾರಿ. ಅವರ ಕೈಯಲ್ಲಿ ಅಮೂಲ್ಯವಾದ ನಾಳೆಗಳಿವೆ. ಇಂತಹ ನಾಳೆಗಳಲ್ಲಿ ಇರಬೇಕಾದ ಅವರೇ ದುರ್ಬಲರಾಗಿ ಹೋದರೆ ಹೇಗೆ? ನಾವು ಪತ್ರಿಕೆಗಳನ್ನು ಉಳಿಸುವುದಕ್ಕಾಗಿ ಓದಬೇಕಿಲ್ಲ, ನಾವು ಉಳಿಯುವುದಕ್ಕಾಗಿ ಪತ್ರಿಕೆಗಳನ್ನು ಓದಬೇಕು.

ಬಹುಶಃ ಈ ಅಪಾಯವನ್ನು ಅರಿತು ಉತ್ತರಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳು ಶಾಲೆಯಲ್ಲಿ ದಿನಪತ್ರಿಕೆಯ ಓದನ್ನು ಕಡ್ಡಾಯಗೊಳಿಸಿವೆ. ನಮ್ಮ ರಾಜ್ಯದ ಶಾಲೆಗಳಲ್ಲಿ ನಿತ್ಯ ದಿನಪತ್ರಿಕೆ ಓದು ಚಾಲ್ತಿಯಲ್ಲಿದ್ದರೂ ಅದರ ಸರಿಯಾದ ಅನುಪಾಲನೆ ಸಾಧ್ಯವಾಗುತ್ತಿಲ್ಲ. ಇಲ್ಲೂ ಅದನ್ನು ಕಡ್ಡಾಯಗೊಳಿಸಬೇಕೆಂಬ ಒತ್ತಾಯ ಕೇಳಿಬಂದಿದೆ ಮತ್ತು ಅದು ಅಗತ್ಯವಾದ ಕ್ರಮವೂ ಹೌದು.

> **ಉತ್ತರಪ್ರದೇಶ, ರಾಜಸ್ಥಾನ ರಾಜ್ಯಗಳ ಶಾಲೆಗಳಲ್ಲಿ ದಿನಪತ್ರಿಕೆಯ ಓದು ಕಡ್ಡಾಯ. ಕರ್ನಾಟಕದಲ್ಲೂ ಕಡ್ಡಾಯಗೊಳಿಸಲು ಕೇಳಿಬಂದಿದೆ ಒತ್ತಾಯ**

ಓದುವಿಕೆ ರೂಢಿಸುವ ಬಗೆ

1. ಶಾಲೆಯಲ್ಲಿ ನಿತ್ಯ ಬೆಳಗಿನ ಅವಧಿಯ 20 ನಿಮಿಷವನ್ನು ಅದಕ್ಕಾಗಿ ಮೀಸಲಿಡಬೇಕು. ಪ್ರತಿದಿನ ಒಂದು ಮಗು ಜೋರಾಗಿ ಪತ್ರಿಕೆ ಓದಬೇಕು. ಅಲ್ಲೇ ಶಿಕ್ಷಕರು ಪ್ರಮುಖ ವಿಷಯವನ್ನು ವಿವರಿಸಿ ಹೇಳಬೇಕು.
2. ಪ್ರತಿದಿನ ಪತ್ರಿಕೆಯಿಂದ ಐದು ಕಷ್ಟಕರ ಕನ್ನಡ ಪದಗಳನ್ನು ಆಯ್ಕೆ ಮಾಡಿ, ಅವುಗಳ ಅರ್ಥ ಮತ್ತು ವಾಕ್ಯ ಪ್ರಯೋಗವನ್ನು ಕಪ್ಪುಹಲಗೆಯ ಮೇಲೆ ಬರೆಯಬೇಕು.
3. ವಾರಪೂರ್ತಿ ಓದಿದ ಸುದ್ದಿಗಳ ಪೈಕಿ ತಮಗೆ ಇಷ್ಟವಾದ ಲೇಖನಗಳನ್ನು ಕತ್ತರಿಸಿ, ನೋಟಿಸ್ ಬೋರ್ಡ್‌ನಲ್ಲಿ ಅಂಟಿಸಿ, ಅದರ ಬಗ್ಗೆ ಸ್ವಂತ ವಿಶ್ಲೇಷಣೆ ಬರೆಯಲು ಪ್ರೋತ್ಸಾಹಿಸಬೇಕು. ಇದನ್ನು ಭಿತ್ತಿಪತ್ರಿಕೆಯಂತೆ ನಿರ್ವಹಿಸಬೇಕು.
4. ಶಾಲೆಯಲ್ಲಿ ತಿಂಗಳಿಗೊಮ್ಮೆ ಪದಬಂಧ ಮತ್ತು ಸುಡೊಕು ತುಂಬುವ ಸ್ಪರ್ಧೆಯನ್ನು ಏರ್ಪಡಿಸಬೇಕು.
5. ಪತ್ರಿಕೆಗಳಲ್ಲಿನ 'ಮಕ್ಕಳ ವಿಭಾಗ'ಕ್ಕೆ ಕಥೆ, ಕವನ, ಲೇಖನ ಬರೆಯುವಂತೆ ಮಕ್ಕಳನ್ನು ಪ್ರೋತ್ಸಾಹಿಸಬೇಕು.
6. 'ಸಂಪಾದಕೀಯ ಪುಟ'ದಲ್ಲಿನ ಲೇಖನಗಳನ್ನು ಓದಲು 8ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಮರುದಿನ ಅದರ ಬಗ್ಗೆ ಸಂವಾದ ಏರ್ಪಡಿಸಬೇಕು.
7. ದಿನನಿತ್ಯ ಕನಿಷ್ಠ ಎರಡು ಪತ್ರಿಕೆಗಳನ್ನಾದರೂ ಓದಿಸುವ ರೂಢಿ ಬೆಳೆಸಬೇಕು.

ಯಾಕೆ ಓದಬೇಕು?

ಶಾಲೆಯ ಪಠ್ಯಕ್ಕೆ ಸೀಮಿತ ಚೌಕಟ್ಟು ಇದೆ. ಅಷ್ಟು ಮಾತ್ರ ಸಾಲುವುದಿಲ್ಲ. ದಿನಪತ್ರಿಕೆಗಳು ಪಠ್ಯದ ಆಚೆಗಿನ ಕಿಟಕಿಗಳು. ಅವು ಜಗತ್ತಿನ ಎಲ್ಲಾ ಕಡೆ ನಡೆಯುವ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಯ ಮಾಹಿತಿಯನ್ನು ಹೊತ್ತು ತರುತ್ತವೆ. ಅಲ್ಲದೆ ಅವು ಬರೀ ಮಾಹಿತಿಯ ಮೂಟೆಗಳಲ್ಲ, ಬದಲಿಗೆ ಜಗತ್ತನ್ನು ನೋಡುವ ದೃಷ್ಟಿಕೋನವನ್ನು ಬದಲಿಸುವ ಅಸ್ತ್ರಗಳು.

ಬರವಣಿಗೆಯ ಶೈಲಿ ಮತ್ತು ಭಾಷಾ ಶುದ್ಧತೆಯನ್ನು ಕಲಿಯಲು ದಿನಪತ್ರಿಕೆಗಿಂತ ಉತ್ತಮ ಶಿಕ್ಷಕರಿಲ್ಲ. ಹೊಸ ಶಬ್ದಗಳ ಪರಿಚಯ, ಸೊಗಸಾದ ವಾಕ್ಯ ರಚನೆಯ ಶೈಲಿ, ಕಾಗುಣಿತದ ದೋಷಗಳು ಕಡಿಮೆಯಾಗುವುದು, ಸೊಗಸಾದ ಶುದ್ಧ ಮಾತುಗಾರಿಕೆ ಇವೆಲ್ಲವೂ ನಿತ್ಯ ಪತ್ರಿಕೆ ಓದುವುದರಿಂದ ಸಾಧ್ಯವಾಗುತ್ತದೆ.

ಪತ್ರಿಕೆಗಳ ಓದುವಿಕೆಯು ವಿಮರ್ಶಾತ್ಮಕ ಚಿಂತನೆಯನ್ನು ಕಲಿಸುತ್ತದೆ. ಅದರಲ್ಲಿ ಬರುವ 'ಸಂಪಾದಕೀಯ ಪುಟ'ವು ನಿಖರವಾದ ವಿಷಯ ವಿಶ್ಲೇಷಣೆ ನೀಡುತ್ತದೆ. ಸಮಸ್ಯೆಯ ಸಾಧಕ-ಬಾಧಕಗಳೇನು, ಸಮಾಜದಲ್ಲಿನ ಜ್ವಲಂತ ಸಮಸ್ಯೆಗಳಿಗೆ ಪರಿಹಾರವೇನು ಎಂಬುದರ ಬಗ್ಗೆ ಲೇಖಕರು ಮಂಡಿಸುವ ವಿಚಾರಗಳು ಮಕ್ಕಳಲ್ಲಿ ಸ್ವತಂತ್ರವಾಗಿ ಆಲೋಚಿಸುವ ಗುಣವನ್ನು ಬೆಳೆಸುತ್ತವೆ. ಇದು ಬರೀ ಓದಲ್ಲ, ಗ್ರಹಿಸಿ ತರ್ಕಬದ್ಧವಾಗಿ ಯೋಚಿಸುವ ಪ್ರಕ್ರಿಯೆ.

ಮುಂದೆ ಯಾವುದೇ ಹೆಚ್ಚಿನ ಓದು ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕಾದರೂ ಪ್ರಚಲಿತ ವಿದ್ಯಮಾನಗಳ ಜ್ಞಾನ ಅತ್ಯಗತ್ಯ. ಈಗಿನಿಂದಲೇ ಪತ್ರಿಕೆ ಓದುವ ಅಭ್ಯಾಸವಿದ್ದರೆ, ಮುಂದೆ ಇಂತಹ ಪರೀಕ್ಷೆಗಳಿಗಾಗಿ ಪ್ರತ್ಯೇಕವಾಗಿ ಸಿದ್ಧತೆ ಮಾಡಿಕೊಳ್ಳುವುದು ಬೇಕಾಗುವುದಿಲ್ಲ. ನಿರಂತರ ಓದುವಿಕೆ ಮಾತ್ರ ಇದನ್ನು ಸಾಧ್ಯವಾಗಿಸುತ್ತದೆ.

ಭಾನುವಾರದ ವಿಶೇಷ ಪುಟಗಳಲ್ಲಿ ಬರುವ ಕವನಗಳು, ಕಥೆಗಳು, ಚಿತ್ರಕಲೆಗಳು, ಒಗಟುಗಳಂತಹವು ಮಕ್ಕಳ ಸೃಜನಶೀಲತೆಯನ್ನು ಪ್ರಚೋದಿಸುತ್ತವೆ. ಸಾಧಕರ ಪರಿಚಯವು ಮಕ್ಕಳಲ್ಲಿ ಸ್ಫೂರ್ತಿಯನ್ನು ತುಂಬುತ್ತದೆ, ತಾವು ಕೂಡ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬ ಆಕಾಂಕ್ಷೆಯನ್ನು ಹುಟ್ಟುಹಾಕುತ್ತದೆ.

ಒಂದು ದಿನಪತ್ರಿಕೆಯು ನೂರಾರು ಪುಸ್ತಕಗಳ ಸಾರವನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುತ್ತದೆ. ನೆನಪಿರಲಿ, ಓದು ಮಾತ್ರ ಒಬ್ಬ ಮನುಷ್ಯನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡಬಲ್ಲದು. ಶಾಲಾ ಹಂತದಲ್ಲೇ ಪತ್ರಿಕೆ ಓದುವ ಸಂಸ್ಕೃತಿಯನ್ನು ಬೆಳೆಸಿಕೊಂಡರೆ, ಮಗು ಶಾಲಾ ಪಠ್ಯವನ್ನು ಮೀರಿ ಬೆಳೆಯುತ್ತದೆ. ಸಮಾಜದ ವಾಸ್ತವ ಸ್ಥಿತಿಯ ಅರಿವು ಪಡೆಯುತ್ತದೆ. ಇದರಿಂದ, ನಾಳೆ ಒಬ್ಬ ಒಳ್ಳೆಯ ನಾಗರಿಕನಾಗಿ ಬೆಳೆಯಲು ಅನುವಾಗುತ್ತದೆ. ❖

ವಿದ್ಯಾರ್ಥಿ ವೇತನ ಕೈಪಿಡಿ

ನಾಯಕತ್ವದ ಕೌಶಲ ಸಿದ್ಧಿಸಿಕೊಳ್ಳಬೇಕೆ?

ಆಸ್ಪೈರ್ ಲೀಡರ್ಸ್ ಕಾರ್ಯಕ್ರಮವು ನಾಯಕತ್ವ ತರಬೇತಿಗಾಗಿ ಆಸ್ಪೈರ್ ಇನ್‌ಸ್ಟಿಟ್ಯೂಟ್ ವಿನ್ಯಾಸ ಮಾಡಿರುವ ಒಂದು ಆನ್‌ಲೈನ್ ಕೋರ್ಸ್ ಆಗಿದೆ. ವಿದ್ಯಾರ್ಥಿಗಳು ನಾಯಕತ್ವದ ಕೌಶಲಗಳನ್ನು ವೃದ್ಧಿಸಿಕೊಂಡು, ಕ್ರಿಯಾಶೀಲ ವೃತ್ತಿಪರರಾಗಿ ರೂಪುಗೊಳ್ಳಲು ಅನುವಾಗುವಂತೆ ರೂಪಿಸಿರುವ ಕಾರ್ಯಕ್ರಮ ಇದಾಗಿದೆ.

ಅರ್ಹತೆ: ಆರ್ಥಿಕವಾಗಿ ಹಿಂದುಳಿದ, 18ರಿಂದ 29ರ ವಯೋಮಿತಿಯಲ್ಲಿ ಇರುವ ವಿದ್ಯಾರ್ಥಿಗಳು ಇದರ ವ್ಯಾಪ್ತಿಗೆ ಒಳಪಡುತ್ತಾರೆ. ಪದವಿ ಕೋರ್ಸ್‌ಗೆ ದಾಖಲಾದವರು ಅಥವಾ ಪೂರ್ಣಗೊಳಿಸಿದವರು ಅರ್ಜಿ ಸಲ್ಲಿಸಬಹುದು. ಮೊದಲ ಪೀಳಿಗೆಯ ಓದುಗರು ಅರ್ಹರಾಗಿರುತ್ತಾರೆ.

ಪ್ರಯೋಜನ: ಹಾರ್ವರ್ಡ್ ವಿಶ್ವವಿದ್ಯಾಲಯದ ಅಧ್ಯಾಪಕರು ನಡೆಸುವ ತರಬೇತಿ ಮತ್ತು ಕಾರ್ಯಕ್ರಮಗಳಿಗೆ ಉಚಿತ ಪ್ರವೇಶದ ಜೊತೆಗೆ ಇತರ ಅನುಕೂಲಗಳು ಇರುತ್ತವೆ.

ಅರ್ಜಿ ಸಲ್ಲಿಸಲು ಕೊನೇ ದಿನ: 23-01-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಮಾಹಿತಿಗೆ: Short Url: www.b4s.in/praja/ALPS2

ಅಂಗವಿಕಲರಿಗಾಗಿ ಆಧಾರ್ ಕೌಶಲ

ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ನೀಡುವ ಅವಕಾಶ ಇದು. ಯಾವುದೇ ಭೇದವಿಲ್ಲದೆ ಎಲ್ಲರಿಗೂ ಸಮಾನ ಶಿಕ್ಷಣದ ಅವಕಾಶಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.

ಅರ್ಹತೆ: ಸಾಮಾನ್ಯ ಅಥವಾ ವೃತ್ತಿಪರ ಪದವಿ ಕೋರ್ಸ್‌ಗಳ ಯಾವುದೇ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ಅಂಗವಿಕಲರು ಅರ್ಜಿ ಸಲ್ಲಿಸಬಹುದು. ಭಾರತೀಯರಾಗಿರಬೇಕು. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಕುಟುಂಬದ ಒಟ್ಟು ವಾರ್ಷಿಕ ಆದಾಯ ₹ 3 ಲಕ್ಷದ ಒಳಗಿರಬೇಕು.

ಆರ್ಥಿಕ ನೆರವು: ₹ 10,000ದಿಂದ ₹ 50,000ದವರೆಗೆ

ಅರ್ಜಿ ಸಲ್ಲಿಸಲು ಕೊನೇ ದಿನ: 13-01-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/AKSP2 ❖

ಉದ್ಯೋಗ ಕಿರಣ

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಕ್ರಿಯೇಟಿವ್ ಕಂಟೆಂಟ್: ಇನೋವ್‌ಫಿಕ್ಸ್ ಪ್ರೈವೇಟ್ ಲಿಮಿಟೆಡ್ (Innovfix Private Limited) ಸಂಸ್ಥೆಯು ಕ್ರಿಯೇಟಿವ್ ಕಂಟೆಂಟ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ವಿದ್ಯಾರ್ಥಿಗಳು ಕಂಟೆಂಟ್ ಮ್ಯಾನೇಜ್‌ಮೆಂಟ್, ಕಂಟೆಂಟ್ ರೈಟಿಂಗ್, ಕ್ರಿಯೇಟಿವ್ ಥಿಂಕಿಂಗ್, ಕ್ರಿಯೇಟಿವ್ ರೈಟಿಂಗ್, ಕ್ರಿಯೇಟಿವಿಟಿ, ಇಂಗ್ಲಿಷ್‌ನಲ್ಲಿ ಮಾತನಾಡುವ ಮತ್ತು ಬರೆಯುವ ಸಾಮರ್ಥ್ಯ, ಸ್ಕ್ರಿಪ್ಟ್ ರೈಟಿಂಗ್ ಮತ್ತು ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್‌ನಲ್ಲಿ ಜ್ಞಾನ ಉಳ್ಳವರಾಗಿರಬೇಕು. ಜನವರಿ 21ರೊಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 5,000. ಸಂಪರ್ಕ: https://tinyurl.com/vkf3mesh.

ಲಾ/ಲೀಗಲ್

ಓಮ್‌ವಿನ್ (Omvin) ಸಂಸ್ಥೆಯು ಲಾ/ಲೀಗಲ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಲೀಗಲ್ ಡ್ರ್ಯಾಫ್ಟಿಂಗ್, ಲೀಗಲ್ ರಿಸರ್ಚ್, ಲೀಗಲ್ ರೈಟಿಂಗ್ ಜ್ಞಾನ ಇರುವ ವಿದ್ಯಾರ್ಥಿಗಳು ಜನವರಿ 21ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 5,000–₹ 8,000. ಸಂಪರ್ಕ: https://tinyurl.com/2n3w2v8s. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ವಿಶ್ವದ ಯಾವುದೇ ಶಕ್ತಿ ಬಣಕ್ಕೆ ಸೇರದ ನೀತಿಯು
ಎ) ನೀಲಿ ನೀರಿನ ನೀತಿ ಬಿ) ವರ್ಣಭೇಧ ನೀತಿ
ಸಿ) ಅಲಿಪ್ತ ನೀತಿ ಡಿ) ಮಾನವ ಹಕ್ಕುಗಳ ನೀತಿ
ಉತ್ತರ:– (ಸಿ)ಅಲಿಪ್ತ ನೀತಿ

2) ಕೇಂದ್ರದಲ್ಲಿ ದ್ವಿ ಸರ್ಕಾರವನ್ನು ಸ್ಥಾಪಿಸಲು ಅವಕಾಶ ಮಾಡಿದ ಕಾಯ್ದೆ
ಎ) 1773ರ ರೆಗ್ಯೂಲೇಟಿಂಗ್ ಕಾಯ್ದೆ
ಬಿ) 1909 ರ ಭಾರತೀಯ ಪರಿಷತ್ ಕಾಯ್ದೆ
ಸಿ) 1919ರ ಭಾರತ ಸರ್ಕಾರ ಕಾಯ್ದೆ
ಡಿ) 1935ರ ಭಾರತ ಸರ್ಕಾರ ಕಾಯ್ದೆ
ಉತ್ತರ:–(ಡಿ) 1935ರ ಭಾರತ ಸರ್ಕಾರ ಕಾಯ್ದೆ

3) ಭಾರತದಲ್ಲಿ ಶೇಕಡ ಎಷ್ಟು ಭೂಭಾಗ ಅರಣ್ಯಗಳಿಂದ ಕೂಡಿದೆ?
ಎ) ಶೇ 21.02 ಬಿ) ಶೇ. 33.3
ಸಿ) ಶೇ. 16.3 ಡಿ) ಶೇ, 44.2
ಉತ್ತರ:– (ಎ) ಶೇ 21.02

4) ಇವುಗಳಲ್ಲಿ ಉಳಿದವುಗಳಿಂದ ಭಿನ್ನವಾಗಿರುವುದು
ಎ) ಆಕ್ಸೀಸ್ ಬಿ) ಕದನ ಬಾಂಧವ್ಯತ್ರಯ
ಸಿ) ಕದನ ಸೌಹಾರ್ದತ್ರಯ ಡಿ) ಬೂದು ಅಂಗಿದಳ
ಉತ್ತರ:– (ಡಿ) ಬೂದು ಅಂಗಿದಳ

5) ಇವರು ಯಾರು? ಇವರ ಕೃತಿಯನ್ನು ಗುರುತಿಸಿ



ಎ) ಜವಾಹರ್ ಲಾಲ್ ನೆಹರು – ಡಿಸ್ಕವರಿ ಆಫ್ ಇಂಡಿಯಾ
ಬಿ) ಮಹಾತ್ಮ ಗಾಂಧಿ – ಎಕ್ಸ್‌ಪರಿಮೆಂಟ್ ವಿಥ್ ಥ್ರೂತ್
ಸಿ) ರಬೀಂದ್ರನಾಥ್ ಟ್ಯಾಗೋರ್– ಗೀತಾಂಜಲಿ
ಡಿ) ಬಾಲಗಂಗಾಧರ್ ತಿಲಕ್– ಗೀತಾ ರಹಸ್ಯ
ಉತ್ತರ:–(ಬಿ) ಮಹಾತ್ಮ ಗಾಂಧಿ– ಎಕ್ಸ್‌ಪರಿಮೆಂಟ್ ವಿಥ್ ಥ್ರೂತ್

6) ಮುಂಬೈ ಅನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯಲು ಕಾರಣ__________
ಎ) ಇದು ಅತಿಹೆಚ್ಚು ಹತ್ತಿ ಗಿರಣಿಯನ್ನು ಹೊಂದಿದೆ.
ಬಿ) ಇದು ಮಾಹಿತಿ ತಂತ್ರಜ್ಞಾನದ ಕೇಂದ್ರವಾಗಿದೆ
ಸಿ) ಇದು ಸಕ್ಕರೆ ಕೈಗಾರಿಕೆಗೆ ಪ್ರಸಿದ್ಧವಾಗಿದೆ.
ಡಿ) ಇದು ಅಲ್ಯುಮಿನಿಯಂ ಕೈಗಾರಿಕೆಗೆ ಪ್ರಸಿದ್ಧವಾಗಿದೆ.
ಉತ್ತರ:– (ಎ) ಇದು ಅತಿಹೆಚ್ಚು ಹತ್ತಿ ಗಿರಣಿಯನ್ನು ಹೊಂದಿದೆ.

7) ವಿಶ್ವ ಸಂಸ್ಥೆಯ ಪ್ರಧಾನ ಕಛೇರಿ ಇರುವ ನಗರ__________
ಎ) ಪ್ಯಾರಿಸ್ ಬಿ) ವಾಷಿಂಗ್‌ಟನ್ ಡಿಸಿ
ಸಿ) ನ್ಯೂಯಾರ್ಕ್ ಡಿ) ರೋಮ್
ಉತ್ತರ:– (ಸಿ) ನ್ಯೂಯಾರ್ಕ್

8) ರಾಷ್ಟ್ರೀಯ ಉಳಿತಾಯ ಪತ್ರಗಳನ್ನು __________ ಇಲಾಖೆಯು ನೀಡುತ್ತದೆ.
ಎ) ಸಹಕಾರ ಬ್ಯಾಂಕ್ ಬಿ) ಸಹಕಾರ ಪತ್ತಿನ ಸೊಸೈಟಿ
ಸಿ) ಅಂಚೆ ಇಲಾಖೆ ಡಿ) ಯಾರೂ ಅಲ್ಲ
ಉತ್ತರ: (ಸಿ) ಅಂಚೆ ಇಲಾಖೆ

9) ಇವುಗಳಲ್ಲಿ ಯೋಜನೇತರ ವೆಚ್ಚವು__________
ಎ) ಕೃಷಿ ವೆಚ್ಚ ಬಿ) ಸಾರಿಗೆ ವೆಚ್ಚ
ಸಿ) ರಕ್ಷಣಾ ವೆಚ್ಚ ಡಿ) ಶೈಕ್ಷಣಿಕ ವೆಚ್ಚ
ಉತ್ತರ;– ಸಿ) ರಕ್ಷಣಾ ವೆಚ್ಚ

10) __________ನ ಬೆಂಬಲದಿಂದ 1829ರಲ್ಲಿ ಸತಿಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು.
ಎ) ವಿಲಿಯಂ ಬೆಂಟಿಂಕ್ ಬಿ) ಮೌಂಟ್ ಬ್ಯಾಟನ್
ಸಿ) ಲಾರ್ಡ್ ಡಫರಿನ್ ಡಿ) ಲಾರ್ಡ್ ಇರ್ವಿನ್
ಉತ್ತರ:– (ಎ) ವಿಲಿಯಂ ಬೆಂಟಿಂಕ್

11) ಹಾಗೆಯೇ ದೇಶದಲ್ಲಿ ಉತ್ಪಾದನೆಯಾಗುವ ಆದಾಯ ಮತ್ತು ಸಂಪತ್ತು ಬಡವ–ಬಲ್ಲಿದ, ನಗರ–ಗ್ರಾಮೀಣ ಎಂಬ ಯಾವುದೇ ತಾರತಮ್ಯವಿಲ್ಲದೆ ಸಮಾಜದ ಎಲ್ಲ ಜನರಲ್ಲಿ ಆದಷ್ಟು ಸಮಾನವಾಗಿ ಹಂಚಿಕೆಯಾಗ ಬೇಕಾಗುತ್ತದೆ. ಇದನ್ನೇ __________ಎನ್ನುತ್ತಾರೆ.
ಎ) ಆರ್ಥಿಕ ಅಸ್ಥಿರತೆ ಬಿ) ಸಾಮಾಜಿಕ ನ್ಯಾಯ
ಸಿ) ಸಾಮಾಜಿಕ ಸಂಘರ್ಷ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:–(ಬಿ) ಸಾಮಾಜಿಕ ನ್ಯಾಯ

12) ಸಂವಿಧಾನದ . __________ವಿಧಿಯ ಅಸ್ಪೃಶ್ಯತಾ ಆಚರಣೆಯ ಒಂದು ಶಿಕ್ಷಾರ್ಹ ಅಪರಾಧ ಎಂದಿದೆ.
ಎ) 11ನೇಯ ವಿಧಿ ಬಿ) 17ನೇಯ ವಿಧಿ
ಸಿ) 13ನೇಯ ವಿಧಿ ಡಿ) 15ನೇಯ ವಿಧಿ
ಉತ್ತರ: (ಬಿ) 17ನೇಯ ವಿಧಿ

13) ಹಸಿರು ಕ್ರಾಂತಿಯನ್ನು ಆಹಾರ ಧಾನ್ಯಗಳ ಉತ್ಪಾದನೆ ಮಾಡಲಾಗಿತ್ತು, ಹಾಗಾದರೆ ನೀಲಿ ಕ್ರಾಂತಿ ಯಾವುದಕ್ಕಾಗಿ ಮಾಡಲಾಗಿತ್ತು?
ಎ) ಮೊಟ್ಟೆಗಳ ಉತ್ಪಾದನೆ ಬಿ) ಎಣ್ಣೆ ಬೀಜಗಳ ಉತ್ಪಾದನೆ
ಸಿ) ಮೀನುಗಳ ಉತ್ಪಾದನೆ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಸಿ) ಮೀನುಗಳ ಉತ್ಪಾದನೆ

14) ಬಂಗಾಲದಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೆ ತಂದವನು ಯಾರು?
ಎ) ರಾಬರ್ಟ್ ಕ್ಲೈವ್ ಬಿ) ಡೂಪ್ಲೆ
ಸಿ) ವಾಸ್ಕೋಡಿಗಾಮ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– (ಎ) ರಾಬರ್ಟ್ ಕ್ಲೈವ್

15) ಬಕ್ಸಾರ್ ಕದನದಲ್ಲಿ ಮೊಘಲ್ ಚಕ್ರವರ್ತಿ ಷಾ ಅಲಂ, ಔಧ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್‌ಖಾಸಿಮರ ತ್ರಿಮೈತ್ರಿಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಈ ಘಟನೆ ನಡೆದ ವರ್ಷ ಯಾವುದು?
ಎ) 1734 ಬಿ) 1526
ಸಿ) 1764 ಡಿ) 1943
ಉತ್ತರ:– (ಸಿ) 1764

16) ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದವನು. ಯಾರು?
ಎ) ಜೋಜೋ ಮೆಥ್ಯೂ ಬಿ) ರೋಜ್ ಮೇರಿ
ಸಿ) ಲಾರ್ಡ್ ಮೆಕಾಲೆ ಡಿ) ಎಡ್ಮಂಡ್ ಬರ್ಕ್
ಉತ್ತರ:– (ಡಿ) ಎಡ್ಮಂಡ್ ಬರ್ಕ್

17) ಬಂಗಾಳ, ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳು. ಪ್ರತ್ಯೇಕವಾಗಿಯೂ ಮತ್ತು ಸ್ವತಂತ್ರವಾಗಿಯೂ ಕಾರ್ಯ ನಿರ್ವಹಿಸುತ್ತಿದ್ದವು. __________ ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.
ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

18) ಪ್ರಥಮ ಆಂಗ್ಲೋ–ಮರಾಠ ಯುದ್ಧದ ಕೊನೆಯಲ್ಲಿ ಸಹಿ ಹಾಕಲಾದ ಒಪ್ಪಂದ ಯಾವುದು?
ಉತ್ತರ:– ಸಾಲ್ಬಾಯ್ ಒಪ್ಪಂದ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾ ರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

REVISION: MODEL QUESTIONS

I. Pick the correct option among the four given options for ALL of the following questions:

1. The S.I. unit of electric charge is
(a) coulomb metre (b) coulomb per metre
(c) coulomb (d) per coulomb
Ans:- (C) coulomb

2. The angle between equipotential surface and electric field is
(a) 90° (b) 0°
(c) 180° (d) 45°
Ans:- (A) 90°

3. An electron emitted in beta radiation originates from
a) free electrons existing in the nuclei
b) inner orbits of an atom
c) photon escaping from the nucleus
d) decay of a neutron in a nuclei
Ans: (c) photon escaping from the nucleus
Expln: An electron emitted in beta radiation originates from photons escaping from the nucleus.

4. How can the fringe width increase in Young's double-slit experiment?
a) By decreasing the width of the slit
b) By reducing the separation of slits
c) By reducing the wavelength of the slits
d) By decreasing the distance between slits and the screen
Ans: (b) By decreasing the separation of slits
Expln: The fringe width can be increased in Young's double-slit experiment by decreasing the separation of slits.

5. An ammeter, a voltmeter V and a resistance R are connected as shown. Ammeter reads 2A. Voltmeter reading is 10V. Then R is



a) 5Ω **b) >5Ω**
c) <5Ω
d) Dependent on resistance of voltmeter
Ans:- c) <5Ω

6. Which of the following graphs represent the variation of electric field intensity E(*r*) due to a charged spherical shell of radius R with distance *r* from its centre?



Ans:- C

7. A moving coil galvanometer can be converted into a voltmeter by connecting
(a) a low resistance in parallel with galvanometer.
(b) a low resistance in series with galvanometer.
(c) a high resistance in parallel with galvanometer.
(d) a high resistance in series with galvanometer.
Ans:- (d) a high resistance in series with galvanometer

8. The column-I is the list of materials and the column-II, the list of energy band gaps E□. Identify the correct match.

Column-I	Column-II
(i) conductors	(a) $E_g < 3\ eV$
(ii) insulators	(b) $E_g = 0\ eV$
(iii) semiconductors	(c) $E_g > 3\ eV$

(a) (i) - (a), (ii) - (b), (iii) - (c)
(b) (i) - (b), (ii) - (a), (iii) - (c)
(c) (i) - (c), (ii) - (a), (iii) - (b)
(d) (i) - (b), (ii) - (c), (iii) - (a)
Ans:- (d) (i) - (b), (ii) - (c), (iii) - (a)

9. Fill in the blanks by choosing appropriate answer given in the bracket for ALL the following questions:(photon, polar, zero, infinite, phase, phasor)

1. A molecule possessing permanent dipole moment is called __________ molecule.
Ans:- **polar**
2. The net magnetic flux through any closed surface is __________.
Ans:- **zero**
3. A rotating vector used to represent alternating quantities is called __________.
Ans: **phasor**
4. A wavefront is a surface of constant __________.
Ans; **phase**
5. In interaction with matter, light behaves as if it is made up of packet of energy called __________.
Ans;- **photon**

Answer the following questions:-

1. Write an expression for refractive index of the material of prism in terms of its angle and minimum deviation. Does it hold good for all positions?

Ans:- An expression for refractive index of the material of prism in terms of its angle and minimum deviation is –

$$n = \frac{\sin \frac{(A + \delta_m)}{2}}{\sin \frac{A}{2}}$$

where, n is the refractive index of the material of prism,
δ_m is the minimum deviation position
A is angle of the prism
It does not hold good for all positions.

(Contd.....)

ಉಪನೋಂದಣಾಧಿಕಾರಿ ಅಮಾನತು

ಕಾವೇರಿ 2.0 ತಂತ್ರಾಂಶದಲ್ಲಿ ಕ್ರಯಪತ್ರಗಳ ಅಕ್ರಮ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ 2.0 ತಂತ್ರಾಂಶದಲ್ಲಿ ನೀಡಲಾಗಿರುವ ಕೆಲವು ವಿನಾಯಿತಿಗಳನ್ನು ದುರುಪಯೋಗ ಮಾಡಿಕೊಂಡು, ಕ್ರಯಪತ್ರಗಳನ್ನು ಅಕ್ರಮವಾಗಿ ನೋಂದಣಿ ಮಾಡಿದ್ದ ಸರ್ಜಾಪುರ ಉಪನೋಂದಣಾಧಿಕಾರಿ ರವಿಸಂಕನಗೌಡ ಅವರನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಅಮಾನತು ಮಾಡಿದೆ.

ರವಿಸಂಕನಗೌಡ ಅವರು ಕ್ರಯಪತ್ರಗಳನ್ನು ಅಕ್ರಮವಾಗಿ ನೋಂದಣಿ ಮಾಡುತ್ತಿರುವ ಬಗ್ಗೆ ಬಂದಿದ್ದ ದೂರುಗಳ ಆಧಾರದಲ್ಲಿ ಇಲಾಖೆಯು ತನಿಖೆಗೆ ಆದೇಶಿಸಿತ್ತು.

ನ್ಯಾಯಾಲಯದ ಆದೇಶ ಆಧಾರಿತ ನೋಂದಣಿ ವ್ಯವಸ್ಥೆಯಲ್ಲಿ, ಕೆಲವು ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕಾವೇರಿ 2.0 ತಂತ್ರಾಂಶದಲ್ಲಿ ವಿನಾಯಿತಿ ನೀಡಲಾಗಿದೆ.

ಆರೋಪಿ ರವಿಸಂಕನಗೌಡ ಅವರು ಈ ವಿನಾಯಿತಿಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ.

ನ್ಯಾಯಾಲಯದ ಆದೇಶ ಇಲ್ಲದಿದ್ದರೂ ಕಾವೇರಿ 2.0 ತಂತ್ರಾಂಶದಲ್ಲಿ, 'ನ್ಯಾಯಾಲಯದ ಆದೇಶದ ಆಧಾರದಲ್ಲಿ ನೋಂದಣಿ' ಯನ್ನು ಆಯ್ಕೆ ಮಾಡುತ್ತಿದ್ದರು. ಈ ಮೂಲಕ ಹಲವು ಅಕ್ರಮ ನೋಂದಣಿಗಳನ್ನು ಮಾಡಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಇಲಾಖೆಯು ಅಮಾನತು ಆದೇಶದಲ್ಲಿ ವಿವರಿಸಿದೆ.

ಸರ್ಜಾಪುರ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನಡೆದಿರಬಹುದಾದ ಈ ರೀತಿಯ ಅಕ್ರಮಗಳ ಸಮಗ್ರ ತನಿಖೆಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಆದೇಶ ಹೊರಡಿಸಿದೆ.

ಇನ್ನೂ ನಾಲ್ವರ ಅಮಾನತು

ಕ್ರಯಪತ್ರಗಳನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ಸದರಿ ಸ್ವತ್ತಿಗೆ ಸಂಬಂಧಿಸಿದ ಇ–ಖಾತಾ ಮಾಹಿತಿಯನ್ನು ಇ–ಸ್ವತ್ತು ಪೋರ್ಟಲ್‌ನಿಂದ ಕಾವೇರಿ 2.0 ತಂತ್ರಾಂಶಕ್ಕೆ ವರ್ಗಾಯಿಸಬೇಕು. ಬಾಣಸವಾಡಿ, ವರ್ತೂರು ಮತ್ತು ಹಲಸೂರು ಉಪನೋಂದಣಾಧಿಕಾರಿ ಕಚೇರಿಗಳು ಈ ನಿಯಮವನ್ನು ಉಲ್ಲಂಘಿಸಿ ಹಲವು ಕ್ರಯಪತ್ರಗಳನ್ನು ನೋಂದಣಿ ಮಾಡಿರುವುದು ತನಿಖೆಯಲ್ಲಿ ಗೊತ್ತಾಗಿದೆ.

ಐವರು ಉಪನೋಂದಣಾಧಿಕಾರಿಗಳು ಈ ಅಕ್ರಮದಲ್ಲಿ ಭಾಗಿಯಾಗಿದ್ದು, ಒಬ್ಬರು ಈಗಾಗಲೇ ನಿವೃತ್ತರಾಗಿದ್ದಾರೆ. ಐವರ ಪೈಕಿ ಎನ್.ಸತೀಶ್ ಕುಮಾರ್, ಆರ್.ಪ್ರಭಾವತಿ, ಶ್ರೀಧರ್ ಮತ್ತು ಗಿರೀಶ್ ಚಂದ್ರ ಎಂಬುವವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತು ಮಾಡಲಾಗಿದೆ.

ಯಶ್ ತಾಯಿ ವಿರುದ್ಧ ಅತಿಕ್ರಮಣ ಆರೋಪ

ಪ್ರಜಾವಾಣಿ ವಾರ್ತೆ

ಹಾಸನ: ಚಲನಚಿತ್ರ ನಿರ್ಮಾಪಕಿ, ನಟ ಯಶ್ ಅವರ ತಾಯಿ ಪುಷ್ಪಾ ಅರುಣ್‌ಕುಮಾರ್ ಅವರು ಅತಿಕ್ರಮಣ ಮಾಡಿ, ಇಲ್ಲಿನ ವಿದ್ಯಾನಗರದ ಅವರ ನಿವಾಸದ ಪಕ್ಕದ ಜಾಗದಲ್ಲಿ ನಿರ್ಮಿಸಿದ್ದರು ಎನ್ನಲಾದ ಕಾಂಪೌಂಡ್ ಅನ್ನು ಭೂಮಾಲೀಕ ದೇವರಾಜು ಅವರು ಭಾನುವಾರ ತೆರವುಗೊಳಿಸಿದ್ದಾರೆ.

'ನ್ಯಾಯಾಲಯದಲ್ಲಿ ತಮ್ಮ ಪರವಾಗಿ ತೀರ್ಪು ಬಂದಿದ್ದು, ಆ ಪ್ರಕಾರ ಅತಿಕ್ರಮಣ ತೆರವು ಮಾಡಲಾಗಿದೆ' ಎಂದು ದೇವರಾಜು ತಿಳಿಸಿದ್ದಾರೆ.

ಪುಷ್ಪಾ ಅವರ ನಿವಾಸದ ಪಕ್ಕದಲ್ಲಿ ಲಕ್ಷ್ಮಮ್ಮ ಎಂಬವರಿಗೆ ಸೇರಿದ್ದ ಜಾಗದಲ್ಲಿ ಅಕ್ರಮವಾಗಿ ಕಾಂಪೌಂಡ್ ನಿರ್ಮಿಸಿದ್ದರು ಎಂದು ಆರೋಪಿಸಲಾಗಿತ್ತು. ಲಕ್ಷ್ಮಮ್ಮ ಅವರು ಈ ಜಾಗವನ್ನು ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಹೋಲ್ಡರ್ ಆಗಿ ದೇವರಾಜು ಅವರಿಗೆ ಬರೆದುಕೊಟ್ಟಿದ್ದರು.

ಪುಷ್ಪಾ ಅವರು ಕಾಂಪೌಂಡ್ ಹಾಕಿದ್ದ ದಿನವೇ ದೇವರಾಜು ಅವರು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಒಂದೂವರೆ ಸಾವಿರ ಅಡಿ ಜಾಗದಲ್ಲಿ ಅಕ್ರಮವಾಗಿ ಕಾಂಪೌಂಡ್ ಹಾಕಿದ್ದಾರೆ ಎಂದು ದೂರಿದ್ದರು.

ಹಾಸನದ ವಿದ್ಯಾನಗರದಲ್ಲಿರುವ ಪುಷ್ಪಾ ಅರುಣ್‌ಕುಮಾರ್ ನಿವಾಸದ ಪಕ್ಕದ ಕಾಂಪೌಂಡ್ ಭಾನುವಾರ ತೆರವುಗೊಳಿಸಲಾಯಿತು

'ಪುಷ್ಪಾ ಅವರು ಕೋರ್ಟ್‌ಗೆ ಸೂಕ್ತ ದಾಖಲಾತಿ ಒದಗಿಸಿಲ್ಲ. ನಮ್ಮ ಪರ ತೀರ್ಪು ಬಂದಿದ್ದು, ನ್ಯಾಯಾಲಯದ ಅನುಮತಿಯಂತೆ ಕಾಂಪೌಂಡ್ ತೆರವುಗೊಳಿಸಿದ್ದೇವೆ' ಎಂದು ದೇವರಾಜು ಹೇಳಿದ್ದಾರೆ.

'ಯಶ್ ಹೆಸರು ಹೇಳಿಕೊಂಡು ಕೆಲವರು ಮೈಲೇಜ್ ತೆಗೆದುಕೊಳ್ಳಲು ನೋಡುತ್ತಿದ್ದಾರೆ. ನ್ಯಾಯಾಲಯದ ಆದೇಶ ಗಮನಕ್ಕೆ ತಂದಿಲ್ಲ. ಕಾನೂನು ಹೋರಾಟ ಮಾಡುತ್ತೇನೆ' ಎಂದು ಪುಷ್ಪಾ ಅವರು ಪ್ರತಿಕ್ರಿಯಿಸಿದ್ದಾರೆ.

'ಸಮಾಜ ಘಾತುಕರಿಗೆ ಸುರಕ್ಷೆ'

ಯಲ್ಲಾಪುರ (ಉತ್ತರ ಕನ್ನಡ): 'ಅಧಿಕಾರ ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಮುಖ್ಯಮಂತ್ರಿ, ಅಸಮರ್ಥ ಗೃಹ ಸಚಿವರಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದರು.

ಮುಸ್ಲಿಂ ಯುವಕನಿಂದ ಹತ್ಯೆಯಾದ ರಂಜಿತಾ ಬನ್ಸೊಡೆ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ್ದ ಅವರು ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯವು ಸಮಾಜ ಘಾತುಕರಿಗೆ ಸುರಕ್ಷಿತ ನೆಲೆಯಾಗಿ ಪರಿಣಮಿಸಿದೆ' ಎಂದು ಹೇಳಿದರು.

'ರಾಜಕೀಯ ಹಿತಾಸಕ್ತಿಗಾಗಿ ಪೊಲೀಸರ ಕೈಕಟ್ಟಿ ಹಾಕಲಾಗಿದೆ. ಜಿಹಾದಿ ಮನಸ್ಥಿತಿ ಬಗ್ಗೆ ಮೃದು ಧೋರಣೆ ಮತ್ತು ಸಹಾನುಭೂತಿ ಹೊಂದಿರುವ ಆಡಳಿತದ ಅಡಿಯಲ್ಲಿ, ಸಮಾಜ ಘಾತುಕರಿಗೆ ಏನು ಬೇಕಾದರೂ ಮಾಡಬಹುದು ಎನ್ನುವ ಧೈರ್ಯ ಬಂದಿದೆ' ಎಂದರು.

'ಹತ್ಯೆಯಾದ ದಲಿತ ಮಹಿಳೆ ಕುಟುಂಬಕ್ಕೆ ಬಿಜೆಪಿ ರಾಜ್ಯ ಘಟಕದಿಂದ ₹5 ಲಕ್ಷ ಪರಿಹಾರ ನೀಡಿದ್ದೇವೆ. ರಾಜ್ಯ ಸರ್ಕಾರ ಕನಿಷ್ಠ ₹50 ಲಕ್ಷ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

ರಂಜಿತಾ ಹತ್ಯೆ ಖಂಡಿಸಿ ವಿವಿಧ ಸಂಘಟನೆಗಳು ಕರೆ ನೀಡಿದ್ದ ಯಲ್ಲಾಪುರ ಬಂದ್‌ಗೆ ಸ್ಪಂದನೆ ಸಿಕ್ಕಿತು.

ಶಾಸಕ ಶಿವರಾಮ ಹೆಬ್ಬಾರ್ ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾದ ₹8.5 ಲಕ್ಷ ಪರಿಹಾರ ಮೊತ್ತದ ಚೆಕ್ ಅನ್ನು ಮೃತರ ಕುಟುಂಬದವರಿಗೆ ಹಸ್ತಾಂತರಿಸಿದರು.

ರಫೀಕ್ ಶವ ಅರಣ್ಯದಲ್ಲಿ ಪತ್ತೆ

ರಂಜಿತಾ ಕೊಲೆ ಆರೋಪ ಹೊತ್ತಿರುವ ರಫೀಕ್ ಯಳ್ಳೂರ ಮೃತದೇಹ ಪಟ್ಟಣದ ಸಮೀಪದ ಅರಣ್ಯ ಪ್ರದೇಶದಲ್ಲಿ ಭಾನುವಾರ ಪತ್ತೆಯಾಗಿದೆ. ಆತ ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ಪೊಲೀಸರು ಖಚಿತಪಡಿಸಿದ್ದಾರೆ.

ಇಲ್ಲಿನ ಕಾಳಮ್ಮನಗರದಲ್ಲಿ ಶನಿವಾರ ಸಂಜೆ ರಫೀಕ್ ಎಂಬಾತ, ರಂಜಿತಾ ಮಲ್ಲಪ್ಪ ಬನ್ಸೊಡೆ (30) ಅವರನ್ನು ಚಾಕುವಿನಿಂದ ಇರಿದಿದ್ದು, ಆಕೆ ಆಸ್ಪತ್ರೆಗೆ ಒಯ್ಯುವ ಮಾರ್ಗದಲ್ಲಿ ಮೃತಪಟ್ಟಿದ್ದರು.

'ಪತಿಗೆ ವಿಚ್ಛೇದನ ನೀಡಿದ್ದ ರಂಜಿತಾ 5 ವರ್ಷದ ಮಗುವಿನೊಂದಿಗೆ ವಾಸವಿದ್ದರು. ಆಕೆಗೆ ರಫೀಕ್ ಪರಿಚಿತನಾಗಿದ್ದ. ಇಬ್ಬರ ನಡುವೆ ಆಗಾಗ ಜಗಳ ಉಂಟಾಗುತ್ತಿತ್ತು' ಎಂದು ಸ್ಥಳೀಯರು ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ಹಲ್ಲೆ ಪ್ರಕರಣ: ಗಾಯಾಳುವಿಗೆ ಚಿಕಿತ್ಸೆ

ಅಥಣಿ (ಬೆಳಗಾವಿ ಜಿಲ್ಲೆ): ಪಟ್ಟಣದ ಲಕ್ಷ್ಮಣ ಸವದಿ ಅವರ ನಿವಾಸದಲ್ಲಿ ಶನಿವಾರ ಹಲ್ಲೆಯಿಂದ ಗಾಯಗೊಂಡಿದ್ದ ಬಿಡಿಸಿಸಿ ಬ್ಯಾಂಕಿನ ನೌಕರರ ಸಂಘದ ಅಧ್ಯಕ್ಷ ನಿಂಗಪ್ಪ ಕರೆಣ್ಣವರ ಭಾನುವಾರ ಚೇತರಿಸಿಕೊಂಡಿದ್ದಾರೆ. ಬೆಳಗಾವಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ಲಕ್ಷ್ಮಣ ಸವದಿ ಅವರ ಬೆಂಬಲಿಗ ಶ್ರೀಕಾಂತ ಅಲಗೂರ ಅವರು, ನಿಂಗಪ್ಪ ಕರೆಣ್ಣವರ ವಿರುದ್ಧ ಅಥಣಿ ಠಾಣೆಯಲ್ಲಿ ಜಾತಿನಿಂದನೆ ಪ್ರಕರಣ ದಾಖಲಿಸಿದ್ದಾರೆ.

ಲಕ್ಷ್ಮಣ ಸವದಿ ಬೆಂಬಲಿಸಿ ಅವರ ಬೆಂಬಲಿಗರು ಜನವರಿ 5ರಂದು ಸವದಿ ಮನೆಯಿಂದ ಅಂಬೇಡ್ಕರ್ ವೃತ್ತದವರೆಗೆ ಮೆರವಣಿಗೆ ನಡೆಸಲು ತೀರ್ಮಾನಿಸಿದ್ದಾರೆ.

'ಅಥಣಿ 'ಬಿಹಾರ' ಆಗುತ್ತಿದೆ': 'ಶಾಸಕ ಲಕ್ಷ್ಮಣ ಸವದಿ, ಅವರ ಪುತ್ರ ಚಿದಾನಂದ ಸವದಿ ಮತ್ತು ಬೆಂಬಲಿಗರು ಹಲ್ಲೆ ನಡೆಸಿರುವುದು ಖಂಡನೀಯ. ಈ ಘಟನೆ ಗಮನಿಸಿದರೆ ಅಥಣಿಯು ಬಿಹಾರ ಆಗುತ್ತಿದೆ ಎನಿಸುತ್ತಿದೆ' ಎಂದು ಮಾಜಿ ಶಾಸಕ ಮಹೇಶ ಕುಮಠಳ್ಳಿ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಿಂದೆ ಬೇರೆಯವರಿಂದ ಸವದಿ ಇಂಥ ಕೃತ್ಯ ಮಾಡಿಸುತ್ತಿದ್ದರು. ಈಗ ಅವರೇ ಮಾಡಿದ್ದಾರೆ. ಪೊಲೀಸರು ಅವರ ಕಪಿಮುಷ್ಟಿಯಲ್ಲಿದ್ದಾರೆ' ಎಂದು ಆಪಾದಿಸಿದರು.

'ಅಥಣಿಯಲ್ಲಿ ಸವದಿ ಕುಟುಂಬದವರು ದಬ್ಬಾಳಿಕೆ ಮಾಡುತ್ತಿದ್ದಾರೆ. ಕನಿಷ್ಠ ಪಕ್ಷ ಹಲ್ಲೆಗೆ ಒಳಗಾದ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಬಹುದಿತ್ತು. ಆ ಕೆಲಸವೂ ಆಗಿಲ್ಲ' ಎಂದು ಪ್ರತಿಕ್ರಿಯಿಸಿದರು.

'ಬಜೆಟ್ ನಂತರ ಅಧಿಕಾರ ಹಸ್ತಾಂತರ ನಿರ್ಧಾರ'

ಶಿವಮೊಗ್ಗ: 'ರಾಜ್ಯದಲ್ಲಿ ಬಜೆಟ್ ನಂತರ ಅಧಿಕಾರ ಹಸ್ತಾಂತರದ ಬಗ್ಗೆ ದೆಹಲಿ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳಲಾಗುತ್ತದೆ' ಎಂದು ಲೋಕೋಪಯೋಗಿ ಖಾತೆ ಸಚಿವ ಸತೀಶ ಜಾರಕಿಹೊಳಿ ಅವರು ಹೇಳಿದ್ದಾರೆ.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಆದರೆ, ಸಿ.ಎಂ ರೇಸ್‌ನಲ್ಲಿ ಸದ್ಯ ನಾನು ಇಲ್ಲ. ಅವಕಾಶ ಬಂದಾಗ ನೋಡೋಣ. ನಾನು ಬ್ಯಾಟಿಂಗ್ ಚೆನ್ನಾಗಿ ಮಾಡುತ್ತೇನೆ. ಆದರೆ, ರಾಜಕೀಯದಲ್ಲಿ ಗೂಗ್ಲಿ ಹಾಕಲೇಬೇಕು. ಇಲ್ಲವಾದರೆ ಯಶಸ್ಸು ಸಿಗುವುದಿಲ್ಲ' ಎಂದು ಮಾರ್ಮಿಕವಾಗಿ ಹೇಳಿದರು.

'ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಈಗ ಮಾತನಾಡುವುದಿಲ್ಲ. ಅದು ಇನ್ನೂ ದೊಡ್ಡ ಮ್ಯಾಚ್. ಮುಂದೆ ನೋಡೋಣ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅತ್ಯಾಚಾರ ಆರೋಪಿ ಉಪನ್ಯಾಸಕ ಬಂಧನ

ಅಫಜಲಪುರ (ಕಲಬುರಗಿ): ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ, ಇಲ್ಲಿನ ಪಿಯು ಕಾಲೇಜು ಅರ್ಥಶಾಸ್ತ್ರ ಉಪನ್ಯಾಸಕ ರಾಜಕುಮಾರ ಕುಂಬಾರನನ್ನು ಅಫಜಲಪುರ ಠಾಣೆ ಪೊಲೀಸರು ಶನಿವಾರ ರಾತ್ರಿ ಬಂಧಿಸಿದ್ದಾರೆ.

ರಾಜಕುಮಾರ ಕುಂಬಾರ

ಉಪನ್ಯಾಸಕನ ವಿರುದ್ಧ ಅಫಜಲಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಯನ್ನು ಬಂಧಿಸುವವರೆಗೂ ತರಗತಿ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದು ಪೋಷಕರು ಕಾಲೇಜಿನ ಎದುರು ಶನಿವಾರ ಪ್ರತಿಭಟನೆ ನಡೆಸಿದ್ದರು.

'ಪ್ರತಿಭಟನೆ ಹಿಂದೆಯೇ ಉಪನ್ಯಾಸಕ ಪರಾರಿಯಾಗಿದ್ದ. ಎಫ್ಐಆರ್ ದಾಖಲಿಸಿ, ಕೆಲವೇ ಗಂಟೆಗಳಲ್ಲಿ ಉಪನ್ಯಾಸಕನ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನಂತರ ನ್ಯಾಯಾಲಯದ ಆದೇಶದ ಮೇರೆಗೆ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ಯಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

ದೂರು ನೀಡಿದ ವಿದ್ಯಾರ್ಥಿನಿ ಅಷ್ಟೇ ಅಲ್ಲದೇ ಇತರೆ ವಿದ್ಯಾರ್ಥಿನಿಯರಿಗೂ ಉಪನ್ಯಾಸಕ ಲೈಂಗಿಕ ಕಿರುಕುಳ ನೀಡಿದ್ದ ಎಂಬ ಆರೋಪ ಕೇಳಿ ಬಂದಿದ್ದವು.

ಪ್ರಚೋದನಕಾರಿ ಪೋಸ್ಟ್: ಪ್ರಕರಣ ದಾಖಲು

ಕಾರ್ಕಳ (ಉಡುಪಿ): ಶೀರೂರು ಪರ್ಯಾಯ ಮಹೋತ್ಸವದ ಅಂಗವಾಗಿ ಹೊರೆಕಾಣಿಕೆ ಸಲ್ಲಿಸಲು ರಚಿಸಿರುವ ಉಡುಪಿ ಜಿಲ್ಲಾ ಮುಸ್ಲಿಂ ಸೌಹಾರ್ದ ಪರ್ಯಾಯ ಸಮಿತಿ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಪೋಸ್ಟ್ ಹಾಕಿದ್ದ ಸಂಬಂಧ ನಿಟ್ಟೆಯ ಸುದೀಪ್ ಶೆಟ್ಟಿ ವಿರುದ್ಧ ಪ್ರಕರಣ ದಾಖಲಾಗಿದೆ.

'ಸೌಹಾರ್ದ ಸಮಿತಿಯವರು ಹಿಂದೂಗಳ ಪರ್ಯಾಯ ಮೆರವಣಿಗೆಯಲ್ಲಿ 'ದಫ್'ನಂಥ ಕಾರ್ಯಕ್ರಮ ಹಮ್ಮಿಕೊಳ್ಳುವ ಅಗತ್ಯವಿಲ್ಲ. ಅಷ್ಟೊಂದು ಸೌಹಾರ್ದ ಇದ್ದಲ್ಲಿ ಲವ್ ಜಿಹಾದ್, ಗೋ ಹತ್ಯೆ, ಭಯೋತ್ಪಾದನೆ, ಹಿಂದೂಗಳ ಮೇಲಿನ ದಾಳಿ ತಡೆದು ಸಾಮರಸ್ಯ ಕಾಪಾಡಲಿ' ಎಂದು ಸುದೀಪ್ ಶೆಟ್ಟಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾನೆ ಎಂದು ಕಾರ್ಕಳ ಗ್ರಾಮೀಣ ಪೊಲೀಸ್ ಠಾಣೆಗೆ ರುದ್ರೇಶ್ ದೂರು ನೀಡಿದ್ದರು.

ಶಾಲೆಯ ಧ್ವಜಸ್ತಂಭಕ್ಕೆ 'ಗೃಹಲಕ್ಷ್ಮಿ' ಹಣ

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಅಂಬುಕೋಣದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಧ್ವಜಸ್ತಂಭ ನಿರ್ಮಾಣಕ್ಕೆ, ಗ್ರಾಮದ ಶ್ಯಾಮಲಾ ತಿಮ್ಮಪ್ಪ ಗೌಡ ತಮಗೆ ಗೃಹಲಕ್ಷ್ಮೀ ಯೋಜನೆಯಿಂದ ಬಂದಿದ್ದ ₹20 ಸಾವಿರ ನೀಡಿದ್ದಾರೆ.

'ಶಾಲೆಯಲ್ಲಿನ ಗಣರಾಜ್ಯೋತ್ಸವ ದಿನಾಚರಣೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದೆ. ಧ್ವಜಸ್ತಂಭವನ್ನು ಹೊಸದಾಗಿ ನಿರ್ಮಿಸುವ ವಿಷಯ ಅಲ್ಲಿ ಪ್ರಸ್ತಾಪವಾಗಿತ್ತು. ದೇಣಿಗೆ ಹಣದಿಂದಲೇ ಧ್ವಜಸ್ತಂಭ ನಿರ್ಮಿಸಲಾಗಿದೆ' ಎಂದು ಶ್ಯಾಮಲಾ ಗೌಡ ಹೇಳಿದರು.

'ವಿಪ್ರೋತ್ಸವ'ದಲ್ಲಿ ಆರ್‌.ವಿ. ದೇಶಪಾಂಡೆ ಸಲಹೆ

'ಬ್ರಾಹ್ಮಣರು ಸಂಘಟಿತರಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಾಹ್ಮಣರನ್ನು ಸೇವಾ ಮನೋಭಾವದ ಕಾರಣದಿಂದ ತ್ಯಾಗಮಯಿಗಳು ಎಂದು ಗುರುತಿಸಿದರೂ, ಸಮಾಜದ ಸಂಘಟನೆ ವಿಚಾರದಲ್ಲಿ ಒಗ್ಗಟ್ಟು ಮೂಡಿಸುವ ಕೆಲಸ ಆಗಬೇಕಾಗಿದೆ' ಎಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಸಲಹೆ ನೀಡಿದರು.

ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ ಭಾನುವಾರ ಗಾಯನ ಸಮಾಜದಲ್ಲಿ ಆಯೋಜಿಸಿದ್ದ ವಿಪ್ರೋತ್ಸವ–2026 ಹಾಗೂ ಭಾರ್ಗವ ಭೂಷಣ ಪ್ರಶಸ್ತಿ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

'ಒಗ್ಗಟ್ಟಿನಿಂದ ಮಾತ್ರ ಯಾವುದೇ ಸಂಘಟನೆಯಲ್ಲಿ ಬಲ ಇರಲಿದೆ. ಇದು ಬ್ರಾಹ್ಮಣರಿಗೂ ಅನ್ವಯಿಸಲಿದೆ. ಸರ್ವಾಂಗೀಣ ಬೆಳವಣಿಗೆಯ ದೃಷ್ಟಿಯಿಂದ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಸಂಘಟಿತರಾಗಬೇಕು' ಎಂದು ಸಲಹೆ ನೀಡಿದರು.

ನಗರದಲ್ಲಿ ಭಾನುವಾರ 'ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ' ಆಯೋಜಿಸಿದ್ದ ವಿಪ್ರೋತ್ಸವ – 2026 ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಆಶಾ ದಿನೇಶ್, ಶ್ರೀನಾಥ್, ಅರಳುಮಲ್ಲಿಗೆ ಪಾರ್ಥಸಾರಥಿ, ವಿಶ್ವೇಶ್ವರ ಭಟ್ ಮತ್ತು ಶ್ರೀನಿವಾಸ್ ರಾವ್ ಅವರಿಗೆ ಭಾರ್ಗವ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪರಿಸರವಾದಿ ರೇವತಿ ಕಾಮತ್, ಶಾಸಕ ಸಿ.ಕೆ. ರಾಮಮೂರ್ತಿ, ಶಾಸಕ ಆರ್.ವಿ. ದೇಶಪಾಂಡೆ, ಅರ್ಜುನ ಅವಧೂತ ಗುರೂಜಿ, ತ್ರಿವಿಕ್ರಮ ಜೋಶಿ, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ಮಹಾಸಂಘದ ರಾಜ್ಯಾಧ್ಯಕ್ಷ ಜಿ.ಆರ್. ಪ್ರದೀಪ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಎಷ್ಟೇ ಕಷ್ಟಗಳಿದ್ದರೂ ಸಮುದಾಯದವರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಅನಿವಾರ್ಯ. ಜತೆಗೆ ಮುಖ್ಯವಾಗಿ ಮನೆಯಲ್ಲಿ ಸುಮ್ಮನೇ ಕೂರದಂತೆ ನೋಡಿಕೊಳ್ಳಿ. ಮಕ್ಕಳ ಕೌಶಲ ವೃದ್ಧಿಸಿ ಉದ್ಯೋಗಸ್ಥರನ್ನಾಗಿ ಮಾಡಲು ಪಣತೊಡಬೇಕು' ಎಂದು ನುಡಿದರು.

ಬ್ರಾಹ್ಮಣ ಸಮುದಾಯದವರಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು.

'ಮರ್ಯಾದೆಗೇಡು ಹತ್ಯೆ: ತ್ವರಿತ ನ್ಯಾಯಾಲಯ'

ಬೆಂಗಳೂರು: 'ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರದ ಮಾನ್ಯ ಎಂಬ ಯುವತಿಯ ಮರ್ಯಾದೆಗೇಡು ಹತ್ಯೆಗೆ ಸಂಬಂಧಿಸಿದಂತೆ ಪ್ರಕರಣದ ತ್ವರಿತ ವಿಚಾರಣೆಗೆ ತ್ವರಿತಗತಿ ನ್ಯಾಯಾಲಯ ರಚಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಬಗ್ಗೆ 'ಎಕ್ಸ್' ಮಾಡಿರುವ ಅವರು, 'ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ಕಡಿವಾಣ ಹಾಕಲು ಹಾಗೂ ಜನರಲ್ಲಿ ಕಾನೂನಿನ ಅರಿವು ಮೂಡಿಸಲು ವಿಶೇಷ ಕಾನೂನು ರಚಿಸಲಾಗುವುದು. ಈ ಕುರಿತು ವಿಧಾನ ಮಂಡಲದ ಮುಂದಿನ ಅಧಿವೇಶನದಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಾಗುವುದು' ಎಂದಿದ್ದಾರೆ.

'ಇನಾಂ ವೀರಾಪುರದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ದಲಿತರ ಮೇಲಿನ ದೌರ್ಜನ್ಯ ಹಾಗೂ ಕೊಲೆ ಪ್ರಕರಣ ದಾಖಲಾಗಿದೆ. ದೌರ್ಜನ್ಯ ಪ್ರಕರಣ ಆಗಿರುವುದರಿಂದ 60 ದಿನಗಳ ಒಳಗೆ ದೋಷರೋಪ ಪಟ್ಟಿ ಸಲ್ಲಿಸಬೇಕು. ಹೀಗಾಗಿ, ಖಾಸಗಿ ವಕೀಲರನ್ನು ನೇಮಕ ಮಾಡಿಕೊಳ್ಳಲಾಗುವುದು. ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡುವುದು ನಮ್ಮ ಆದ್ಯತೆ' ಎಂದೂ ತಿಳಿಸಿದ್ದಾರೆ.

ಸಿಸಿಟಿವಿಗೆ ₹9.79 ಕೋಟಿ!

ಹಂಪಿ ಕನ್ನಡ ವಿ.ವಿ.ಗೆ ಕೆಕೆಆರ್‌ಡಿಬಿಯಿಂದ ₹19.21 ಕೋಟಿ ಮಂಜೂರು

• ಎಂ.ಜಿ.ಬಾಲಕೃಷ್ಣ

ಮುಖ್ಯಾಂಶಗಳು

- ಕಳೆದ ಬಾರಿ ಕೆಕೆಆರ್‌ಡಿಬಿಯಿಂದ ₹25 ಕೋಟಿ ಮಂಜೂರು
- ಈಗಿನದು ಸರ್ಕಾರದ ವಿವೇಚನಾ ಕೋಟಾ ಅನುದಾನ

ಹಂಪಿ ಕನ್ನಡ ವಿಶ್ವವಿದ್ಯಾಲಯ

ಹೊಸಪೇಟೆ (ವಿಜಯನಗರ): ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ಸರ್ಕಾರದ ವಿವೇಚನಾ ನಿಧಿ ಅಡಿಯಲ್ಲಿ ₹19.21 ಕೋಟಿ ಮಂಜೂರಾಗಿದ್ದು, ಇದರಲ್ಲಿ ಕ್ಯಾಂಪಸ್‌ನಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ₹9.79 ಕೋಟಿ ವೆಚ್ಚದ ಅಂದಾಜು ಮಾಡಲಾಗಿದೆ.

ವಿದ್ಯಾರಣ್ಯ ಕ್ಯಾಂಪಸ್‌ನ ಆವರಣದಲ್ಲಿ ಅಗ್ನಿ ನಿಯಂತ್ರಕ, ಸೋಲಾರ್ ಹೈಮಾಸ್ಟ್ ದೀಪ, ಸೋಲಾರ್ ಬಿಸಿ ನೀರು ಘಟಕ, ಹವಾನಿಯಂತ್ರಕ ಮತ್ತು ಬ್ಯಾಟರಿ ಅಳವಡಿಸುವ ಕಾಮಗಾರಿಗಳಿಗೆ ₹9.42 ಕೋಟಿ ಅಂದಾಜು ವೆಚ್ಚ ನಿಗದಿಪಡಿಸಿ ಈಗ ಮಂಜೂರಾತಿ ಪತ್ರ ನೀಡಲಾಗಿದೆ.

ಮೂಲತಃ ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಪೀಠೋಪಕರಣ, ಸಂಶೋಧನಾ ಕಾರ್ಯ, ಹಾಸ್ಟೆಲ್‌ಗಳಿಗೆ, ಜಿಮ್ ಸಾಮಗ್ರಿಗಳ ಖರೀದಿಗೆ ನಿಗದಿಯಾಗಿದ್ದ ಮೊತ್ತ ಇದಾಗಿತ್ತು. ಅಲ್ಲಿಂದ ವಿಸ್ತೃತ ಯೋಜನಾ ವರದಿ ಸಲ್ಲಿಕೆ ಆಗದ ಕಾರಣ ಪ್ರಸ್ತಾವ ರದ್ದುಪಡಿಸಿ, ಅದೇ ಹಣವನ್ನು ಹಂಪಿ ವಿಶ್ವವಿದ್ಯಾಲಯಕ್ಕೆ ನೀಡಲು ನಿರ್ಧರಿಸಲಾಗಿದೆ.

ಆರೋಪ: 'ಸಿ.ಸಿ.ಟಿ.ವಿ ಕ್ಯಾಮೆರಾಗಳ ಅಳವಡಿಕೆಗೆ ₹9.79 ಕೋಟಿ ಖರ್ಚಾಗಲಿದೆಯೇ? ರಾಜ್ಯಪಾಲರ ಕೋಟಾದಲ್ಲಿ ಕಳೆದ ವರ್ಷ ಮಂಜೂರಾದ ₹25 ಕೋಟಿ ಅನುದಾನದಲ್ಲಿ ಸ್ಮಾರ್ಟ್ ತರಗತಿ, ಸ್ಮಾರ್ಟ್ ಬೋರ್ಡ್‌ಗಳು ಇದ್ದರೂ ಮತ್ತೆ ಅದೇ ಹೆಸರಲ್ಲಿ ₹9.58 ಕೋಟಿ ಮಂಜೂರಾಗಿತ್ತು. ಇದರ ಹಿಂದೆ ದುಡ್ಡು ಹೊಡೆಯುವ ತಂತ್ರ ಇದ್ದಂತಿದೆ' ಎಂದು ಕೆಕೆಆರ್‌ಡಿಬಿ ಅಧಿಕಾರಿಯೊಬ್ಬರು ಆರೋಪಿಸಿದ್ದಾರೆ.

ನಿರಾಕರಣೆ: ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಈ ಆರೋಪವನ್ನು ಅಲ್ಲಗಳೆದಿದ್ದಾರೆ.

'ವಿಶ್ವವಿದ್ಯಾಲಯ ಕ್ಯಾಂಪಸ್ 745 ಎಕರೆಯಷ್ಟು ವಿಶಾಲವಾಗಿದೆ. ಈಗಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳು ಕೆಲಸ ಮಾಡುತ್ತಿಲ್ಲ. ಪ್ರಮುಖ ರಸ್ತೆ, ದ್ವಾರ, ಸಭಾಂಗಣ, ನಾಲ್ಕು ಹಾಸ್ಟೆಲ್‌ಗಳಿಗೆ ಸಿ.ಸಿ.ಟಿ.ವಿ ಕ್ಯಾಮೆರಾ ಸೌಲಭ್ಯ ಅಳವಡಿಕೆಗೆ ಬಹಳಷ್ಟು ಹಣ ಬೇಕು. ನಾವು ಕಾಂಪೌಂಡ್ ನಿರ್ಮಾಣಕ್ಕೆ ಹಣ ಕೇಳಿದ್ದೆವು. ಅದರ ಬದಲಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ಹಣ ಮಂಜೂರಾಗಿದೆ. ಈಗ ಅದಕ್ಕೇ ನೆರವು ಬಳಸಿಕೊಳ್ಳುತ್ತೇವೆ. ವಿವರವಾದ ಯೋಜನಾ ವರದಿ ಸಲ್ಲಿಸಿದ ಬಳಿಕ ಅಂತಿಮ ಒಪ್ಪಿಗೆ ಸಿಗಲಿದೆ' ಎಂದು ಹೇಳಿದರು.

> **ರಾಯಚೂರು ವಿ.ವಿ ಅನುದಾನಕ್ಕಾಗಿ ಮತ್ತೆ ಯತ್ನಿಸಿದರೆ ಆದೇಶ ಬದಲಾಗುವ ಸಾಧ್ಯತೆ ಇದೆ. ಕ್ಯಾಂಪಸ್ ಸುರಕ್ಷತೆಗೆ ಕಾಂಪೌಂಡ್ ಬೇಕು. ಸಿಕ್ಕಿದ ಅನುದಾನವನ್ನು ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ಬಳಸುತ್ತೇವೆ**
> **ಪ್ರೊ.ಡಿ.ವಿ.ಪರಮಶಿವಮೂರ್ತಿ,** ಕುಲಪತಿ, ಹಂಪಿ ಕನ್ನಡ ವಿಶ್ವವಿದ್ಯಾಲಯ

ನಿಧಿಗಾಗಿ ಬಲಿ ಯತ್ನ, ಹಸುಳೆ ರಕ್ಷಣೆ

ಪ್ರಜಾವಾಣಿ ವಾರ್ತೆ

ಸೂಲಿಬೆಲೆ (ಹೊಸಕೋಟೆ): 8 ತಿಂಗಳ ದತ್ತು ಮಗುವನ್ನು ನಿಧಿಗಾಗಿ ಬಲಿ ಕೊಡಲು ಸಿದ್ಧತೆ ನಡೆಸಿದ್ದ ಮನೆಯ ಮೇಲೆ ದಾಳಿ ನಡೆಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಹಸುಳೆಯನ್ನು ರಕ್ಷಿಸಿದ್ದಾರೆ.

'ಸೂಲಿಬೆಲೆಯ ಜನತಾ ಕಾಲೊನಿ ಮನೆಯಲ್ಲಿ ವಾಮಾಚಾರ ನಡೆಯುತ್ತಿದೆ. ಮಗು ಬಲಿಗೆ ಸಿದ್ಧತೆ ನಡೆದಿದೆ' ಎಂದು ಶನಿವಾರ ಮಕ್ಕಳ ಸಹಾಯವಾಣಿ '1098'ಕ್ಕೆ ಕರೆ ಮಾಡಿ ವ್ಯಕ್ತಿಯೊಬ್ಬರು ಸುಳಿವು ನೀಡಿದ್ದರು.

'ಸೈಯ್ಯದ್ ಇಮ್ರಾನ್ ಮತ್ತು ನಜ್ಮಾ ದಂಪತಿ ಬನದ ಹುಣ್ಣಿಮೆ ದಿನದಂದು ಬಲಿ ಕೊಡಲು ಪೂಜೆ, ವಾಮಾಚಾರ ನಡೆಸಿದ್ದಾರೆ. ತಕ್ಷಣ ಜನತಾ ಕಾಲೊನಿಗೆ ಬನ್ನಿ' ಎಂದು ಕರೆ ಮಾಡಿದ್ದ ವ್ಯಕ್ತಿ ಖಚಿತವಾಗಿ ಹೇಳಿದ್ದರು.

ಕಾರ್ಯಪ್ರವತ್ತರಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಗಳು ಪೊಲೀಸರ ನೆರವು ಪಡೆದು ಮನೆಯ ಮೇಲೆ ದಾಳಿ ನಡೆಸಿದರು. ಹಸುಳೆಯನ್ನು ರಕ್ಷಿಸಿ ದೇವನಹಳ್ಳಿಯ ಬಾಲಮಂದಿರದ ವಶಕ್ಕೆ ಒಪ್ಪಿಸಿದರು. ಮಕ್ಕಳ ಕಲ್ಯಾಣ ಸಮಿತಿ ಮುಂದೆ ಸೋಮವಾರ ಈ ಮಗುವನ್ನು ಹಾಜರುಪಡಿಸಲಾಗುತ್ತಿದೆ.

ಮೂರಂತಸ್ತಿನ ಕಟ್ಟಡದ ನೆಲಮಹಡಿಯ ಕೋಣೆಯಲ್ಲಿದ್ದ ಹುತ್ತ ಅಗೆದು ಗುಂಡಿ ತೋಡಲಾಗಿತ್ತು. ಗುಂಡಿ ಸುತ್ತ ಪೂಜೆಗೆ ಅಣಿಗೊಳಿಸಿರುವುದು ದಾಳಿ ವೇಳೆ ಪತ್ತೆಯಾಗಿದೆ.

ನಜ್ಮಾ ದಂಪತಿಗೆ ಇಬ್ಬರು ಮಕ್ಕಳಿದ್ದರೂ ಕೋಲಾರದ ಬಡ ದಂಪತಿಗೆ ₹1 ಲಕ್ಷ ನೀಡಿ ಗಂಡು ಮಗುವನ್ನು ದತ್ತು ಪಡೆದಿದ್ದರು. ದತ್ತು ಪಡೆಯುವಾಗ ಕಾನೂನುಕ್ರಮ ಅನುಸರಿಸಿಲ್ಲ. ದಂಪತಿ ನೀಡುತ್ತಿರುವ ವಿಭಿನ್ನ ಹೇಳಿಕೆಗಳು ಅನುಮಾನ ಮೂಡಿಸುತ್ತಿವೆ ಎಂದು ಪೊಲೀಸರು ಹೇಳಿದ್ದಾರೆ.

ಮನೆಯಲ್ಲಿ ಅನೇಕ ದಿನಗಳಿಂದ ಬೆಳೆದಿದ್ದ ಹುತ್ತ ತೆರವಿಗೆ ಗುಂಡಿ ಅಗೆಯಲಾಗಿದೆ ಎಂದು ಕುಟುಂಬ ಸದಸ್ಯರು ಹೇಳಿದ್ದಾರೆ. 'ಗಂಡನ ವಿರುದ್ಧ ಯಾರೋ ಮಾಟ ಮಾಡಿಸಿ ಇಲ್ಲಿ ಅಡಗಿಸಿಟ್ಟಿದ್ದಾರೆ. ಅದನ್ನು ಹೊರ ತೆಗೆಯಲು ಗುಂಡಿ ತೋಡಿದ್ದೇವೆ' ಎಂದು ಇಮ್ರಾನ್ ಪತ್ನಿ ನಜ್ಮಾ ಪೊಲೀಸರ ಎದುರು ಹೇಳಿಕೆ ನೀಡಿದ್ದಾರೆ.

ಮಕ್ಕಳ ಕಲ್ಯಾಣ ಸಮಿತಿ ಮುಂದೆ ಜ.5ರಂದು ಮಗುವನ್ನು ಹಾಜರುಪಡಿಸಿ ವರದಿ ಸಲ್ಲಿಸಲಾಗುವುದು. ಮಗುವಿನ ಹೆತ್ತವರು ಮತ್ತು ದತ್ತು ಪಡೆದ ದಂಪತಿಯ ವಿಚಾರಣೆ ನಡೆಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಶಿವಮ್ಮ ತಿಳಿಸಿದ್ದಾರೆ.

> **ಮಗುವನ್ನು ಕಾನೂನುಬಾಹಿರವಾಗಿ ಕೋಲಾರ ದಂಪತಿಯಿಂದ ₹1 ಲಕ್ಷ ನೀಡಿ ಖರೀದಿಸಿರುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ**
> **ಡಾ. ಸ್ನೇಹಾ,** ನಿರ್ದೇಶಕಿ ಮಕ್ಕಳ ರಕ್ಷಣಾ ನಿರ್ದೇಶನಾಲಯ

ಬೆಟ್ಟಕ್ಕಾಗಿ...

ಪ್ರಜಾವಾಣಿ ಚಿತ್ರ:

ಮೈಸೂರಿನ ಚಾಮುಂಡಿಬೆಟ್ಟದ ಸಂರಕ್ಷಣೆಗೆ ಆಗ್ರಹಿಸಿ 'ಪರಿಸರಕ್ಕಾಗಿ ನಾವು' ಸೇರಿದಂತೆ ವಿವಿಧ ಸಂಘಟನೆಗಳು ಭಾನುವಾರ ಆಯೋಜಿಸಿದ್ದ ನಡಿಗೆಯಲ್ಲಿ ಕಪತ್ತಗುಡ್ಡ ನಂದಿವೇರಿ ಮಠದ ಶಿವಕುಮಾರ ಸ್ವಾಮೀಜಿ, ನಿಡಸೋಸಿ ಮಠದ ನಿಜಲಿಂಗೇಶ್ವರ ಸ್ವಾಮೀಜಿ, ಕೆಸವತ್ತೂರು ಮಠದ ಬಸವರಾಜೇಂದ್ರ ಸ್ವಾಮೀಜಿ, ತೊರೆನೂರು ಮಠದ ಮಲ್ಲೇಶ ಸ್ವಾಮೀಜಿ, 'ಪರಿಸರಕ್ಕಾಗಿ ನಾವು' ಸಂಘಟನೆ ಅಧ್ಯಕ್ಷ ಎ.ಟಿ.ರಾಮಸ್ವಾಮಿ, ಪರಶುರಾಮೇಗೌಡ. ಪರಿಸರ ತಜ್ಞ ಕೃಪಾಕರ, ಕಾಂಗ್ರೆಸ್ ಮುಖಂಡ ಎಂ.ಕೆ.ಸೋಮಶೇಖರ್, ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ, ಪ್ರೊ.ರಂಗರಾಜು, ರವಿಕುಮಾರ್ ಪಾಲ್ಗೊಂಡಿದ್ದರು

ಕಟಕಟೆಗೆ ಎಳೆಯಬೇಕಾದೀತು: ಜೋಶಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ವಿಬಿ–ಜಿ ರಾಮ್‌ಜಿ' ಯೋಜನೆಯ ಗ್ರಾಮೀಣ ಜನರಿಗೆ ವಾರ್ಷಿಕ 125 ದಿನ ಉದ್ಯೋಗದ ಭರವಸೆ ನೀಡಲಾಗಿದೆ. ಅದರೂ, ರಾಜಕೀಯಕ್ಕಾಗಿ ಕಾಂಗ್ರೆಸ್ ಗಾಂಧೀಜಿ ಹೆಸರು ಮುಂದಿಟ್ಟುಕೊಂಡು ಆರೋಪಿಸುತ್ತಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭಾನುವಾರ ಇಲ್ಲಿ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ನಕಲಿ ಗಾಂಧಿ ಪರಿವಾರವನ್ನು ಒಲಿಸಿಕೊಳ್ಳಲು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಈಗ 'ಗಾಂಧೀಜಿ ಹೆಸರು ಪ್ರಸ್ತಾಪಿಸಿ, ಎರಡನೇ ಬಾರಿ ಅವರನ್ನು ಕೊಂದರು' ಎನ್ನುತ್ತಿದ್ದಾರೆ. ಈ ಹಿಂದೆ ಇಂತದ್ದೇ ವಿಷಯ ಮಾತನಾಡಿದ್ದ ರಾಹುಲ್ ಗಾಂಧಿ ಅವರು ಕೋರ್ಟ್‌ನಲ್ಲಿ ತಲೆಬಾಗಿಸಿದ್ದರು. ಈಗ ನಿಮ್ಮನ್ನೂ ಕೋರ್ಟ್ ಕಟಕಟೆಗೆ ಎಳೆಯಬಾರದು ಎಂದರೆ ಮಾತಿನಲ್ಲಿ ಹಿಡಿತವಿರಲಿ' ಎಂದೂ ಎಚ್ಚರಿಸಿದರು.

'ರಾಜ್ಯ ಸರ್ಕಾರದ 27 ಯೋಜನೆಗಳಿಗೆ ರಾಜೀವ್ ಗಾಂಧಿ, ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಹೆಸರಿದೆ. ಸಂಬಂಧ ಇಲ್ಲದಿದ್ದರೂ, ರಾಜೀವ್ ಗಾಂಧಿ ಅವರ ಹೆಸರಲ್ಲಿ ಖೇಲ್ ರತ್ನ ನೀಡುತ್ತಿದ್ದರು. ಗಾಂಧಿ ಪರಿವಾರದವರ ಹೆಸರಲ್ಲಿ 51 ಪ್ರಶಸ್ತಿ, 39 ವೈದ್ಯ ಕಾಲೇಜು, 15 ಶಿಷ್ಯವೇತನ, 15 ರಾಷ್ಟ್ರೀಯ ಉದ್ಯಾನ ಇವೆ. ಇಲ್ಲೆಲ್ಲೂ ಗಾಂಧೀಜಿ ಅವರ ಹೆಸರು ಯಾಕಿಲ್ಲ?' 'ಹಿಂದುಳಿದವರ ಪರ ಎನ್ನುವ ಕಾಂಗ್ರೆಸ್ ಡಾ.ಬಿ.ಆರ್. ಅಂಬೇಡ್ಕರ್ ಹೆಸರನ್ನಾದರೂ ಏಕೆ ಇಟ್ಟಿಲ್ಲ?' ಎಂದು ಪ್ರಶ್ನಿಸಿದರು.

ಜಿಎಸ್‌ಟಿ ಐಟಿಸಿ: ₹355 ಕೋಟಿ ವಂಚನೆ

ಒಂದನೇಪುಟದಿಂದ...

ಕಟ್ಟಡ ನಿರ್ಮಾಣ ಸಾಮಗ್ರಿಗಳ ಮಾರಾಟದ ಹೆಸರಿ ನಲ್ಲಿ ದೊಡ್ಡ ಜಾಲವೊಂದು, ತೆರಿಗೆ ವಂಚನೆಯಲ್ಲಿ ತೊಡಗಿ ಕೊಂಡಿರುವುದನ್ನು ಪತ್ತೆ ಮಾಡಿದ್ದರು.

ಬೆಂಗಳೂರಿನಲ್ಲಿ ಕಚೇರಿ ಹೊಂದಿದ್ದ ರೇವತಿ ಮತ್ತು ಇ.ಪ್ರತಾಪ್ ಎಂಬವರು ಹಲವು ಷೆಲ್ ಕಂಪನಿಗಳನ್ನು (ದಾಖಲೆಗಳಷ್ಟೇ ಇದ್ದು, ವಾಸ್ತವದಲ್ಲಿ ಅಸ್ತಿತ್ವದಲ್ಲಿಲ್ಲದ ಕಂಪನಿಗಳು) ಸ್ಥಾಪಿಸಿರುವುದನ್ನು ಪತ್ತೆ ಮಾಡಲಾಗಿತ್ತು. ಈ ಇಬ್ಬರೂ ಪವರ್ ಸ್ಟೀಲ್ಸ್ ಆ್ಯಂಡ್ ಸಿಮೆಂಟ್ಸ್, ಪಿ.ಆರ್.ಕನ್‌ಸ್ಟ್ರಕ್ಷನ್ಸ್, ಎಸ್.ವಿ.ಟ್ರೇಡರ್ಸ್, ಎಸ್‌ಆರ್‌ಎಸ್ ಸ್ಟೀಲ್ ಟ್ರೇಡರ್ಸ್ ಎಂಬ ಷೆಲ್ ಕಂಪನಿಗಳನ್ನು ನಡೆಸುತ್ತಿದ್ದರು. ಈ ಕಂಪನಿಗಳ ಮಧ್ಯೆಯೇ ಕಬ್ಬಿಣ, ಸಿಮೆಂಟ್ ಪೂರೈಕೆ ವಹಿವಾಟು ದಾಖಲೆಗಳನ್ನು ಸೃಷ್ಟಿಸುತ್ತಿದ್ದರು. ಜತೆಗೆ ಕೆಲವು ಬಿಲ್ಡರ್‌ಗಳಿಗೆ ಸಾಮಗ್ರಿ ಪೂರೈಸಿದಂತೆ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸುತ್ತಿದ್ದರು ಎಂಬುದು ಗೊತ್ತಾಗಿದೆ.

ಆ ಇನ್‌ವಾಯ್ಸ್‌ಗಳನ್ನು ಬಳಸಿಕೊಂಡು ಆರೋಪಿಗಳು ವಾಣಿಜ್ಯ ತೆರಿಗೆ ಇಲಾಖೆಯಿಂದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಪಡೆದುಕೊಳ್ಳುತ್ತಿದ್ದರು. ಕೆಲವು ರಿಯಲ್ ಎಸ್ಟೇಟ್ ಕಂಪನಿಗಳು, ಬಿಲ್ಡರ್‌ಗಳಿಗೆ ಐಟಿಸಿಯನ್ನು ವರ್ಗಾಯಿಸಿ ಕಮಿಷನ್ ಸಹ ಪಡೆದುಕೊಂಡಿದ್ದಾರೆ ಎಂಬುದನ್ನು ತನಿಖಾಧಿಕಾರಿಗಳು ಪತ್ತೆ ಮಾಡಿದ್ದಾರೆ.

ಈ ಇಬ್ಬರ ಜತೆಗೆ ವಂಚನೆಯಲ್ಲಿ ತಮಿಳುನಾಡಿನ ಸೋದರರ ಜೋಡಿಯೊಂದೂ ಭಾಗಿಯಾಗಿತ್ತು. ಟ್ರಯಾನ್ ಟ್ರೇಡರ್ಸ್, ವಂಡರ್ ಟ್ರೇಡರ್ಸ್, ರಾಯಲ್ ಟ್ರೇಡರ್ಸ್ ಮತ್ತು ಗ್ಯಾಲಕ್ಸಿ ಎಂಟರ್‌ಪ್ರೈಸಸ್ ಎಂಬ ಷೆಲ್ ಕಂಪನಿಗಳನ್ನು ನಡೆಸುತ್ತಿದ್ದ ಇರ್ಬಾಜ್ ಅಹಮದ್ ಮತ್ತು ನಫೀಜ್ ಅಹಮದ್ ಅವರು ರೇವತಿ ಹಾಗೂ ಪ್ರತಾಪ್ ಅವರ ಕಂಪನಿಗಳ ಜತೆಗೆ ಖೊಟ್ಟಿ ವಹಿವಾಟು ನಡೆಸಿದ್ದರು. ಇವರು ಸಹ ಸರಕು ಪೂರೈಸದೇ ನಕಲಿ ಇನ್‌ವಾಯ್ಸ್ ಸೃಷ್ಟಿಸಿ, ಅಕ್ರಮವಾಗಿ ಐಟಿಸಿ ಪಡೆದುಕೊಂಡಿದ್ದಾರೆ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ಈ ಜಾಲದಲ್ಲಿ ಇನ್ನಷ್ಟು ಮಂದಿ ಮತ್ತು ಹಲವು ಷೆಲ್ ಕಂಪನಿಗಳು ಇದ್ದು ತನಿಖೆ ಮುಂದುವರಿದಿದೆ. ಈ ಜಾಲದಿಂದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವರ್ಗಾವಣೆ ಪಡೆದುಕೊಂಡಿದ್ದ ಬಿಲ್ಡರ್‌ಗಳ ವಿರುದ್ಧವೂ ತನಿಖೆ ನಡೆಯುತ್ತಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಎಸ್‌ಕೆ ಸಮಾಜದ ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜ ಜಯಂತಿ

'ಭವನ, ನಿಗಮ ಸ್ಥಾಪನೆಗೆ ಸಹಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ (ಎಸ್‌ಎಸ್‌ಕೆ) ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಪ್ರತ್ಯೇಕ ನಿಗಮ ಸ್ಥಾಪನೆ, ಸಮಾಜದ ಭವನ ನಿರ್ಮಾಣಕ್ಕೆ ಬೆಂಗಳೂರಿನಲ್ಲಿ ಎರಡು ಎಕರೆ ಜಾಗ ಮಂಜೂರು ಮಾಡಿಸಲು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರೊಂದಿಗೆ ಮಾತುಕತೆ ನಡೆಸುತ್ತೇನೆ' ಎಂದು ವಿಜಯನಗರ ಶಾಸಕ ಎಂ.ಕೃಷ್ಣಪ್ಪ ಭರವಸೆ ನೀಡಿದರು.

ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜ ಜಯಂತಿ ಸಮಿತಿ ಭಾನುವಾರ ಇಲ್ಲಿ ಆಯೋಜಿಸಿದ್ದ ಸಹಸ್ರಾರ್ಜುನ ಮಹಾರಾಜರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ಭಾನುವಾರ ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜ ಜಯಂತಿ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕರಾದ ಎಂ. ಕೃಷ್ಣಪ್ಪ ಮತ್ತು ಪ್ರಿಯಕೃಷ್ಣ ಅವರಿಗೆ ಎಸ್‌ಎಸ್‌ಕೆ ಸಮಾಜದ ಬೇಡಿಕೆಗಳ ಮನವಿ ಸಲ್ಲಿಸಲಾಯಿತು

ಶಾಸಕ ಪ್ರಿಯಕೃಷ್ಣ, ಎಸ್‌ಎಸ್‌ಕೆ ಸಂಘದ ಅಧ್ಯಕ್ಷ ಎಸ್.ಅನಂತ್ ಮಾತನಾಡಿದರು. ಎಬಿಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಶ್ರೀನಿವಾಸ ಶ್ರೀಹರಿಖೋಡೆ, ಎಸ್‌ಎಸ್‌ಕೆ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷೆ ಕೆ.ಹೇಮಾವತಿ, ಸಮಾಜದ ಉಪಾಧ್ಯಕ್ಷ ಡಮಾಮ್ ವಿ.ಸತ್ಯನಾರಾಯಣ, ಬ್ರಿಜ್ ಮೋಹನ್ ಖೋಡೆ, ಎಸ್. ದೋಂಡೂಸಾ ಧರ್ಮ ಸಂಸ್ಥೆಯ ಎಸ್.ಎನ್.ಶ್ರೀನಿವಾಸಮೂರ್ತಿ, ಎಸ್‌ಡಿಎಂ ಸ್ವಾಮಿ ಇದ್ದರು.

> **'ಕರ್ನಾಟಕದಲ್ಲಿ ಎಸ್‌ಎಸ್‌ಕೆ ಸಮಾಜದವರ ಜನಸಂಖ್ಯೆ ಅಂದಾಜು 8 ಲಕ್ಷದಷ್ಟಿದೆ. ಬೆಂಗಳೂರಿನಲ್ಲಿ 80 ಸಾವಿರಕ್ಕೂ ಅಧಿಕ ಮಂದಿ ನೆಲಸಿದ್ದಾರೆ.**
> **ಎಂ.ಕೃಷ್ಣಪ್ಪ** ವಿಜಯನಗರ ಶಾಸಕ

‘ದೇವಾಂಗ ಸಮುದಾಯ ಒಗ್ಗೂಡಲಿ’

ದೇವಾಂಗ ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ಸಿ.ಎಂ ಆಶಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀಮಂತ ಪರಂಪರೆ ಹೊಂದಿರುವ ದೇವಾಂಗ ಸಮುದಾಯವು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದೆ. ದೇವಾಂಗ ಸಮುದಾಯದವರು ಸಂಘಟಿತರಾದರಷ್ಟೇ ಹಿಂದುಳಿದಿರುವಿಕೆಯಿಂದ ಹೊರಬರಲು ಸಾಧ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದೇವಾಂಗ ಸಂಘದ ಶತಮಾನೋತ್ಸವ ಸಮಾರಂಭವನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, ‘ಹಿಂದುಳಿದ ಸಮುದಾಯದವರು ಒಂದಾಗುವುದು ಜಾತೀಯತೆ ಎನಿಸಿಕೊಳ್ಳುವುದಿಲ್ಲ. ಅಂತಹ ಸಮುದಾಯಗಳು ಉಪಜಾತಿಗಳ ಹೆಸರಿನಲ್ಲಿ ವಿಭಜನೆಯಾಗದೆ, ಒಂದಾಗಬೇಕಾದ ತುರ್ತು ಇದೆ’ ಎಂದರು.

‘ಆಹಾರ ಪೂರೈಸುವ ರೈತರು ಎಷ್ಟು ಮುಖ್ಯವೋ, ಬಟ್ಟೆ ಒದಗಿಸುವ ನೇಕಾರರೂ ಅಷ್ಟೇ ಮುಖ್ಯ. ಅಂತಹ ಒಂದು ಸಮುದಾಯ ಶಿಕ್ಷಣದಿಂದ ವಂಚಿತವಾಗಿರುವುದರಿಂದ ಹಿಂದುಳಿದಿದೆ. ಹೀಗಾಗಿ ಶಿಕ್ಷಣ ಪಡೆದುಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಬಲರಾಗಬೇಕೆಂದರೆ ಸಂಘಟಿತರಾಗಬೇಕು’ ಎಂದು ಕರೆ ನೀಡಿದರು.

‘ತಮ್ಮ ಸಮುದಾಯದ ಮಹಿಳೆಯರ ಶಿಕ್ಷಣಕ್ಕೆ ದೇವಾಂಗ ಸಂಘವು ಶ್ರಮಿಸುತ್ತಿದೆ. ಶಿಕ್ಷಣ ಮತ್ತು ವಿದ್ಯಾರ್ಥಿ ನಿಲಯದ ಸವಲತ್ತನ್ನು ಒದಗಿಸುತ್ತಿದೆ. ಈ ಸಮುದಾಯದ ದುಡಿಯುವ ಮಹಿಳೆಯರಿಗೆ ವಸತಿ ನಿಲಯ ನಿರ್ಮಿಸಿ ಕೊಡಬೇಕು ಮತ್ತು ನೇಕಾರರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು ಎಂಬ ಬೇಡಿಕೆಗಳಿವೆ. ಆ ಬಗ್ಗೆ ಪರಿಶೀಲನೆ ನಡೆಸಿ, ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

‘2004–05 ರಲ್ಲಿ ಹಣಕಾಸು ಸಚಿವನಾಗಿದ್ದಾಗ ನೇಕಾರರಿಗೆ ತಲಾ ಯೂನಿಟ್ ವಿದ್ಯುತ್‌ಗೆ ₹4.20 ಶುಲ್ಕ ವಿಧಿಸಲಾಗುತ್ತಿತ್ತು. ನಾನು ಅದನ್ನು ₹1.20ಕ್ಕೆ ಇಳಿಸಿದ್ದೆ. ಅದರಿಂದ ಬಹಳಷ್ಟು ನೇಕಾರರಿಗೆ ಅನುಕೂಲವಾಗಿತ್ತು. ಈಗ 20 ಎಚ್‌ಪಿವರೆಗೆ ರಿಯಾಯತಿ ದರದಲ್ಲಿ ವಿದ್ಯುತ್ ಒದಗಿಸಲಾಗುತ್ತಿದೆ. ಶೂನ್ಯ ಬಡ್ಡಿ ದರದಲ್ಲಿ ₹5 ಲಕ್ಷದವರೆಗೆ ಸಾಲ ಒದಗಿಸಲಾಗುತ್ತಿದೆ. ನೇಕಾರ ಸಮ್ಮಾನ ಯೋಜನೆ ಇದೆ. ಈ ಎಲ್ಲ ಯೋಜನೆಗಳ ಪ್ರಯೋಜನವನ್ನು ಸಮುದಾಯದವರು ಪಡೆದುಕೊಳ್ಳಬೇಕು’ ಎಂದು ಹೇಳಿದರು.

ಕೀಳರಿಮೆಯಿಂದ ಹೊರಬನ್ನಿ: ಡಿಕೆಶಿ

ದೇವಾಂಗ ಸಂಘದ ಶತಮಾನೋತ್ಸವ ಸಮಾರಂಭದಲ್ಲಿ, ಸಂಘದ ಅಧ್ಯಕ್ಷ ಜಿ.ರಮೇಶ್, ರಾಜ್ಯಸಭಾ ಸದಸ್ಯ ಕೆ.ನಾರಾಯಣ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತುಕತೆಯಲ್ಲಿ ತೊಡಗಿದ್ದರು. ಹಂಪಿಯ ಹೇಮಕೂಟ ಸಂಸ್ಥಾನದ ಪೀಠಾಧ್ಯಕ್ಷ ದಯಾನಂದಪುರಿ ಸ್ವಾಮೀಜಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ದೇವಾಂಗ ಸಮುದಾಯವು ತಾವು ಹಿಂದುಳಿದವರು ಎಂಬ ಕೀಳರಿಮೆಯಿಂದ ಹೊರಗೆ ಬರಬೇಕಿದೆ. ಹಿಂದುಳಿದ ವರ್ಗಗಳ ಸಹಾಯವಿಲ್ಲದೆ ಸಮಾಜ ಮುನ್ನಡೆಯುವುದಿಲ್ಲ. ಕೀಳರಿಮೆಯಿಂದ ಹೊರಬಂದರಷ್ಟೇ ಸಮುದಾಯವು ಅಭಿವೃದ್ಧಿ ಹೊಂದುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

‘ನಿಮ್ಮ ಸಮುದಾಯದ ಯುವಜನರು ಶಿಕ್ಷಣ ಪಡೆದುಕೊಳ್ಳುವುದರ ಜತೆಗೆ ಕುಲ ಕಸುಬನ್ನೂ ಬೆಳೆಸಬೇಕು. ಮಾರುಕಟ್ಟೆಯಲ್ಲಿ ಲಭ್ಯವಿರುವ ತಂತ್ರಜ್ಞಾನಗಳನ್ನು ಬಳಸಿಕೊಂಡು, ಬೆಳೆಯಬೇಕು. ಬಟ್ಟೆ ಉತ್ಪಾದನೆ ಮಾಡುವ ಅನೇಕ ಕಾರ್ಪೊರೇಟ್ ಕಂಪನಿಗಳಿದ್ದು, ನಿಮಗೆ ಸ್ಪರ್ಧೆ ಒಡ್ಡುತ್ತಿವೆ. ಆದರೆ, ನಿಮ್ಮ ಬಳಿ ಅನುಭವ, ಶ್ರಮ ಮತ್ತು ಕೌಶಲವಿದ್ದು, ಅವುಗಳ ಜತೆಗೆ ತಂತ್ರಜ್ಞಾನ ಬಳಸಿಕೊಂಡು ಸ್ಪರ್ಧೆಯನ್ನು ಗೆಲ್ಲಬೇಕು’ ಎಂದರು.

‘ಸಂಘದ ವಿವಿಧ ಕಾರ್ಯಗಳಿಗೆ ಬೆಂಗಳೂರಿನಲ್ಲಿ ಜಾಗ ಬೇಕಾಗಿದೆ ಎಂದು ಕೋರಿದ್ದೀರಿ. ಬಿಡಿಎ ಮೂಲಕ ನಾಗರಿಕ ಬಳಕೆ (ಸಿಎ) ನಿವೇಶನ ಕೊಡಿಸುವ ಬಗ್ಗೆ ಪರಿಶೀಲನೆ ನಡೆಸಿ, ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

‘ಅಸ್ಪೃಶ್ಯತೆ ನಾನು ಅನುಭವಿಸಿದ್ದೆ’

ನಾರಿ ಶಕ್ತಿ ರಾಷ್ಟ್ರೀಯ ಸಮ್ಮೇಳನ: ರಾಮಲಿಂಗಾರೆಡ್ಡಿ ಹೇಳಿಕೆ

ಪ್ರಜಾವಾಣಿ ವಾರ್ತೆ

‘ನಾರಿ ಶಕ್ತಿ’ ರಾಷ್ಟ್ರೀಯ ಸಮ್ಮೇಳನದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘದಿಂದ ಸನ್ಮಾನಿಸಲಾಯಿತು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸಣ್ಣವನಿದ್ದಾಗ ನಮ್ಮೂರಿನಲ್ಲಿ ನನಗೂ ಅಸ್ಪೃಶ್ಯತೆಯ ಅನುಭವವಾಗಿತ್ತು. ನಮ್ಮೂರಿನ ಪೂಜಾರಿಯನ್ನು ನಾವು ಮುಟ್ಟಿದರೆ ಅವರು ಪುನಃ ಸ್ನಾನ ಮಾಡಿಕೊಂಡು ಬರುತ್ತಿದ್ದರು’ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕರ್ನಾಟಕ ಆರ್ಯ ಈಡಿಗರ ಮಹಿಳಾ ಸಂಘ ಭಾನುವಾರ ಆಯೋಜಿಸಿದ್ದ ‘ನಾರಿ ಶಕ್ತಿ ರಾಷ್ಟ್ರೀಯ ಸಮ್ಮೇಳನ- 2026’ ಉದ್ಘಾಟಿಸಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ಬಸವಣ್ಣ, ಶತಮಾನದ ಹಿಂದೆ ನಾರಾಯಣ ಗುರುಗಳು, ಮಹಾತ್ಮ ಗಾಂಧೀಜಿ ಸೇರಿದಂತೆ ಅನೇಕ ಮಹನೀಯರು ಅಸ್ಪೃಶ್ಯತೆ ವಿರುದ್ಧ ಹೋರಾಡಿದ್ದರು. ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ನಿರಾಕರಿಸಿದಾಗ ನಾರಾಯಣ ಗುರುಗಳು ಅವರಿಗಾಗಿಯೇ ದೇವಾಲಯ ನಿರ್ಮಿಸಿದರು. ಶಾಲೆಗಳನ್ನು ತೆರೆದು ಅಕ್ಷರ ದೀಕ್ಷೆ ನೀಡಿದರು’ ಎಂದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ‘ಆಶ್ರಯ, ಆರಾಧನಾ ಯೋಜನೆಗಳ ಮೂಲಕ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರು ಬಡವರ ಮನದಲ್ಲಿ ನೆಲೆಸಿದ್ದಾರೆ. ಕಡು ಬಡವರಿಗೆ ಹಕ್ಕು ಪತ್ರಗಳನ್ನು ನೀಡಿ ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರು ಆಶ್ರಯದಾತರಾಗಿದ್ದಾರೆ. ಬಡ ವರ್ಗದವರಿಗೂ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ನೀಡಿ ಜನಾರ್ದನ ಪೂಜಾರಿ ಅವರು ಜನಮನದಲ್ಲಿ ಇದ್ದಾರೆ. ಸಿನಿಮಾ ಕ್ಷೇತ್ರಕ್ಕೆ ರಾಜ್‌ಕುಮಾರ್, ಶಿಕ್ಷಣ ಕ್ಷೇತ್ರಕ್ಕೆ ಆರ್.ಎಲ್.ಜಾಲಪ್ಪ ಅವರು ಕೊಡುಗೆ ನೀಡಿದ್ದಾರೆ. ಇಡೀ ಈಡಿಗ ಸಮುದಾಯವನ್ನು ಒಗ್ಗೂಡಿಸುವ ಮತ್ತಷ್ಟು ಕೆಲಸ ಆಗಬೇಕಾಗಿದೆ’ ಎಂದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಮಾತನಾಡಿದರು. ಬೆಂಗಳೂರು ಬಿಲ್ಲವ ಅಸೋಸಿಯೇಷನ್ ಅಧ್ಯಕ್ಷ ವೇದ ಕುಮಾರ್ ಸೇರಿದಂತೆ ವಿವಿಧ ಸಾಧಕರನ್ನು ಸನ್ಮಾನಿಸಲಾಯಿತು. ಸೋಲೂರಿನ ಆರ್ಯ ಈಡಿಗ ಮಹಾ ಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ, ನಿಟ್ಟೂರಿನ ಶ್ರೀನಾರಾಯಣಗುರು ಸಂಸ್ಥಾನದ ರೇಣುಕಾನಂದ ಸ್ವಾಮೀಜಿ, ಆರ್ಯ ಈಡಿಗ ಮಹಿಳಾ ಸಂಘದ ಸಂಸ್ಥಾಪಕ ಅಧ್ಯಕ್ಷೆ ನಳಿನಾಕ್ಷಿ ಸಣ್ಣಪ್ಪ, ಅಧ್ಯಕ್ಷೆ ಸುಮಲತಾ ಎನ್. ಸುವರ್ಣ, ಕಾರ್ಯಕ್ರಮದ ಅಧ್ಯಕ್ಷೆ ಆಶಿತಾ ಶರಣ್, ಕಾರ್ಯಾಧ್ಯಕ್ಷೆ ಸುರೇಖಾ ನಾರಾಯಣ, ಉಡುಪಿ ವಿಭಾಗದ ಅಧ್ಯಕ್ಷೆ ಗೀತಾಂಜಲಿ ಸುವರ್ಣ, ಜನತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ರಾಜನಂದಿನಿ ಕಾಗೋಡು ಉಪಸ್ಥಿತರಿದ್ದರು.

‘ಸಮುದಾಯ ಮಠ ನಡೆಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲವೇ ಕೆಲವು ಜನರಿಂದ ಮಠ ನಡೆಯುವಂತೆ ಆಗಬಾರದು. ಸಮುದಾಯ ಮಠವನ್ನು ನಡೆಸಬೇಕೆಂಬ ಅಭಿಲಾಷೆಯಿಂದ ಮಠದ ವಿವಿಧ ಜವಾಬ್ದಾರಿಗಳನ್ನು ಹಂಚಲಾಗಿದೆ’ ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಹೇಳಿದರು.


ರಾಘವೇಶ್ವರ ಭಾರತೀ ಶ್ರೀ

ಮಠವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಶಾಸನತಂತ್ರ ಅಧಿವೇಶನ’ದಲ್ಲಿ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು.

‘ಹಿಂದೆ ಮಠದ ವ್ಯವಸ್ಥೆಯಲ್ಲಿ ವ್ಯಕ್ತಿಗಳಿಗೆ ಜವಾಬ್ದಾರಿಯನ್ನು ನೀಡಲಾಗುತ್ತಿತ್ತು. ಈಗ ಅದಕ್ಕೆ ವ್ಯವಸ್ಥೆಯ ರೂಪ ನೀಡಿ, ಸಮಷ್ಟಿಗೆ ಅಥವಾ ಸಮಿತಿಗೆ ಜವಾಬ್ದಾರಿಯನ್ನು ಹಂಚಲಾಗಿದೆ. ಮಠದಲ್ಲಿ ಪದಾಧಿಕಾರಿಗಳು ಎಂಬ ಜವಾಬ್ದಾರಿ ನೀಡಿದರೂ, ಅದು ಅಧಿಕಾರದ ಗದ್ದುಗೆಯಲ್ಲ. ಅಲ್ಲಿ ಕರ್ತವ್ಯದ ಹೊಣೆಗಾರಿಕೆ ಮಾತ್ರವಿದ್ದು, ಇದನ್ನು ಕಾರ್ಯಕರ್ತರು ಮನಗಾಣಬೇಕು’ ಎಂದರು.

ವಿದ್ವಾಂಸ ಎಂ.ಎಸ್.ಸನತ್ ಕುಮಾರ್ ಸೋಮಯಾಜಿ, ‘ಕಾರ್ಯಕರ್ತರಾಗಿ ಸೇವೆ ಮಾಡುವಾಗ ನಾನೇನು ಮಾಡಿದೆ ಎಂಬುದಷ್ಟೇ ಮುಖ್ಯವಾಗಬೇಕು ಹೊರತು, ನನಗೇನು ಸಿಕ್ಕಿತು ಎಂಬ ಪ್ರಶ್ನೆ ಬರಬಾರದು. ನನಗಿಂತ ಕಿರಿಯರಿಲ್ಲ ಎಂಬ ಭಾವ ಪ್ರತಿಯೊಬ್ಬ ಕಾರ್ಯಕರ್ತನಲ್ಲಿ ಇದ್ದಾಗ ಬಲಿಷ್ಠ ಸಂಘಟನೆ ಸಾಧ್ಯ’ ಎಂದು ಅಭಿಪ್ರಾಯಪಟ್ಟರು.

ವಿದ್ವಾಂಸ ಘನಪಾಠಿ ಶಂಕರನಾರಾಯಣ ಭಟ್ಟ ಪಳ್ಳತ್ತಡ್ಕ, ‘ಮನುಷ್ಯ ಜನ್ಮ ಶ್ರೇಷ್ಠ ವಾಗಿದ್ದು, ಜ್ಞಾನ ಎಂಬುದು ಮನುಷ್ಯರಿಗಿರುವ ಹೆಚ್ಚುಗಾರಿಕೆಯಾಗಿದೆ. ಸನಾತನ ಧರ್ಮದಲ್ಲಿ ಅನೇಕ ನಿತ್ಯ ನೈಮಿತ್ತಿಕ ಕರ್ಮಗಳನ್ನು ಹೇಳಲಾಗಿದೆ. ಅವುಗಳನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ’ ಎಂದು ಹೇಳಿದರು.

ಚಕ್ರವರ್ತಿ ಸೂಲಿಬೆಲೆ ಮಾತನಾಡಿದರು. ವಿದ್ವಾಂಸ ಜಗದೀಶ ಶರ್ಮಾ ಸಂಪ, ಪ್ರಶಾಸನಾಧಿಕಾರಿ ಸಂತೋಷ್ ಹೆಗಡೆ, ಪತ್ರಕರ್ತ ವಿಶ್ವೇಶ್ವರ ಭಟ್ ಹಾಗೂ ವಕೀಲ ಅರುಣ ಶ್ಯಾಮ್ ಪಾಲ್ಗೊಂಡಿದ್ದರು. ಶಾಸನತಂತ್ರದ ಅಧ್ಯಕ್ಷ ಮೋಹನ ಭಾಸ್ಕರ ಹೆಗಡೆ ಸಮಾರೋಪದ ನುಡಿಗಳನ್ನಾಡಿದರು.

‘ಸರ್ಕಾರಕ್ಕೆ ಮುಜುಗರ ತರುವ ವಿಚಾರ’

ಶಿವಮೊಗ್ಗ: ‘ಬಳ್ಳಾರಿ ಘಟನೆ ರಾಜ್ಯ ಸರ್ಕಾರಕ್ಕೆ ಮುಜುಗರ ತರುವ ವಿಚಾರ. ಅದು ಸಣ್ಣ ಘಟನೆ. ಅಷ್ಟು ದೊಡ್ಡದು ಆಗಬಾರದಿತ್ತು. ತನಿಖೆ ಬಳಿಕ ತಪ್ಪಿತಸ್ಥರು ಯಾರೆಂದು ತಿಳಿಯಲಿದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಇಲ್ಲಿ ಹೇಳಿದರು.

ರಾಜ್ಯಮಟ್ಟದ ವಾಲ್ಮೀಕಿ ಕಪ್ ಕ್ರಿಕೆಟ್ ಟೂರ್ನಿ ಉದ್ಘಾಟನೆಗೆ ಭಾನುವಾರ ನಗರಕ್ಕೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಬಳ್ಳಾರಿ ಘಟನೆಯನ್ನು ಸಿಐಡಿ ತನಿಖೆಗೆ ಒಪ್ಪಿಸುವ ಬಗ್ಗೆ ಸರ್ಕಾರ ನಿರ್ಧರಿಸಿದೆ. ಹೀಗಾಗಿ ಸಿಬಿಐ ತನಿಖೆಗೆ ವಹಿಸುವ ಅಗತ್ಯವಿಲ್ಲ. ಅಲ್ಲಿ ಸರಿಯಾಗಿ ಪರಿಸ್ಥಿತಿ ನಿರ್ವಹಣೆ ಮಾಡದಿರುವುದೇ ಎಸ್ಪಿ ಅಮಾನತಿಗೆ ಕಾರಣ’ ಎಂದು ಅವರು ಹೇಳಿದರು.

‘ದಲಿತ ಸಾಹಿತ್ಯ ಮತ್ತು ಚಳವಳಿ–50’ರ ಗೋಷ್ಠಿ ಸಮಾರೋಪ

‘ಪರ್ಯಾಯ ರಾಜಕೀಯ ಶಕ್ತಿಯಾಗಲಿ’

ಪ್ರಜಾವಾಣಿ ವಾರ್ತೆ

ದಲಿತ ಸಾಹಿತ್ಯ ಮತ್ತು ಚಳವಳಿ–50 ರಾಜ್ಯಮಟ್ಟದ ಅಧ್ಯಯನ ಶಿಬಿರದ ಸಮಾರೋಪದಲ್ಲಿ ದು.ಸರಸ್ವತಿ, ಡಿ. ಡೊಮಿನಿಕ್, ಮಾವಳ್ಳಿ ಶಂಕರ್, ಎಲ್.ಎನ್. ಮುಕುಂದರಾಜ್, ಎನ್. ವೆಂಕಟೇಶ್, ಕೋಟಿಗಾನಹಳ್ಳಿ ರಾಮಯ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ದಲಿತ ಸಂಘರ್ಷ ಸಮಿತಿಯ ಒತ್ತಡ ಮತ್ತು ಸಹಕಾರದಿಂದಾಗಿ ಕಾಂಗ್ರೆಸ್ ಸ್ವಲ್ಪಮಟ್ಟಿಗೆ ಸ್ಪಂದಿಸುತ್ತಿದೆ. ಆದರೆ, ಡಿಎಸ್‌ಎಸ್ ಪರ್ಯಾಯ ರಾಜಕೀಯ ಶಕ್ತಿಯನ್ನು ಕಟ್ಟಬೇಕಾದ ಅನಿವಾರ್ಯ ಸಂದರ್ಭ ಸೃಷ್ಟಿಯಾಗಿದೆ ಎಂದು ಡಿಎಸ್‌ಎಸ್ ನಾಯಕ ಎನ್. ವೆಂಕಟೇಶ್ ತಿಳಿಸಿದರು.

ದಲಿತ ಸಾಹಿತ್ಯ ಮತ್ತು ಚಳವಳಿ–50 ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಅವರು ಮಾತನಾಡಿದರು.

ಪರ್ಯಾಯ ರಾಜಕೀಯ ಶಕ್ತಿಯಾಗಬೇಕಿದ್ದರೆ ಯುವಜನರು ಈ ಚಳವಳಿಯನ್ನು ಮುನ್ನಡೆಸಬೇಕು. ತನ್ನದೇ ಆದ ಪ್ರಣಾಳಿಕೆ ಇಲ್ಲದೇ ಇರುವುದರಿಂದ ಡಿಎಸ್‌ಎಸ್ ರಾಜಕೀಯ ಶಕ್ತಿಯಾಗಿ ಬೆಳೆಯಲು ಸಾಧ್ಯವಾಗಿಲ್ಲ. ಪ್ರಣಾಳಿಕೆ ತಯಾರಿಸಬೇಕಾಗಿದೆ’ ಎಂದು ಹೇಳಿದರು.

‘ದಲಿತ ಚಳವಳಿ, ನಾನು ಮತ್ತು ಮುಂದಿನ ಹಾದಿ’ ಗೋಷ್ಠಿಯಲ್ಲಿ ಪತ್ರಕರ್ತ ಶಿವಾಜಿ ಗಣೇಶನ್ ಮಾತನಾಡಿ, ‘ನಾಲ್ಕು ಶಾಸಕರನ್ನು ಒಗ್ಗೂಡಿಸಲು ಆಗದೇ, ನಾಲ್ಕು ಜನರಿಗೆ ಟಿಕೆಟ್ ಕೊಡಿಸುವ ಸಾಮರ್ಥ್ಯ ಇಲ್ಲದೇ ಕೇವಲ ಹೈಕಮಾಂಡ್ ಕಡೆಗೆ ಮುಖ ಮಾಡಿ ನಿಂತರೆ ಮುಖ್ಯಮಂತ್ರಿ ಸ್ಥಾನ ದಲಿತರಿಗೆ ಸಿಗದು. ಜನಶಕ್ತಿ ಇದ್ದರಷ್ಟೇ ಈ ಸ್ಥಾನ ದಕ್ಕಿಸಿಕೊಳ್ಳಲು ಸಾಧ್ಯ’ ಎಂದು ತಿಳಿಸಿದರು.

‘ಬೂಸಾ ಪ್ರಕರಣದ ನಂತರ ಬಸವಲಿಂಗಪ್ಪ ಸಚಿವ ಸ್ಥಾನ ಕಳೆದುಕೊಂಡರು. ಆಗ ಅವರನ್ನು ಚಳವಳಿ ಮುನ್ನಡೆಸಲು ಆಹ್ವಾನಿಸಲಾಗಿತ್ತು. ಜನಶಕ್ತಿ ಇದ್ದ ಬಸವಲಿಂಗಪ್ಪ ಅಂದು ದಲಿತ ಚಳವಳಿಗೆ ಬಂದಿದ್ದರೆ ಕರ್ನಾಟಕದ ಕಾನ್ಶಿರಾಂ ಆಗುತ್ತಿದ್ದರು’ ಎಂದು ಹೇಳಿದರು.

ಡಿಎಸ್‌ಎಸ್ ಮುಖಂಡ ಕುಂದೂರು ತಿಮ್ಮಯ್ಯ ಮಾತನಾಡಿ, ‘ಕಿಟ್ಟಿ ಸಹಿತ ಶ್ರೀರಾಮಪುರದ ರೌಡಿಗಳ ಕಾಲಾಳಾಗಿದ್ದ ನಾನು ಕ್ರೌರ್ಯದ ಜಗತ್ತಿನಿಂದ ಹೊರಬಂದು ಜೀವಂತವಾಗಿ ಉಳಿಯಲು ದಲಿತ ಸಂಘರ್ಷ ಸಮಿತಿ ಮತ್ತು ಅಂಬೇಡ್ಕರ್ ಕಾರಣ’ ಎಂದು ನೆನಪು ಮಾಡಿಕೊಂಡರು.

ಡಿಎಸ್‌ಎಸ್ ಮುಖಂಡ ಆರ್. ಮೋಹನ್‌ರಾಜ್, ‘ಡಿಎಸ್‌ಎಸ್ ನಮಗೆ ಸ್ವಾಭಿಮಾನ, ಧೈರ್ಯ, ಪ್ರಶ್ನೆ ಮಾಡುವ ಮನೋಭಾವ, ನಾವೂ ಮನುಷ್ಯರು ಎಂಬ ಪ್ರಜ್ಞೆಯನ್ನು ಮೂಡಿಸಿತು. ನಮ್ಮ ಮಾನ, ಪ್ರಾಣ ಕಾಪಾಡಿದ ತಾಯಿ. ನಮ್ಮ ಚಳವಳಿಯು ಪರ್ಯಾಯ ಶಕ್ತಿ ಆಗಬೇಕು. ಇಲ್ಲದೇ ಇದ್ದರೆ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ನಮ್ಮ ಪರಿಸ್ಥಿತಿ ಬದಲಾಗಲು ಬಿಡುವುದಿಲ್ಲ’ ಎಂದರು.

‘ಡಿಎಸ್‌ಎಸ್ ನಮ್ಮ ಬದುಕನ್ನು ಮುನ್ನಡೆಸಿದೆ. ನಾವು ಡಿಎಸ್‌ಎಸ್ ಚಳವಳಿಯನ್ನು ಮುನ್ನಡೆಸಬೇಕಿದೆ’ ಎಂದು ಡಿಎಸ್‌ಎಸ್ ಮುಖಂಡ ವಿ. ನಾಗರಾಜ್ ಆಶಿಸಿದರು.

ಸಮಾರೋಪದಲ್ಲಿ ಶಿಬಿರದ ನಿರ್ದೇಶಕ ಕೋಟಿಗಾನಹಳ್ಳಿ ರಾಮಯ್ಯ, ಸಹ ನಿರ್ದೇಶಕರಾದ ಸುಬ್ಬು ಹೊಲೆಯಾರ್, ದು.ಸರಸ್ವತಿ, ಸಂಚಾಲಕ ರವಿಕುಮಾರ್ ಬಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಸದಸ್ಯೆ ಪಿ. ಚಂದ್ರಿಕಾ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಡಿ. ಡೊಮಿನಿಕ್ ಉಪಸ್ಥಿತರಿದ್ದರು.

‘ಡಿಎಸ್‌ಎಸ್‌ನ ಟಿಸಿಲು ಬಿವಿಎಸ್’

ದಲಿತ ಸಂಘರ್ಷ ಸಮಿತಿಯ ಕಾಲ ಮುಗಿದು ಹೋಗಿಲ್ಲ. ಅದರ ಟಿಸಿಲು ಆಗಿ ಬಿವಿಎಸ್ ಹುಟ್ಟಿಕೊಂಡಿತ್ತು. ಆದರೆ, ಡಿಎಸ್‌ಎಸ್ ಮತ್ತು ಭಾರತೀಯ ವಿದ್ಯಾರ್ಥಿ ಸಂಘ (ಬಿವಿಎಸ್) ಪರಸ್ಪರ ಅರ್ಥ ಮಾಡಿಕೊಂಡು ಮುಂದಕ್ಕೆ ಹೋಗಿದ್ದರೆ ಒಳ್ಳೆಯದಿತ್ತು ಎಂದು ಮಾವಳ್ಳಿ ಶಂಕರ್ ಹೇಳಿದರು.

ಡಿಎಸ್‌ಎಸ್‌ನವರಿಗೆ ಅಂಬೇಡ್ಕರ್ ಬಗ್ಗೆ ಗೊತ್ತಿಲ್ಲ. ಅಲ್ಲಿ ಮಾರ್ಕ್ಸ್, ಗಾಂಧಿ, ಲೋಹಿಯಾ ಇದ್ದಾರೆ ಎಂದೆಲ್ಲ ಹೇಳಿದ್ದಲ್ಲದೇ ನಿಂದನಾತ್ಮಕ ವಾಗಿ ಟೀಕಿಸಿದರು. ಮಾರ್ಕ್ಸ್, ಗಾಂಧಿ, ಲೋಹಿಯಾ ಇದ್ದರೆ ತಪ್ಪೇನು. ಒಳ್ಳೆಯದು ಯಾವುದು ಇದ್ದರೂ ಬರಲಿ ಎಂಬ ವಿಶಾಲ ಮನೋಭಾವ ಇರಬೇಕಿತ್ತು. ಬದಲಾಗಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ವಿಷ ಬಿತ್ತುವ ಕೆಲಸ ಮಾಡಿದ್ದರಿಂದ ಹಿನ್ನಡೆಯಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

‘ಆರ್‌ಎಸ್‌ಎಸ್ ಎಂಬ ಘಟಸರ್ಪ ನಮ್ಮ ಮುಂದೆ ಬಂದು ನಿಂತಿದೆ. ಧರ್ಮಾಧಾರಿತ ವಾದ ಪ್ರಭುತ್ವ ನಡೆಯುತ್ತಿದೆ. ಪ್ರಾದೇಶಿಕವಾಗಿ ಕೋಮುವಾದಿ ನೀತಿಯೊಂದಿಗೆ ಜಾಗತೀಕರಣ ಕೆಲಸ ಮಾಡುತ್ತಿದೆ. ಇದನ್ನು ಎದುರಿಸುವ ಬಗ್ಗೆ ಚಿಂತನೆ ನಡೆಸಬೇಕಿದೆ’ ಎಂದರು.

ಪರಶುರಾಮ ಥೀಮ್ ಪಾರ್ಕ್‌ನಿಂದ ಕಳವು

ಉಡುಪಿ: ಕಾರ್ಕಳದ ಬೈಲೂರಿನ ಪರಶುರಾಮ ಥೀಮ್ ಪಾರ್ಕ್‌ನಿಂದ ತಾಮ್ರದ ಹೊದಿಕೆ ಕಳವು ಮಾಡಿರುವ ಕುರಿತು ಕಾರ್ಕಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಟ್ಟಡದ ಚಾವಣಿಗೆ ಹೊದಿಸಿದ್ದ ತಾಮ್ರದ ಹೊದಿಕೆ ಕಳವು ಮಾಡಿದ್ದಾರೆ ಎಂದು ಉಡುಪಿ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಅರುಣ್ ಕುಮಾರ್ ದೂರು ನೀಡಿದ್ದಾರೆ.

‘ಕಾರ್ಕಳದ ಇತಿಹಾಸದಲ್ಲಿ ದುರ್ದಿನ’: ‘ಕಾರ್ಕಳದ ಪರಶುರಾಮ ಥೀಂ ಪಾರ್ಕ್‌ನ ಬಾಗಿಲನ್ನು ಒಡೆದು ಒಳನುಗ್ಗಿದ ದುಷ್ಕರ್ಮಿಗಳು ತಾಮ್ರದ ಹೊದಿಕೆ ಕಿತ್ತು ಕಳ್ಳತನ ಮಾಡಿದ್ದಾರೆ. ಕಾರ್ಕಳದ ಇತಿಹಾಸದಲ್ಲಿ ಇದೊಂದು ದುರ್ದಿನ’ ಎಂದು ಶಾಸಕ ಸುನಿಲ್ ಕುಮಾರ್ ಹೇಳಿದ್ದಾರೆ.

ಕರ್ನಾಟಕ ಸರ್ಕಾರದ ಬಾಂಡ್‌ಗಳು (ಸೆಕ್ಯುರಿಟೀಸ್)
ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

ಪ್ರಕಟಣೆ

1. ಒಟ್ಟು ಮೊತ್ತ: ರೂ 6000 ಕೋಟಿ (1,000 ಕೋಟಿ ರೂ.ಗಳು–7.19% SGS 2032 ಮರು ಹಂಚಿಕೆ; 2,000 ಕೋಟಿ ರೂ.ಗಳು–5 ವರ್ಷ 6 ತಿಂಗಳುಗಳ ಅವಧಿ; 1,000 ಕೋಟಿ ರೂ.ಗಳು–8 ವರ್ಷಗಳ ಅವಧಿ; 2,000 ಕೋಟಿ ರೂ.ಗಳು–10 ವರ್ಷ 6 ತಿಂಗಳುಗಳ ಅವಧಿ;)
2. ಹಂಚಿಕೆ ವಿಧಾನ: ಹರಾಜು ಮೂಲಕ, (ರಿಸರ್ವ್ ಬ್ಯಾಂಕ್ (ಪಿಡಿಒ), ಆರ್‌ಬಿಐ, ಮುಂಬೈ ಮುಖಾಂತರ).
3. ಹರಾಜಿನ ದಿನಾಂಕ : ಜನವರಿ 06, 2026.

ಕರ್ನಾಟಕ ಸರ್ಕಾರವು ಮೇಲಿನ ಭದ್ರತಾ ಪತ್ರಗಳಿಗೆ ಚಂದಾದಾರಿಕೆಯನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ರಿಸರ್ವ್ ಬ್ಯಾಂಕ್, ಪಿಡಿಒ, ಬೆಂಗಳೂರು ಕಛೇರಿಯಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ರಿಸರ್ವ್ ಬ್ಯಾಂಕ್ ನಿಂದ ಸ್ಪರ್ಧಾತ್ಮಕವಲ್ಲದ ಹರಾಜು ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟಕ್ಕೆ ಅಧಿಸೂಚಿಸಲಾದ ಮೊತ್ತದ ಗರಿಷ್ಠ ಶೇ.10ರವರೆಗಿನ ಸರ್ಕಾರಿ ಭದ್ರತಾ ಪತ್ರಗಳನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಹರಾಜು ಸೌಲಭ್ಯದ ಪರಿಷ್ಕೃತ ಯೋಜನೆಯ ವಿವರಗಳು www.rbi.org.in. ಜಾಲತಾಣದಲ್ಲಿ ಲಭ್ಯವಿದೆ.

ಸಹಿ/– (ಇಕ್ರಂ ಶರೀಫ್)
ಸರ್ಕಾರದ ಜಂಟಿ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ
DIPR/CP/4796/Zen/2025-26

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ|| ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು–560029.
ಫೋನ್: 26096832/26096910 ಫ್ಯಾಕ್ಸ್: 080–25536105 ಇಮೇಲ್: purchase@kmf.coop

ಟೆಂಡರ್ ಪ್ರಕಟಣೆಗಳು
(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ತನ್ನ ಘಟಕಗಳಲ್ಲಿನ ತುಂಡು ಗುತ್ತಿಗೆ ಕೆಲಸಗಳ ನಿರ್ವಹಣೆಗೆ ಎರಡು ವರ್ಷದ ಅವಧಿಗೆ ಗುತ್ತಿಗೆ ಕಾರ್ಮಿಕರನ್ನು ಒದಗಿಸಲು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Tender Notification No.	Name of the Unit	Quantity	EMD (Rs.)
1	KMF/PUR/Tender-868/2025-26	Nandini Milk Products, Bangalore	As detailed in tender document	31,45,000/-
2	KMF/PUR/Tender-869/2025-26	Nandini Packaging Film Plant, Bangalore		3,63,000/-
3	KMF/PUR/Tender-870/2025-26	Mother Dairy, Bangalore (Milk & Milk Products Packing)		6,60,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ : From 05.01.2026. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 19.01.2026 at 11.00 AM. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : on or before 03.02.2026 up to 5.30 PM. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : on 05.02.2026 at 11.00 AM. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.
ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಗನ್‌ಮ್ಯಾನ್ ಸೇರಿ 26 ಮಂದಿ ಸೆರೆ

ಒಂದನೇ ಪುಟದಿಂದ...

ಬಂಧಿತರಲ್ಲಿ ಕಾಂಗ್ರೆಸ್, ಬಿಜೆಪಿಯ ಕಾರ್ಯಕರ್ತರು ಇದ್ದಾರೆ ಎನ್ನಲಾಗಿದೆ. ಬಳ್ಳಾರಿ ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಬಂಧನ ಪ್ರಕ್ರಿಯೆ ನಡೆಸಿ ಬಳಿಕ ಅವರನ್ನು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನ ಕೇಂದ್ರದಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ.

ಕಾರ್ತಿಕ್, ಮುಕ್ಕಣ್ಣ, ಇನಾಯತುಲ್ಲಾ, ರಾಜು, ಮುಸ್ತಫಾ, ಶ್ರೀಕಾಂತ್, ಮೊಹಮದ್ ರಸೂಲ್, ಬಾಬು, ವೆಂಕಟೇಶ್, ಮಾಬಾಷ, ಗುರುಪ್ರಸಾದ್, ವಸುಂಧರ, ಶಿವಕುಮಾರ್, ಸಚಿನ್, ಅಬ್ದುಲ್ ರಜಾಕ್ , ಬಜ್ಜಯ್ಯ, ಎಂ.ತಿಮ್ಮಪ್ಪ, ಗುಂಡಾಲಿ ಶ್ರೀನಿವಾಸ, ಕೆ.ಬಿ ಲಕ್ಷ್ಮಣ, ಪಿ. ಶ್ರೀನಿವಾಸ ರೆಡ್ಡಿ, ಪೋತಪ್ಪ, ಷಡಕ್ಷರಿ, ರವಿಬಾಬು, ರವಿಕುಮಾರ್, ರಂಗಸ್ವಾಮಿ ಬಂಧಿತ ಆರೋಪಿಗಳು.

ಪೊಲೀಸರು ಈ ಮೊದಲು ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ಪ್ರಕರಣದಲ್ಲಿ ಶಾಸಕ ಜನಾರ್ದನ ರೆಡ್ಡಿ, ಮುಖಂಡರಾದ ಸೋಮಶೇಖರ ರೆಡ್ಡಿ, ಶ್ರೀರಾಮುಲು, ಸತೀಶ್ ರೆಡ್ಡಿ ಅವರನ್ನು ಆರೋಪಿಗಳಾಗಿ ಉಲ್ಲೇಖಿಸಲಾಗಿತ್ತು. ಜತೆಗೆ, ನಾರಾ ಭರತ್ ರೆಡ್ಡಿ ಗುಂಪು ಕಟ್ಟಿಕೊಂಡು ಬಂದರು ಎಂದೂ ಹೆಸರಿಸಲಾಗಿತ್ತು.

ಗನ್ ಮ್ಯಾನ್ ಸೆರೆ: ಗುರುಚರಣ್ ಸಿಂಗ್ ಎಂಬಾತನೇ ಗುಂಡು ಹಾರಿಸಿದ್ದಾನೆ ಎನ್ನಲಾಗಿದ್ದು, ಆತನನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿದುಬಂದಿದೆ. ಆದರೆ, ಈತನ ಹೆಸರನ್ನು ಅಧಿಕೃತವಾಗಿ ಘೋಷಿಸಿಲ್ಲ.

ಶಾಂತ ಸ್ಥಿತಿಯತ್ತ: ಬಳ್ಳಾರಿ ನಗರ ಬಹುತೇಕ ಶಾಂತ ಸ್ಥಿತಿಗೆ ಮರಳಿದೆ. ಆದರೂ, ನಗರದ ಪ್ರಮುಖ ರಸ್ತೆಗಳಲ್ಲಿ ಇನ್ನೂ ಮೀಸಲು ಪೊಲೀಸ್ ಪಡೆಯನ್ನು ನಿಯೋಜಿಸಲಾಗಿದೆ. ಶಾಸಕರಾದ ಜನಾರ್ದನ ರೆಡ್ಡಿ, ಭರತ್ ರೆಡ್ಡಿ, ಮಾಜಿ ಸಚಿವ ಶ್ರೀರಾಮುಲು, ಸೋಮಶೇಖರ ರೆಡ್ಡಿ ಮನೆಗಳ ಎದುರು ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗಿದೆ.

ಅನುಮತಿ ಇಲ್ಲದೇ ಪ್ರತಿಮೆ ಪ್ರತಿಷ್ಠಾಪನೆ

ನಗರದಲ್ಲಿ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆ ಪ್ರತಿಷ್ಠಾಪಿಸುವ ಮುನ್ನ ಸ್ಥಳೀಯ ಆಡಳಿತದ ಅನುಮತಿ ಪಡೆದಿರಲಿಲ್ಲ ಎಂದು ಖಚಿತ ಮೂಲಗಳು ಮಾಹಿತಿ ನೀಡಿವೆ.

ಸಾರ್ವಜನಿಕ ರಸ್ತೆ, ವೃತ್ತಗಳಲ್ಲಿ ಪ್ರತಿಮೆ ಪ್ರತಿಷ್ಠಾಪಿಸಬಾರದು ಎಂದು 2006ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಪ್ರತಿಮೆ ಪ್ರತಿಷ್ಠಾಪನೆಗೆ ಮಾರ್ಗಸೂಚಿಗಳಿವೆ. ಬಳಿಕ ಸರ್ಕಾರ 2012ರಲ್ಲಿ ಆದೇಶ ಹೊರಡಿಸಿ, ಪ್ರತಿಮೆ ಪ್ರತಿಷ್ಠಾಪನೆಯನ್ನು ನಿಷೇಧಿಸಿದೆ.

ಪ್ರತಿಮೆ ಪ್ರತಿಷ್ಠಾಪಿಸಿ, ಬಳಿಕ ಘಟನೋತ್ತರ ಅನುಮತಿ ಪಡೆಯುವ ಪ್ರಯತ್ನಗಳು ನಡೆದಿದ್ದವು. ಎರಡು ಪ್ರಸ್ತಾವನೆಗಳು ಸರ್ಕಾರಕ್ಕೆ ಹೋಗಿದ್ದವು ಎನ್ನಲಾಗಿದೆ. ಜನವರಿ 3ರಂದು ಪ್ರತಿಮೆ ಅನಾವರಣ ಕಾರ್ಯಕ್ರಮ ನಿಗದಿಯಾಗಿತ್ತು. ಪ್ರತಿಮೆ ಕೆತ್ತನೆಗೆ ಸರ್ಕಾರದ ₹1.15 ಕೋಟಿ ಅನುದಾನ ಬಳಕೆಯಾಗಿದೆ ಎಂದೂ ಮೂಲಗಳು ತಿಳಿಸಿವೆ.

ವ್ಯಾಡ್ ಚಿತ್ರ ಹರಿದಾಟ

ಒಂದನೇ ಪುಟದಿಂದ...

ಜನಾರ್ದನ ರೆಡ್ಡಿ ಮನೆ ಬಳಿ ಜನ: ಅಹಿತಕರ ಘಟನೆ ಬಳಿಕ ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ ಅವರ ಗೃಹ ಕಚೇರಿ ಜನರಿಲ್ಲದೆ ಬಣಗುಡುತ್ತಿದೆ.

ಇನ್ನೊಂದೆಡೆ, ಇಷ್ಟು ದಿನ ಬಣಗುಡುತ್ತಿದ್ದ ಸಿರುಗುಪ್ಪ ರಸ್ತೆಯಲ್ಲಿನ ಜನಾರ್ದನ ರೆಡ್ಡಿ ಮನೆ ಬಳಿ ಜನಜಂಗುಳಿ ಸೇರುತ್ತಿದೆ. ನಿತ್ಯ ಕಾರ್ಯಕರ್ತರ ದಂಡೇ ಜಮಾಯಿಸುತ್ತಿದೆ. ದೂರವಾಗಿದ್ದ ಜನಾರ್ದನ ರೆಡ್ಡಿ ಶ್ರೀರಾಮುಲು ಅವರನ್ನು ಈ ಜಗಳ ಮತ್ತೆ ಬೆಸೆದಿದೆ.

ಭರತ್ ರೆಡ್ಡಿ ಹೆಸರು ಪೊಲೀಸರು ದಾಖಲಿಸಿದ್ದ ಪ್ರಕರಣದಲ್ಲಿದೆ. ಆದರೂ ತಪ್ಪಿತಸ್ಥರು ಯಾರು ಎಂದು ಪೊಲೀಸರಿಗೆ ಗೊತ್ತಿಲ್ಲವಂತೆ. ಸತ್ಯ ಜಗತ್ತಿಗೆ ಗೊತ್ತಿದ್ದರೂ ಸರ್ಕಾರ ಕ್ರಮಕೈಗೊಂಡಿಲ್ಲ
ಆರ್.ಅಶೋಕ, ವಿಧಾನಸಭೆ ವಿಪಕ್ಷ ನಾಯಕ

ಗನ್ನು, ಗುಂಡು ನಿಮ್ಮದು, ಗುಂಡು ಹಾರಿಸಿದವರು ನಿಮ್ಮವರು, ಸತ್ತವರು ನಿಮ್ಮವರು, ಕೇಸು ದಾಖಲಿಸುವುದು ಮಾತ್ರ ಜನಾರ್ದನ ರೆಡ್ಡಿ, ಶ್ರೀರಾಮುಲು ಮೇಲಾ?
ಛಲವಾದಿ ನಾರಾಯಣ ಸ್ವಾಮಿ, ವಿಧಾನ ಪರಿಷತ್ ವಿಪಕ್ಷ ನಾಯಕ

ನಾಲ್ವರು ಗನ್‌ಮ್ಯಾನ್ ಬಂಧಿಸಿದ್ದಾಗಿ ಎಸ್‌ಪಿ ತಿಳಿಸಿದ್ದಾರೆ. ಗುರುಚರಣ್ ಸಿಂಗ್ ಎಂಬಾತ ಭರತ್ ರೆಡ್ಡಿ, ಕುಟುಂಬಸ್ಥರಿಗೆ ಅಂಗರಕ್ಷಕನಾಗಿದ್ದ. ಭರತ್ ರೆಡ್ಡಿಯನ್ನು ಬಂಧಿಸಬೇಕು
ಜನಾರ್ದನ ರೆಡ್ಡಿ, ಶಾಸಕ

ಝಡ್ ಶ್ರೇಣಿ ಭದ್ರತೆ ಕೊಡಿ: ರೆಡ್ಡಿ ಪತ್ರ

ಕೊಪ್ಪಳ: ‘ಬಳ್ಳಾರಿಯಲ್ಲಿ ಗುಂಡಿನ ದಾಳಿ ಕೃತ್ಯದ ಬಳಿಕ ನನ್ನ ಜೀವಕ್ಕೆ ಅಪಾಯ ಎದುರಾಗಿದ್ದು, ತುರ್ತಾಗಿ ಝಡ್ ಶ್ರೇಣಿ ಭದ್ರತೆ ಒದಗಿಸಬೇಕು’ ಎಂದು ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಒತ್ತಾಯಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ.ಪರಮೇಶ್ವರ ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ ಅವರು ಈ ಕುರಿತು ಪತ್ರ ಬರೆದಿದ್ದಾರೆ.

‘ನನಗೆ, ನನ್ನ ಕುಟುಂಬಕ್ಕೆ ಝಡ್ ಶ್ರೇಣಿ ಅಥವಾ ಅದಕ್ಕೆ ಸಮಾನವಾದ ಭದ್ರತೆ ಒದಗಿಸಬೇಕು. ರಾಜ್ಯ ಸರ್ಕಾರ ನಿರ್ಲಕ್ಷ್ಯವಹಿಸಿ, ಮತ್ತೆ ನನ್ನ ಮೇಲೆ ದಾಳಿ ನಡೆದರೆ ಅದಕ್ಕೆ ಸರ್ಕಾರವೇ ಹೊಣೆ’ ಎಂದೂ ಎಚ್ಚರಿಸಿದ್ದಾರೆ.

‘ಬಳ್ಳಾರಿ ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ ಮತ್ತು ಆತನ ಗೂಂಡಾ ಸಹಚರರು ನನ್ನ ಹತ್ಯೆಗೆ ಯತ್ನಿಸಿದ್ದಾರೆ. ಕಾನೂನು ಸುವ್ಯವಸ್ಥೆ ರಕ್ಷಿಸಲು ಸರ್ಕಾರ ವಿಫಲವಾಗಿದೆ. ಅತ್ಯಂತ ಆಕ್ರೋಶ ಹಾಗೂ ಆಘಾತದೊಂದಿಗೆ ಈ ಪತ್ರವನ್ನು ಬರೆಯುತ್ತಿದ್ದೇನೆ’ ಎಂದು ಹೇಳಿದ್ದಾರೆ.

‘ಬಳ್ಳಾರಿಯ ನನ್ನ ನಿವಾಸದ ಬಳಿ ನಡೆದ ದಾಳಿ ನನ್ನನ್ನು ವ್ಯವಸ್ಥಿತವಾಗಿ ಮುಗಿಸಲು ಭರತ್ ರೆಡ್ಡಿ ನಡೆಸಿದ ಪೂರ್ವನಿಯೋಜಿತ ಸಂಚು’ ಎಂದಿದ್ದಾರೆ.

ಭಕ್ತರ ಸಮ್ಮುಖದಲ್ಲಿ ರಾಯರ ಮಠ, ಉತ್ತರಾದಿ ಮಠ ಸ್ವಾಮೀಜಿಗಳ ಘೋಷಣೆ

ನವವೃಂದಾವನ: ಮಾಧ್ವ ಮಠಗಳ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಪ್ಪಳ ಜಿಲ್ಲೆಯ ಆನೆಗೊಂದಿಯಲ್ಲಿರುವ ನವವೃಂದಾವನದ ಮೂವರು ಯತಿಗಳ ಪೂಜಾ ಹಕ್ಕು ಹಾಗೂ ಆರಾಧನೆ ವಿಚಾರಕ್ಕೆ ಸಂಬಂಧಿಸಿ ಏಳು ದಶಕದಿಂದ ಕರ್ನಾಟಕದ ಎರಡು ಪ್ರಮುಖ ಮಾಧ್ವ ಮಠಗಳ ನಡುವೆ ಏರ್ಪಟ್ಟಿದ್ದ ವಿವಾದ ಬಗೆಹರಿಸಿಕೊಳ್ಳಲು ಅಂತಿಮ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಹಾಗೂ ಉತ್ತರಾದಿ ಮಠದ ಪೀಠಾಧಿಪತಿ ಸತ್ಯಾತ್ಮತೀರ್ಥ ಸ್ವಾಮೀಜಿ ಬೆಂಗಳೂರಿನಲ್ಲಿ ಶನಿವಾರ ನಡೆಸಿದ ಸೌಹಾರ್ದ ಸಮಾಗಮ ಕಾರ್ಯಕ್ರಮದಲ್ಲಿ ಒಪ್ಪಂದಕ್ಕೆ ಬಂದರು.

ಜಯನಗರದಲ್ಲಿರುವ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮೊದಲು ಉಭಯ ಯತಿಗಳು ಚರ್ಚಿಸಿ ಒಪ್ಪಂದ ಅಂತಿಮಗೊಳಿಸಿ ನಂತರ ಬಸವನಗುಡಿಯಲ್ಲಿರುವ ಉತ್ತರಾದಿ ಮಠಕ್ಕೆ ಬಂದು ಪ್ರಕಟಿಸಿದರು. ಬಳಿಕ ಜಯನಗರದ ರಾಯರಮಠಕ್ಕೆ ತೆರಳಿ ಅಲ್ಲಿ ಸಹಿ ಹಾಕಿದರು. ಈ ವೇಳೆ ಹಾಜರಿದ್ದ ಭಕ್ತರು ಸಂತಸದಿಂದಲೇ ನಿರ್ಧಾರವನ್ನು ಸ್ವಾಗತಿಸಿದರು.

ಕೂಡಲಿ ಅಕ್ಷೋಭ್ಯತೀರ್ಥ ಮಠದ ಪೀಠಾಧಿಪತಿ ರಘುವಿಜಯ ತೀರ್ಥ ಸ್ವಾಮೀಜಿ ಉಭಯ ಮಠಾಧೀಶರೊಂದಿಗೆ ಪರಸ್ಪರ ಮಾತುಕತೆ, ಮಧ್ಯಸ್ಥಿಕೆಯನ್ನು ವಹಿಸಿದ್ದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ದಿನೇಶ್‌ಕುಮಾರ್, ಶ್ರೀಧರರಾವ್, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರಾದ ಮುಕುಂದ ಸಹಿತ ಹಲವರ ಉಪಸ್ಥಿತಿಯಲ್ಲಿ ಪ್ರಕ್ರಿಯೆಗಳು ನಡೆದವು.

‘ಉಭಯ ಮಠಗಳ ನಡುವೆ ಹಲವಾರು ವರ್ಷಗಳಿಂದ ವಿವಾದ ಇತ್ತು. ಈಗ ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಅಂತಿಮ ನಿರ್ಧಾರಕ್ಕೆ ಬರಲಾಗಿದೆ. ಸದ್ಯವೇ ಸುಪ್ರೀಂಕೋರ್ಟ್‌ಗೆ ಒಪ್ಪಂದದ ಕರಡನ್ನು ಸಲ್ಲಿಸಲಾಗುತ್ತದೆ. ಅಲ್ಲಿಂದ ಬರುವ ನಿರ್ದೇಶನ ಪಾಲಿಸಿ ಕಾನೂನು ಹೋರಾಟದಿಂದ ಹಿಂದೆ ಸರಿದು ಭಕ್ತರ ಆಶಯಗಳಿಗೆ ಅನುಗುಣವಾಗಿ ಉಭಯ ಮಠಗಳು ಮುಂದುವರಿಯಲಿವೆ. ಇನ್ನುಳಿದ ವಿವಾದಗಳನ್ನು ಹಂತ– ಹಂತವಾಗಿ ಬಗೆಹರಿಸಿಕೊಳ್ಳಲಾಗುವುದು’ ಎಂದು ಪ್ರಮುಖರೊಬ್ಬರು ತಿಳಿಸಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ಹಲವರ ಮಧ್ಯಸ್ಥಿಕೆಯಿಂದ ಸಮಸ್ಯೆ ಬಗೆಹರಿದಿದೆ. ಭಕ್ತರು ಗೊಂದಲಕ್ಕೆ ಅವಕಾಶ ಕೊಡಬಾರದು’ ಎಂದು ಮನವಿ ಮಾಡಿದರು.

ನವವೃಂದಾವನದಲ್ಲಿ ಮೂವರು ಯತಿಗಳಾದ ಪದ್ಮನಾಭ ತೀರ್ಥರು, ಕವೀಂದ್ರ ತೀರ್ಥರು ಹಾಗೂ ವಾಗೀಶ ತೀರ್ಥರ ಆರಾಧನೆ ಯಾರು ಆಚರಿಸಬೇಕು ಎನ್ನುವ ವಿಚಾರದಲ್ಲಿ ವಿವಾದ ಏರ್ಪಟ್ಟು ನ್ಯಾಯಾಲಯ ಮೆಟ್ಟಿಲು ಏರಿತ್ತು. ಸ್ಥಳೀಯ ನ್ಯಾಯಾಲಯ ನಂತರ ಹೈಕೋರ್ಟ್‌ನಲ್ಲೂ ವ್ಯಾಜ್ಯವಿತ್ತು. ಬಳಿಕ ಸುಪ್ರೀಂಕೋರ್ಟ್‌ಗೂ ಅರ್ಜಿ ಸಲ್ಲಿಕೆಯಾಗಿ ವಿಚಾರಣೆ ನಡೆದಿತ್ತು.

‘ಉಭಯ ಮಠಗಳ ಪ್ರಮುಖರು ಕುಳಿತು ಇದನ್ನು ಬಗೆಹರಿಸಿಕೊಳ್ಳಬೇಕು’ ಎಂದು ಸುಪ್ರೀಂಕೋರ್ಟ್ ಸೂಚಿಸಿತ್ತು.

ಒಪ್ಪಂದ ಏನು?


ರಘುವಿಜಯತೀರ್ಥ ಶ್ರೀಪಾದರ ಸಮ್ಮುಖದಲ್ಲಿ ಸುಬುಧೇಂದ್ರ ತೀರ್ಥ ಶ್ರೀಪಾದರು ಮತ್ತು ಸತ್ಯಾತ್ಮತೀರ್ಥ ಶ್ರೀಪಾದರು ಹಸ್ತಲಾಘವ ನೀಡಿದರು

‘ಮುಖ್ಯವಾಗಿ ನವವೃಂದಾವನದಲ್ಲಿರುವ ಮೂವರು ಯತಿಗಳ ವೃಂದಾವನದಲ್ಲಿ ಪದ್ಮನಾಭ ತೀರ್ಥರ ಆರಾಧನೆ ನವೆಂಬರ್‌ನಲ್ಲಿ, ಕವೀಂದ್ರ ತೀರ್ಥರು ಹಾಗೂ ವಾಗೀಶ ತೀರ್ಥರ ಆರಾಧನೆ ಏಪ್ರಿಲ್‌ನಲ್ಲಿ ಬರಲಿದೆ. ಪದ್ಮನಾಭ ತೀರ್ಥರ ಆರಾಧನೆಯನ್ನು ಸರದಿ ಆಧಾರದಲ್ಲಿ ಒಂದೊಂದು ವರ್ಷ ಉಭಯ ಮಠಗಳು ನಡೆಸಲಿವೆ. ಇನ್ನಿಬ್ಬರ ಆರಾಧನೆಯನ್ನು ಒಂದೊಂದು ಮಠದಿಂದ ಒಂದು ವರ್ಷ ನಡೆಸಲಾಗುತ್ತದೆ. ಉಭಯ ಮಠಗಳ ಭಕ್ತರು, ಪ್ರಮುಖರು ಆಯಾ ಆರಾಧನೆ ಆಚರಣೆ ವೇಳೆ ಮಠಕ್ಕೆ ಆಗಮಿಸಲಿದ್ದಾರೆ ’ ಎಂದು ಪ್ರಮುಖರೊಬ್ಬರು ತಿಳಿಸಿದರು.

ನವವೃಂದಾವನಗಡ್ಡೆ ವಿವಾದ ಸಕಾರಾತ್ಮಕ ಹಾಗೂ ಸೌಹಾರ್ದಪೂರ್ಣವಾಗಿ ಅಂತ್ಯ ಕಂಡಿದೆ. ಮಾಧ್ವ ಸಮುದಾಯದಲ್ಲಿ ಏಕತೆ, ಸೌಹಾರ್ದಕ್ಕೆ ಪುಷ್ಟಿ ನೀಡಲಿದೆ
ಸುಬುಧೇಂದ್ರತೀರ್ಥ ಸ್ವಾಮೀಜಿ, ರಾಘವೇಂದ್ರಸ್ವಾಮಿಗಳ ಮಠ

ಸನಾತನ ಧರ್ಮ ಉಳಿಸಿಕೊಳ್ಳಲು ಒಪ್ಪಂದದ ಅಗತ್ಯವಿತ್ತು. ಇದನ್ನು ಅಂತಿಮಗೊಳಿಸಿ ಹಂತ ಹಂತವಾಗಿ ನಮ್ಮ ಆಚರಣೆಗಳ ಮೂಲಕ ಬಗೆಹರಿಸಿಕೊಳ್ಳುತ್ತಾ ಹೋಗುತ್ತೇವೆ
ಸತ್ಯಾತ್ಮ ತೀರ್ಥ ಸ್ವಾಮೀಜಿ, ಉತ್ತರಾದಿ ಮಠ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು–560001
ದೂರವಾಣಿ : 080–25581383, ಫ್ಯಾಕ್ಸ್ : 080–25586321

ಸಂಖ್ಯೆ: ಕರಾಮಾಮಂ/170/ಕ/2023/2025–26/3971 ದಿನಾಂಕ: 30/12/2025

ಟೆಂಡರ್‌ಗಾಗಿ ಆಹ್ವಾನ (ಕರೆ–2)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮೂಲಕ ಕೆಳಗಿನ ಕೆಲಸಕ್ಕೆ ಸದಸ್ಯ ಕಾರ್ಯದರ್ಶಿಯವರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕೆಲಸದ ಹೆಸರು: ಕೊಪ್ಪಳದಲ್ಲಿ ಕೆಎಸ್‌ಪಿಸಿಬಿ ಪ್ರಾದೇಶಿಕ ಕಛೇರಿಯ ಉದ್ದೇಶಿತ ನಿರ್ಮಾಣ. ಕೆಲಸದ ಅಂದಾಜು ಮೌಲ್ಯ: **ರೂ.255.02 ಲಕ್ಷಗಳು.** ಟೆಂಡರ್ ಬೆಲೆ, ಇಎಂಡಿ, ಇತ್ಯಾದಿ ಹಣ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಟೆಂಡರ್ ಶೆಡ್ಯೂಲ್ / ದಿನಾಂಕಗಳು

ಎನ್‌ಐಟಿ ಪ್ರಕಟಿಸಲಾದ ದಿನಾಂಕ	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ಪೂರ್ವ–ಭಾವಿ ಬಿಡ್ ಸಭೆಯ ದಿನಾಂಕ & ಸಮಯ	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ & ಸಮಯ	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ

ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನ್ನು ಉಲ್ಲೇಖಿಸುವುದು.

ಸಹಿ/–
ಸದಸ್ಯ ಕಾರ್ಯದರ್ಶಿ
ವಾ.ಸಾ.ಸಂ.ಇ/ವಾಪ್ರ/4846/ಆಕಾರ್/2025–26

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಕೇಳಿ ಪಡೆದ ಪ್ರೇಮ ಒಳ್ಳೆಯದು; ಕೇಳದೆಯೇ ಪಡೆದ ಪ್ರೇಮ ಇನ್ನೂ ಒಳ್ಳೆಯದು.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಪಂಚಾಯಿತಿಗಳಿಗೆ ಸಿಗದ ಅನುದಾನ ದುರ್ಬಲಗೊಂಡ 'ಗ್ರಾಮ ಸ್ವರಾಜ್ಯ'

ಗ್ರಾಮ ಸ್ವರಾಜ್ಯದ ವಿಚಾರದಲ್ಲಿ ಮಹಾತ್ಮ ಗಾಂಧಿಯವರ ಆಲೋಚನೆಗಳು ಬಹಳ ಸ್ಪಷ್ಟವಾಗಿದ್ದವು. ಗ್ರಾಮಗಳು ತಮ್ಮ ಆಡಳಿತವನ್ನು ತಾವೇ ನೋಡಿಕೊಳ್ಳಬೇಕು, ರಾಜಕೀಯ ಅಧಿಕಾರವು ಗ್ರಾಮಗಳ ಕೈಯಲ್ಲೇ ಇರಬೇಕು, ಅವು ಆರ್ಥಿಕವಾಗಿ ಸ್ವತಂತ್ರವಾಗಿರಬೇಕು, ಅವು ಭಾರತದ ಪ್ರಜಾತಂತ್ರ ವ್ಯವಸ್ಥೆಯ ಅಡಿಪಾಯದಂತೆ ಕೆಲಸ ನಿರ್ವಹಿಸಬೇಕು ಎಂಬುದು ಅವರ ಆಲೋಚನೆಯಾಗಿತ್ತು. ಆದರೆ, ಕರ್ನಾಟಕದಾದ್ಯಂತ ಗ್ರಾಮ ಪಂಚಾಯಿತಿಗಳು ಹಣಕಾಸಿನ ಶಕ್ತಿಯಿಲ್ಲದೆ ಸೊರಗಿವೆ, ಇದೇ ಸ್ಥಿತಿಯಲ್ಲಿ ಅವು ಹೊಸವರ್ಷಕ್ಕೆ ಕಾಲಿರಿಸಿವೆ. 1993ರಲ್ಲಿ ಜಾರಿಗೆ ಬಂದ ಸಂವಿಧಾನದ 73ನೇ ತಿದ್ದುಪಡಿಯು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಾಂಸ್ಥಿಕಗೊಳಿಸಿತು, ಚುನಾಯಿತ ಗ್ರಾಮ ಪಂಚಾಯಿತಿಗಳಿಗೆ ಜವಾಬ್ದಾರಿ ಹೊರಿಸಿ, ಅವುಗಳಿಗೆ ಸಂಪನ್ಮೂಲ ಹಂಚಿಕೆ ಮಾಡಿ, ಅಧಿಕಾರದ ವಿಕೇಂದ್ರೀಕರಣವನ್ನು ಕಾರ್ಯರೂಪಕ್ಕೆ ತರುವ ಮೂಲಕ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಹೊಂದಿತ್ತು. ವಾಸ್ತವದಲ್ಲಿ ಈ ಆಲೋಚನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಕರ್ನಾಟಕವು ಒಂದು ಹೆಜ್ಜೆ ಮುಂದೆ ಇತ್ತು. 1983ರಲ್ಲಿ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕವು ಅಧಿಕಾರ ವಿಕೇಂದ್ರೀಕರಣದ ತಾತ್ವಿಕತೆಯನ್ನು ಒಪ್ಪಿಕೊಂಡಿತು; ಅಧಿಕಾರವು 'ಹಳ್ಳಿಯಿಂದ ದಿಲ್ಲಿಯ ಕಡೆ' ಹರಿಯುತ್ತದೆ ಎಂದು ಹೇಳಿತ್ತು, ಆದರೆ ಇಂದು ಅಧಿಕಾರದ ಹರಿವು ಬದಲಾಗಿದೆ. ಅದು ಈಗ 'ದಿಲ್ಲಿಯಿಂದ ಹಳ್ಳಿಗಳ ಕಡೆ' ಹರಿಯುತ್ತಿದೆ. ಕೇಂದ್ರ ಸರ್ಕಾರವು ಸಂಪನ್ಮೂಲದ ಹಂಚಿಕೆಯನ್ನು ನಿರ್ಧರಿಸುತ್ತಿದ್ದು, ಗ್ರಾಮ ಪಂಚಾಯಿತಿಗಳು ಅಸಹಾಯಕತೆಯಿಂದ ಕಾಯುತ್ತ ಕುಳಿತಿರುತ್ತವೆ.



ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಕೇಂದ್ರ ಹಣಕಾಸು ಆಯೋಗ ಅನುದಾನ ಬಿಡುಗಡೆ ಮಾಡಿಲ್ಲ. ಇದು, ಅಧಿಕಾರದ ವಿಕೇಂದ್ರೀಕರಣ ತತ್ತ್ವವನ್ನು ದುರ್ಬಲಗೊಳಿಸುವ ನಡೆ.

ಪ್ರಸಕ್ತ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ 15ನೇ ಹಣಕಾಸು ಆಯೋಗ ನೀಡಬೇಕಿದ್ದ ಹಣದಲ್ಲಿ ಒಂದು ರೂಪಾಯಿ ಕೂಡ ಕರ್ನಾಟಕದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಗೆ ಇನ್ನೂ ಬಂದಿಲ್ಲ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯ ಸಲ್ಲಿಕೆ ಸೇರಿದಂತೆ ಎಲ್ಲ ಷರತ್ತುಗಳನ್ನು ರಾಜ್ಯ ಸರ್ಕಾರವು ಪೂರೈಸಿದ್ದರೂ, ಬಾಕಿ ಇರುವ ₹2,100 ಕೋಟಿಯಲ್ಲಿ ಮೊದಲ ಕಂತಿನ ₹1,092 ಕೋಟಿ ಇನ್ನೂ ಬಿಡುಗಡೆ ಆಗಿಲ್ಲ. ಆದರೆ, ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳಕ್ಕೆ ಹಣ ಬಿಡುಗಡೆ ಆಗಿದೆ. ಇದು ತಾರತಮ್ಯದ ಅನುಮಾನವನ್ನು ಮೂಡಿಸುವಂತಿದೆ. ಅನುದಾನ ಬಿಡುಗಡೆ ಮಾಡದೆ ಇರುವುದರ ಪರಿಣಾಮಗಳು ತೀವ್ರವಾಗಿವೆ. ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಅಭಿವೃದ್ಧಿ ಯೋಜನೆಗಳು ಸ್ಥಗಿತಗೊಂಡಿವೆ, ಪಾವತಿಗಳು ಬಾಕಿ ಉಳಿದಿವೆ, ಕೆಲವು ಪಂಚಾಯಿತಿಗಳ ಮಟ್ಟದಲ್ಲಿ ಕುಡಿಯುವ ನೀರು ಪೂರೈಕೆಗೂ ಹಣದ ಕೊರತೆ ಉಂಟಾಗಿದೆ. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ವಿಲೀನದಿಂದ ಉಂಟಾಗಿರುವ ತಾಂತ್ರಿಕ ಅಡಚಣೆಗಳು ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವಂತೆ ಮಾಡಿವೆ, 800ಕ್ಕೂ ಹೆಚ್ಚು ಪಂಚಾಯಿತಿಗಳು ತಮ್ಮಲ್ಲಿರುವ ಹಣವನ್ನು ಪಡೆದುಕೊಳ್ಳಲೂ ಆಗುತ್ತಿಲ್ಲ, ಅಧಿಕಾರ ವ್ಯವಸ್ಥೆಯ ವೈಫಲ್ಯಕ್ಕೆ ಗ್ರಾಮವಾಸಿಗಳು ಬೆಲೆ ತೆರುತ್ತಿದ್ದಾರೆ.

ಹಣ ಬರಬೇಕಿರುವುದು ಕೇಂದ್ರದಿಂದ ಎಂಬ ಕಾರಣ ನೀಡಿ ರಾಜ್ಯ ಸರ್ಕಾರ ತನ್ನ ಹೆಗಲಿನಿಂದ ಜವಾಬ್ದಾರಿ ಇಳಿಸಿಕೊಳ್ಳಲು ಅವಕಾಶವಿಲ್ಲ. ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ 2022ರಿಂದ ಚುನಾವಣೆ ನಡೆದಿಲ್ಲ. ಗ್ರಾಮ ಪಂಚಾಯಿತಿಗಳ ಅವಧಿಯು ಕಳೆದ ಡಿಸೆಂಬರ್ ತಿಂಗಳಲ್ಲಿ ಕೊನೆಗೊಂಡಿದೆ. ಆಗ ಚುನಾಯಿತ ಸ್ಥಳೀಯ ಆಡಳಿತ ವ್ಯವಸ್ಥೆ ಇಲ್ಲ ಎಂದು ಅನುದಾನವನ್ನು ತಡೆಹಿಡಿಯಲು ಕೇಂದ್ರ ಸರ್ಕಾರಕ್ಕೆ ಕಾರಣವೊಂದು ದೊರೆತಂತಾಗುತ್ತದೆ. ಚುನಾಯಿತ ಪ್ರತಿನಿಧಿಗಳು ಇರುವ ಪಂಚಾಯಿತಿಗಳಿಗೆ ಮಾತ್ರವೇ ಅನುದಾನ ಬಿಡುಗಡೆ ಮಾಡಬೇಕು ಎಂಬ ನಿಯಮವನ್ನು ಹಣಕಾಸು ಆಯೋಗ ರೂಪಿಸಿದೆ. ರಾಜ್ಯದಲ್ಲಿ ಸರ್ಕಾರದ ಚುಕ್ಕಾಣಿ ಹಿಡಿದ ಬೇರೆ ಬೇರೆ ಪಕ್ಷಗಳ ನಾಯಕರು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಚುನಾವಣೆ ನಡೆಸುವುದನ್ನು ಉಪೇಕ್ಷೆ ಮಾಡಿದ್ದಾರೆ. ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬೇಕಿರುವ ಹಣದ ಕುರಿತು ತಾವೇ ನಿರ್ಧಾರ ಮಾಡುವಂತಹ ಸ್ಥಿತಿ ಇರಲಿ ಎಂದು ಶಾಸಕರು ಬಯಸುವುದು ಇದಕ್ಕೆ ಕಾರಣವಿರಬಹುದು. ಕೇಂದ್ರ ಸರ್ಕಾರವು ಅನುದಾನ ಬಿಡುಗಡೆ ಮಾಡದೆ ಇರುವುದು, ರಾಜ್ಯ ಸರ್ಕಾರವು ಸಕಾಲದಲ್ಲಿ ಚುನಾವಣೆ ನಡೆಸದೆ ಇರುವುದು ಸ್ಥಳೀಯ ಆಡಳಿತ ವ್ಯವಸ್ಥೆಯ ಅಡಿಪಾಯಕ್ಕೆ ಪೆಟ್ಟು ಕೊಟ್ಟಿದೆ. ಇಂದು ಪಂಚಾಯಿತಿಗಳು ಅಧಿಕಾರ, ಸಂಪನ್ಮೂಲ ಇಲ್ಲದೆ ಕಾಗದದ ಮೇಲಷ್ಟೇ ಉಳಿದಿವೆ. ಗ್ರಾಮಗಳಿಗೆ ಹಣ ಮತ್ತು ಅಧಿಕಾರವನ್ನು ನಿರಾಕರಿಸಿದಾಗ ಪ್ರಜಾತಂತ್ರ ವ್ಯವಸ್ಥೆ ದುರ್ಬಲವಾಗುತ್ತದೆ. ಗ್ರಾಮ ಸ್ವರಾಜ್ಯವು ಘೋಷಣೆಗಳನ್ನು ಆಧರಿಸಿ ಉಳಿಯುವುದಿಲ್ಲ; ಅದು ಉಳಿಯಬೇಕು ಎಂದಾದರೆ ಚುನಾವಣೆಗಳು ಸಕಾಲದಲ್ಲಿ ನಡೆಯಬೇಕು, ಅವುಗಳಿಗೆ ಕೊಡಬೇಕಿರುವ ಹಣವನ್ನು ಕೊಡಬೇಕು. ಇಲ್ಲದಿದ್ದರೆ ಸ್ಥಳೀಯ ಆಡಳಿತ ಎಂಬ ಸಾಂವಿಧಾನಿಕ ಆಶ್ವಾಸನೆಯನ್ನು ಉದ್ದೇಶಪೂರ್ವಕವಾಗಿ ಈಡೇರಿಸದಂತೆ ಆಗುತ್ತದೆ.

ವೆನೆಜುವೆಲಾ: ಮತ್ತೆ ಮತ್ತೆ ಗಾಯ!

ವಿಶ್ಲೇಷಣೆ

ವಸಂತ ಕಲಾಲ್

> ವೆನೆಜುವೆಲಾದ ಮೇಲಿನ ಅಮೆರಿಕದ ದಾಳಿ, ವಸಾಹತುಶಾಹಿ ಶಕ್ತಿ ಜಾಗೃತವಾಗಿರುವ ಸಂಕೇತ. ವೆನೆಜುವೆಲಾದ ಸ್ವಾಭಿಮಾನ ಹಾಗೂ ತೈಲ ನಿಕ್ಷೇಪಗಳು ಅಮೆರಿಕದ ಆಕ್ರಮಣಕ್ಕೆ ಕಾರಣವಾಗಿವೆ. ದೌರ್ಜನ್ಯಗಳ ಪರಂಪರೆಯನ್ನೇ ಎದುರಿಸಿರುವ ವೆನೆಜುವೆಲಾ, ಪ್ರಸಕ್ತ ಬಿಕ್ಕಟ್ಟನ್ನು ನಿಭಾಯಿಸಲು ಚರಿತ್ರೆಯ ಸ್ಮೃತಿಗಳಿಂದಲೇ ನೆರವು ಪಡೆಯಬಹುದು.

ದೇಶಗಳ ನಡುವಿನ ಶ್ರಮ ವಿಭಜನೆ ಎಂದರೆ– ಕೆಲವರು ಯಾವಾಗಲೂ ಗೆಲ್ಲುವಲ್ಲಿ ಶಕ್ತರಾಗಿರುವುದು, ಮತ್ತು ಇತರರು ಯಾವಾಗಲೂ ಸೋಲಲು ಮಾತ್ರ ಶಕ್ತರಾಗಿರುವುದು. ಎಡುವರ್ಡೊ ಗಲಿಯಾನೊ ತನ್ನ 'ಓಪನ್ ವೇನ್ಸ್ ಆಫ್ ಲ್ಯಾಟಿನ್ ಅಮೆರಿಕ' ಪುಸ್ತಕದಲ್ಲಿ ಯುರೋಪಿನ ವಸಾಹತುಶಾಹಿಯು ದಕ್ಷಿಣ ಅಮೆರಿಕದ ದೇಶಗಳನ್ನು ವ್ಯವಸ್ಥಿತವಾಗಿ ಅಧೀನದಲ್ಲಿ ಇರಿಸಿಕೊಂಡಿರುವುದು ಹೇಗೆ ಎನ್ನುವುದನ್ನು ವಿವರಿಸಲು ಬಳಸಿರುವ ವಿಶ್ಲೇಷಣೆಯಿದು. ಆತನ ಪ್ರಕಾರ, ದಕ್ಷಿಣ ಅಮೆರಿಕ ಬರೀ ವಸಾಹತುಶಾಹಿಯಿಂದ ದರೋಡೆಯಾದ ಭೂಖಂಡವಲ್ಲ; ಅದು ಮೀನಿನಂತೆ ಕತ್ತರಿಸಿ, ಒಣಗಿಸಿ, ಮಾರುಕಟ್ಟೆಯಲ್ಲಿ ನೇತು ಹಾಕಿದ ನಾಗರಿಕತೆ. ವರ್ತಮಾನದ ದಕ್ಷಿಣ ಅಮೆರಿಕದ ಅನಭಿವೃದ್ಧಿ, ರಾಜಕೀಯ ಅಸ್ಥಿರತೆ ಮತ್ತು ಪಟ್ಟಣಗಳ ಈ ವಸಾಹತುಶಾಹಿಯ ಬಲವಾಗಿ ಬೇರೂರಿವೆ.

ವಸಾಹತುಶಾಹಿ ಯುಗದ ನಂತರ ಬೆಳೆದ ಅಮೆರಿಕ ಸಾಮ್ರಾಜ್ಯಶಾಹಿಯು ಅದೇ ಮಾದರಿಯಲ್ಲಿಯೇ ರಾಜಕೀಯ ಪ್ರಯೋಗಗಳನ್ನು ಈ ದೇಶಗಳಲ್ಲಿ ನಡೆಸಿದೆ. ಈ ದೇಶಗಳ ಸಾರ್ವಭೌಮತ್ವವನ್ನು ತನ್ನ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗೆ ಅನುಗುಣವಾದಾಗ ಮಾತ್ರ ಅಮೆರಿಕ ಸಹಿಸಿದೆ. ಜನವರಿ 3ರ ಮುಂಜಾನೆ ವೆನೆಜುವೆಲಾದ ರಾಜಧಾನಿ ಕರಾಕಸ್‌ನಲ್ಲಿ ನಡೆದ ಅಮೆರಿಕದ ಸೈನ್ಯದ ದಾಳಿ ಈ ಸಾಮ್ರಾಜ್ಯಶಾಹಿ ಭಾಗವಾಗಿಯೇ ಸಂಭವಿಸಿದೆ. ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಆತನ ಸರ್ಕಾರವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ಅಧ್ಯಕ್ಷ ಮತ್ತು ಆತನ ಪತ್ನಿಯನ್ನು ಅಮೆರಿಕ ಸೈನ್ಯವು ವಶಕ್ಕೆ ಪಡೆದಿದೆ. ಈ ಘಟನೆ ದಕ್ಷಿಣ ಅಮೆರಿಕದ ಎಂದಿಗೂ ಮುಗಿಯದಂತಿರುವ ರಾಜಕೀಯ ಅಸ್ಥಿರತೆಯ ಹೊಸ ಅಧ್ಯಾಯವಾಗಿದೆ.

ಲ್ಯಾಟಿನ್ ಅಮೆರಿಕದ ಉತ್ತರದ ಭಾಗದಲ್ಲಿರುವ ವೆನೆಜುವೆಲಾ, 16ನೇ ಶತಮಾನದಲ್ಲಿ ಸ್ಪೇನ್ ಸಾಮ್ರಾಜ್ಯಕ್ಕೆ ವಶವಾಗಿ, ಆ ದೇಶದ ವಸಾಹತು ನೆಲೆಯಾಯಿತು. ಆ ಪ್ರದೇಶದ ಚಿನ್ನ, ಕೃಷಿ ಉತ್ಪನ್ನಗಳು ಮತ್ತು ಮಾನವ ಸಂಪನ್ಮೂಲಗಳು ವಸಾಹತು ಆರ್ಥಿಕತೆಯ ಆಧಾರವಾಗಿದ್ದವು. ಸ್ಥಳೀಯ ಮೂಲನಿವಾಸಿಗಳು ಮತ್ತು ಆಫ್ರಿಕಾದಿಂದ ಕರೆತಂದ ಗುಲಾಮರು ಈ ಶೋಷಣೆಯ ಬಲಿಪಶುಗಳು.

19ನೇ ಶತಮಾನ ಆರಂಭದಲ್ಲಿ, ಸ್ಪೇನ್ ವಿರುದ್ಧದ ಸ್ವಾತಂತ್ರ್ಯ ಹೋರಾಟ ದಕ್ಷಿಣ ಅಮೆರಿಕದಾದ್ಯಂತ ವ್ಯಾಪಿಸಿತು. ಸೀಮೊನ್ ಬೊಲಿವಾರ್ ನೇತೃತ್ವದಲ್ಲಿ 1811ರಲ್ಲಿ ವೆನೆಜುವೆಲಾ ಸ್ವಾತಂತ್ರ್ಯ ಘೋಷಿಸಿತು. ಆದರೆ, ರಾಜಕೀಯ ಸ್ವಾತಂತ್ರ್ಯವು ಆರ್ಥಿಕ ಸ್ವಾತಂತ್ರ್ಯವನ್ನೇನೂ ಖಚಿತಪಡಿಸಲಿಲ್ಲ. ವಸಾಹತುಶಾಹಿ ವ್ಯವಸ್ಥೆಯ ಅದೇ ಪಳೆಯುಳಿಕೆಯಲ್ಲಿ ಹೊಸ ವ್ಯವಸ್ಥೆ ರಚನೆಗೊಂಡಿತಷ್ಟೇ.

20ನೇ ಶತಮಾನದ ಆರಂಭದಲ್ಲಿ ತೈಲದ ಅನ್ವೇಷಣೆ ವೆನೆಜುವೆಲಾದ ಇತಿಹಾಸದಲ್ಲಿ ನಿರ್ಣಾಯಕ ತಿರುವು ತಂದಿತು. ತೈಲವು ದೇಶವನ್ನು ವೇಗವಾಗಿ ಜಾಗತಿಕ ಆರ್ಥಿಕತೆಯಲ್ಲಿ ಸೇರಿಸಿತು. ಆದರೆ, ಅದೇ ಸಮಯದಲ್ಲಿ ಬಹುರಾಷ್ಟ್ರೀಯ ತೈಲ ಕಂಪನಿಗಳು ಮತ್ತು ಅಮೆರಿಕದ ರಾಜಕೀಯ ಪ್ರಭಾವ ದೇಶದ ಆರ್ಥಿಕ ನೀತಿಗಳನ್ನು ನಿರ್ಧರಿಸತೊಡಗಿದವು.

1958ರಲ್ಲಿ ಮಿಲಿಟರಿ ಆಡಳಿತದಿಂದ ಪ್ರಜಾಪ್ರಭುತ್ವಕ್ಕೆ ಮರಳಿದರೂ, ಮುಂದಿನ ದಶಕಗಳಲ್ಲಿ ವೆನೆಜುವೆಲಾದ ರಾಜಕೀಯ ವ್ಯವಸ್ಥೆಯು ನವಉದಾರವಾದಿ ಆರ್ಥಿಕ ನೀತಿಗಳು, ಖಾಸಗೀಕರಣ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದಲ್ಲಿನ ಅಸಮಾನತೆ ಇನ್ನಷ್ಟು ತೀವ್ರಗೊಂಡಿತು. ಸಂಪೂರ್ಣ ತೈಲ ಕೈಗಾರಿಕೆಯ ಮೇಲೆ ಆರ್ಥಿಕತೆ ನಿಂತ ಪರಿಣಾಮ, ಅಂತರರಾಷ್ಟ್ರೀಯ ತೈಲಬೆಲೆಯ ಏರುಪೇರಿನಿಂದ ವೆನೆಜುವೆಲಾ ತತ್ತರಿಸಿತು. ಈ ಅಸಮಾಧಾನದ ನೆಲೆಯಲ್ಲಿಯೇ 1990ರ ದಶಕದಲ್ಲಿ ಬೊಲಿವೇರಿಯನ್ ಚಳವಳಿ ಉದಯಿಸಿತು. ಆ ಚಳವಳಿಯಿಂದ 1998ರಲ್ಲಿ ಹ್ಯೂಗೊ ಚಾವೆಜ್ ಅಧ್ಯಕ್ಷರಾಗಿ ಆಯ್ಕೆಯಾದರು. ಚಾವೆಜ್ ತೈಲ ರಾಷ್ಟ್ರೀಕರಣ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು ಮತ್ತು ಜನಪರ ಸಂವಿಧಾನಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದರು. ಇದರಿಂದ ಬಡ ಮತ್ತು ಅಂಚಿನ ಸಮುದಾಯಗಳಿಗೆ ಮೊದಲ ಬಾರಿ ರಾಜಕೀಯ ಪ್ರಾತಿನಿಧ್ಯ ದೊರೆಯಿತು.

ಚಾವೆಜ್ ನಂತರದ ಅವಧಿಯಲ್ಲಿ, ನಿಕೊಲಸ್ ಅಧ್ಯಕ್ಷರಾದ ನಂತರ, ವೆನೆಜುವೆಲಾ ತೀವ್ರ ಆರ್ಥಿಕ ಮತ್ತು ರಾಜಕೀಯ ಸಂಕಟಗಳನ್ನು ಎದುರಿಸಿತು. ತೈಲ ಬೆಲೆಯ ಕುಸಿತ, ಆಂತರಿಕ ಆಡಳಿತಾತ್ಮಕ ದೋಷಗಳು ಮತ್ತು ಅಮೆರಿಕದ ಆರ್ಥಿಕ ದಿಗ್ಬಂದನ ದೇಶವನ್ನು ಗಂಭೀರ ಬಿಕ್ಕಟ್ಟಿಗೆ ತಳ್ಳಿದವು.

ಹೊರಗಿನ ದಾಳಿಗಳನ್ನು ಎದುರಿಸುತ್ತಲೇ ಬಂದಿರುವ ವೆನೆಜುವೆಲಾದ ಹೋರಾಟವನ್ನು ಪ್ರಸ್ತುತ ಬರೀ ರಾಜಕೀಯ ವಿವಾದವಾಗಿ ನೋಡಲಾಗದು. ಇದು ವಸಾಹತುಶಾಹಿಯಿಂದ ಆರಂಭವಾಗಿ, ನವವಸಾಹತುಶಾಹಿ ರೂಪಗಳಲ್ಲಿ ಮುಂದುವರಿದ, ಮತ್ತು ಪ್ರತಿರೋಧದ ಮೂಲಕ ತನ್ನ ಸ್ವಾತಂತ್ರ್ಯವನ್ನು ಮರು ವ್ಯಾಖ್ಯಾನಿಸಿಕೊಂಡ ಸುದೀರ್ಘ ಇತಿಹಾಸದ ಪ್ರಮುಖ ಅಧ್ಯಾಯವಾಗಿದೆ.

ಜಗತ್ತಿನಲ್ಲೇ ಅತಿಹೆಚ್ಚು ತೈಲ ಸಂಪನ್ಮೂಲಗಳನ್ನು ಹೊಂದಿರುವ ದೇಶ ವೆನೆಜುವೆಲಾ. ಆ ಸಂಪನ್ಮೂಲಗಳನ್ನು ವಶಕ್ಕೆ ತೆಗೆದುಕೊಳ್ಳಬೇಕೆನ್ನುವ ಅಮೆರಿಕದ ಪ್ರಯತ್ನಕ್ಕೆ ಅಲ್ಲಿನ ಎಡಪಂಥೀಯ ಸರ್ಕಾರ ಸಡ್ಡು ಹೊಡೆದಿದೆ. ಇದರ ಪರಿಣಾಮವಾಗಿಯೇ, ಅಮೆರಿಕದ ಆರ್ಥಿಕ ನಿರ್ಬಂಧಗಳು, ರಾಜತಾಂತ್ರಿಕ ಸಮಸ್ಯೆಗಳ ಸೃಷ್ಟಿ, ಸೈಬರ್ ಯುದ್ಧ ಮತ್ತು ಸರ್ಕಾರ ಉರುಳಿಸುವ ಪ್ರಯತ್ನಗಳಿಂದ ನಿರಂತರ ದಾಳಿಗೆ ಒಳಗಾಗಿದೆ. ಸ್ವತಂತ್ರ ರಾಜಕೀಯ ಶಕ್ತಿಯಾಗಿ ವೆನೆಜುವೆಲಾ ಬೆಳೆದುದನ್ನು ಅಮೆರಿಕ ಸಹಜವಾಗಿಯೇ ಸಹಿಸಲಿಲ್ಲ.

ಅಮೆರಿಕಗೆ, ದಕ್ಷಿಣ ಅಮೆರಿಕ ಕಚ್ಚಾ ವಸ್ತುಗಳು ಮತ್ತು ಅಗ್ಗದ ಕಾರ್ಮಿಕರನ್ನು ಒದಗಿಸುವ ಮೂಲವೂ ಹೌದು. ಈ ಕಾರಣದಿಂದಾಗಿ, 18ನೇ ಶತಮಾನದ ಆರಂಭದಲ್ಲಿ ಅಮೆರಿಕ, ಮನ್ರೋ ಡಾಕ್ಟರೀನ್ ಮೂಲಕ ಲ್ಯಾಟಿನ್ ಅಮೆರಿಕದ ಮೇಲೆ ಯುರೋಪಿನ ಹಸ್ತಕ್ಷೇಪವನ್ನು ವಿರೋಧಿಸಿ ತನ್ನ ಸಾಮ್ರಾಜ್ಯಶಾಹಿ ನೀತಿಗೆ ನಾಂದಿ ಹಾಡಿತು. 'ದಕ್ಷಿಣ ಅಮೆರಿಕ ಅಮೆರಿಕದ ಹಿತ್ತಲು, ಅದರ ಹಿತವನ್ನು ಅಮೆರಿಕ ಕಾಯುತ್ತಿದೆ' ಎಂದು ತನ್ನ ರಾಜಕೀಯ ಹಸ್ತಕ್ಷೇಪಕ್ಕೆ ಸಮರ್ಥನೆ ನೀಡಿತು. ಪ್ರಸ್ತುತ, ಈ 'ಹಿತ್ತಲಿನ' ಮೇಲೆ ಅದರ ಹಿಡಿತ ತಪ್ಪುತ್ತಿರುವ ಹೊತ್ತಿನಲ್ಲಿ ದಕ್ಷಿಣ ಅಮೆರಿಕಗೆ ಅನ್ವಯಿಸಿದಂತೆ ಎರಡು ಮಹತ್ವದ ಗುರಿಗಳನ್ನು ಅಮೆರಿಕ ಹೊಂದಿದೆ.

ಮೊದಲನೆಯದು, ಸಮಾಜವಾದ, ಪ್ರಾದೇಶಿಕ ಒಗ್ಗಟ್ಟು ಮತ್ತು ಚೀನಾ–ರಷ್ಯಾ ಮುಂತಾದ ಪ್ರತಿಸ್ಪರ್ಧಿ ದೇಶಗಳ ಜೊತೆ ಸಹಕಾರವನ್ನು ಉತ್ತೇಜಿಸುವ ಸ್ವತಂತ್ರ–ಎಡಪಂಥೀಯ ಸರ್ಕಾರಗಳನ್ನು ತಡೆಯುವುದು. ಎರಡನೆಯದು, ಅಮೆರಿಕದ ಹಿತಾಸಕ್ತಿಗಳಿಗೆ ಅನುಗುಣವಾಗಿ ಕೈಗೊಂಬೆ ಸರ್ಕಾರಗಳನ್ನು ರಚಿಸಿ, ಆರ್ಥಿಕವಾಗಿ ಅವಲಂಬನೆ ಸೃಷ್ಟಿಸುವುದು.

ವೆನೆಜುವೆಲಾ ತನ್ನ ತೈಲ ಸಂಪನ್ಮೂಲಗಳನ್ನು ರಾಷ್ಟ್ರೀಕರಣ ಮಾಡಿದಾಗ ಅಥವಾ ಬೊಲಿವಿಯಾ ಭವಿಷ್ಯದ ಇಂಧನ ಮಾರುಕಟ್ಟೆಗಳಿಗೆ ಅತ್ಯಂತ ಪ್ರಮುಖವಾದ ಲಿಥಿಯಂ ಮೇಲಿನ ನಿಯಂತ್ರಣವನ್ನು ಮರಳಿ ಪಡೆದಾಗ ಅಮೆರಿಕದ ಜಾಗತಿಕ ಆರ್ಥಿಕ ಯೋಜನೆಗೆ ಕುತ್ತು ಬಂತು. ದಕ್ಷಿಣ ಅಮೆರಿಕ ದೇಶಗಳಲ್ಲಿ ವ್ಯಾಪಾರ, ತಂತ್ರಜ್ಞಾನ ಹಾಗೂ ಮೂಲಸೌಕರ್ಯ ಹೂಡಿಕೆಗಳ ಮೂಲಕ ಚೀನಾದ ಪ್ರಭಾವವು ಹೆಚ್ಚುತ್ತಿದೆ. ಪ್ರಾದೇಶಿಕ ಸಂಘಟನೆಗಳ ಮೂಲಕ ಒಗ್ಗಟ್ಟನ್ನು ಬಲಪಡಿಸುವ ಮತ್ತು ನವಉದಾರವಾದಿ ಆರ್ಥಿಕ ಯೋಜನೆಯನ್ನು ತಿರಸ್ಕರಿಸುವ ಕಾರ್ಯಕ್ರಮಗಳಿಗೆ ದಕ್ಷಿಣ ಅಮೆರಿಕದ ಹಲವು ದೇಶಗಳು ಅಣಿಯಾಗಿವೆ. ವೆನೆಜುವೆಲಾ ಆರ್ಥಿಕ ಸಂಕಷ್ಟಗಳ ನಡುವೆಯೂ ಚೀನಾ, ರಷ್ಯಾ, ಇರಾನ್ ಮುಂತಾದ ದೇಶಗಳೊಂದಿಗೆ ಸಹಕಾರ ಬೆಳೆಸುವಲ್ಲಿ ಯಶಸ್ವಿಯಾಗಿದೆ ಮತ್ತು ಅಮೆರಿಕದ ಪ್ರಾಬಲ್ಯದ ವಿರುದ್ಧ ಲ್ಯಾಟಿನ್ ಅಮೆರಿಕದ ದೇಶಗಳ ನಡುವೆ ಹೊಸ ಒಗ್ಗಟ್ಟಿನ ಹೋರಾಟಕ್ಕೆ ಕರೆ ನೀಡಿದೆ. ದಕ್ಷಿಣ ಅಮೆರಿಕ ದೇಶಗಳ ಒಗ್ಗಟ್ಟು ಮತ್ತು ಆರ್ಥಿಕ ಸ್ವಾವಲಂಬನೆ ಇಂದಿನ ಬಹುಧ್ರುವೀಕರಣದ ಜಗತ್ತಿನಲ್ಲಿ ನಿರ್ಣಾಯಕ ಪಾತ್ರವಹಿಸಿ, ತನ್ನ ಶತಮಾನಗಳ ಪ್ರಾಬಲ್ಯಕ್ಕೆ ಸವಾಲು ಎಸೆಯಬಹುದು ಎಂಬ ಭಯ ಅಮೆರಿಕಗೆ ಇದೆ. ಆ ಆತಂಕ, ವೆನೆಜುವೆಲಾ ಮೇಲೆ ನಡೆಸಿದ ದಾಳಿಯಿಂದ ಸ್ಪಷ್ಟವಾಗುತ್ತದೆ.

ಅಮೆರಿಕದ ವಿರುದ್ಧ ಲ್ಯಾಟಿನ್ ಅಮೆರಿಕದ ಪ್ರತಿರೋಧವನ್ನು ಅದರ ಜನಮಾನಸದಿಂದ ಬೇರ್ಪಡಿಸಲು ಅಸಾಧ್ಯ. ವಸಾಹತು ಆಕ್ರಮಣ, ಶೀತಲಯುದ್ಧದಿಂದ ಹಿಡಿದು ಈ ಪ್ರದೇಶವು 'ಪ್ರಜಾಪ್ರಭುತ್ವ' ಎಂಬ ಹೆಸರಿನಲ್ಲಿ ಪಾಶ್ಚಿಮಾತ್ಯ ಜಗತ್ತಿನ ಅಧೀನಕ್ಕೆ ಒಳಗಾಗಿದೆ. ದಮನ ಪರಂಪರೆಯ ಸಾಮೂಹಿಕ ನೆನಪುಗಳಿಂದಲೇ ಅದರ ಸಾಹಿತ್ಯ, ಸಂಗೀತ, ಮತ್ತು ಜನಚಳವಳಿಗಳಲ್ಲಿ ಪ್ರತಿರೋಧದ ಸಂಸ್ಕೃತಿ ರೂಪುಗೊಂಡಿದೆ.

ವೆನೆಜುವೆಲಾ ಪ್ರಭುತ್ವ ಮತ್ತು ನಾಯಕತ್ವದ ಗಂಭೀರವಾದ ತಪ್ಪುಗಳನ್ನೂ ಅಲ್ಲಿನ ಜನಸಮುದಾಯ ಎಂದೂ ಮನ್ನಿಸಿಲ್ಲ; ಅಗತ್ಯ ಬಿದ್ದಾಗ ಪ್ರಭುತ್ವಗಳನ್ನೇ ಬದಲಾಯಿಸಿದೆ. ಅದೇ ರೀತಿ ಅವರು ದೇಶದ ಸಾರ್ವಭೌಮತ್ವದ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿ, ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಸೆರೆಗೆ ತಳ್ಳಿರುವ ಘಟನೆಯನ್ನು ಸಹಿಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗದು.

ಗಲಿನೋ ಹೇಳಿದಂತೆ, 'ಲ್ಯಾಟಿನ್ ಅಮೆರಿಕದ ನರನಾಡಿಗಳು ತೆರೆದೆ ಇರುತ್ತವೆ'. ಏಕೆಂದರೆ, ಸಾಮ್ರಾಜ್ಯಶಾಹಿಯ ರಕ್ತದ ದಾಹಕ್ಕೆ ಅವು ಮುಕ್ತವಾಗಿರಬೇಕು. ಅವುಗಳನ್ನು ಮುಚ್ಚಲು ಯಾರಾದರೂ ಯತ್ನಿಸಿದರೆ, ಅವರು ಅಪಾಯಕ್ಕೆ ಸಿಲುಕಲಿದ್ದಾರೆ ಎನ್ನುವುದಕ್ಕೆ ಇತಿಹಾಸದಲ್ಲಿ ನಿದರ್ಶನಗಳಿವೆ.

ಲೇಖಕ: ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿ.

ವಾಚಕರ ವಾಣಿ

'ಶಾಸ್ತ್ರ'ಕ್ಕಿಂತ ವೈಜ್ಞಾನಿಕ ಪದ ಬಳಕೆ ಸೂಕ್ತ

'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು; ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?' ಎಂದು ಹೇಳಿದ್ದಾರೆ ಕುವೆಂಪು. ಆಧುನಿಕಯುಗದಲ್ಲಿ ಯುವಜನರು ಸೇರಿದಂತೆ ನಾಗರಿಕ ಸಮಾಜವು ಮನುಷ್ಯಸಹಜ ಸಂವೇದನಾಶೀಲತೆ, ಮಾನವೀಯ ಮೌಲ್ಯ ಮತ್ತು ವೈಜ್ಞಾನಿಕ ವಿಚಾರಧಾರೆಗಳತ್ತ ಒಲವು ಬೆಳೆಸಿಕೊಳ್ಳಬೇಕು. ಆದರೆ, ಮೌಢ್ಯ ತುಂಬಿದ ಶಾಸ್ತ್ರಗಳಾಚರಣೆಯಲ್ಲಿ ಮುಳುಗಿ, ಬದುಕನ್ನು ಕಂದಾಚಾರ ಮತ್ತು ಬರಡು ಜಟಿಲತೆಯ ಪೇಲವ ಬಾಳ್ವೆಯಂತಾಗಲು ಮುಂದಡಿಯಿಡುತ್ತಿರುವುದು ದುರದೃಷ್ಟಕರ. 'ಶಾಸ್ತ್ರ'ದ ಹೆಸರಿನಲ್ಲಿ ಮುಗ್ಧ ಜನತೆಯನ್ನು ಮೌಢ್ಯದ ಕೂಪಕ್ಕೆ ತಳ್ಳುವುದು ಹೆಚ್ಚುತ್ತಿದೆ. ಈ ದಿಸೆಯಲ್ಲಿ ಶಾಲಾಪಠ್ಯದಲ್ಲಿ ಬಳಕೆಯಲ್ಲಿರುವ 'ಶಾಸ್ತ್ರ' ಪದವನ್ನು ಸೂಕ್ತ ವೈಜ್ಞಾನಿಕ ಪದಗಳಿಂದ ಬಣ್ಣಿಸಿದರೆ ಉತ್ತಮವೆನಿಸುತ್ತದೆ.

ಚಂದ್ರಪ್ಪ ಎಚ್., ವಿಜಯನಗರ

ಭಾಗವತರ ಹೇಳಿಕೆ: ಸ್ಪಷ್ಟತೆಯದ್ದೇ ಕೊರತೆ

ಆರ್‌ಎಸ್‌ಎಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು. ಸಂಘವು ಪಕ್ಷದ ವಿಶ್ವವಿದ್ಯಾಲಯದಂತೆ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿ ತೇರ್ಗಡೆಗೊಂಡವರನ್ನು ಪಕ್ಷದ ಚಟುವಟಿಕೆಗಳಿಗೆ ವರ್ಗಾಯಿಸುತ್ತದೆ ಎಂಬುದು ಜನಜನಿತ. ಹೀಗಿದ್ದರೂ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್, 'ಬಿಜೆಪಿಯನ್ನು ನೋಡಿ ಸಂಘವನ್ನು ಅರ್ಥಮಾಡಿಕೊಳ್ಳಲು ಬಯಸಿದರೆ ತಪ್ಪು ಮಾಡಿದಂತೆ' ಎಂದು ಹೇಳಿರುವುದು ಹಾಸ್ಯಾಸ್ಪದ. ಇದು ಜನರನ್ನು ಮರುಳು ಮಾಡುವ ಪ್ರಯತ್ನವಷ್ಟೆ. ಭಾರತವು ಬಲಿಷ್ಠ ಸೇನೆ ಹೊಂದಿದೆ ಮತ್ತು ಕೇಂದ್ರದಲ್ಲಿ ಎನ್‌ಡಿಎ ನೇತೃತ್ವದ ಸರ್ಕಾರವಿದೆ. ಆದರೂ ಭಾಗವತರು, 'ಭಾರತವು ಮತ್ತೆ ವಿದೇಶಿ ಶಕ್ತಿಯ ಹಿಡಿತಕ್ಕೆ ಬೀಳದಂತೆ ಸಂಘ ರಕ್ಷಿಸುತ್ತದೆ' ಎಂದಿರುವುದು ಗೊಂದಲ ಸೃಷ್ಟಿಸುತ್ತದೆ. ಸಮಾಜವನ್ನು ಒಗ್ಗೂಡಿಸುವ ಹೊಣೆ ಹೊತ್ತಿರುವ ಅವರು ಸ್ಪಷ್ಟತೆ ಕಾಯ್ದುಕೊಳ್ಳದಿದ್ದರೆ ಹೇಗೆ?

ಶಾಂತಕುಮಾರ್, ಸರ್ಜಾಪುರ

ವಾಲ್ಮೀಕಿ ಆದರ್ಶ ಮತ್ತೆ ಮಣ್ಣುಪಾಲು

ಬಳ್ಳಾರಿ ರಾಜಕೀಯವು ಅಲ್ಲಿನ ಬಿಸಿಲಿನಷ್ಟೇ ಪ್ರಖರವಾದುದು. ಅಲ್ಲಿನ ರಾಜಕೀಯದ ಸನ್ನಿವೇಶಗಳು ಸಿನಿಮೀಯ ಶೈಲಿಯ ಪೋಷಾಕು ತೊಡುವುದು ಮಾಮೂಲು. ಇದು ವಿಚಿತ್ರ ಎನಿಸಿದರೂ ಸತ್ಯ. ಬಳ್ಳಾರಿ ರಾಜಕೀಯಕ್ಕೆ ಮಹರ್ಷಿ ವಾಲ್ಮೀಕಿ ಹೆಸರು ಒಂದಿಲ್ಲೊಂದು ರೀತಿಯಲ್ಲಿ ಬೆಸೆದುಕೊಳ್ಳುತ್ತಿರುವುದು ವಿಪರ್ಯಾಸ. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣದಿಂದ ಸಚಿವರಾಗಿದ್ದ ಬಿ. ನಾಗೇಂದ್ರ ತಮ್ಮ ಪದವಿಗೆ ರಾಜೀನಾಮೆ ನೀಡುವಂತಾಯಿತು. ಈಗ ವಾಲ್ಮೀಕಿ ಪುತ್ಥಳಿ ಅನಾವರಣ ಕಾರ್ಯಕ್ರಮದ ಬ್ಯಾನರ್ ಕಟ್ಟುವ ವಿಚಾರವು ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದೆ. ಜಗತ್ತಿಗೆ ಧರ್ಮದ ಮೌಲ್ಯ, ನೈತಿಕತೆಯ ಮಹತ್ವ ಸಾರಿದ ವಾಲ್ಮೀಕಿ ಹೆಸರು ರಾಜಕೀಯ ವೈಷಮ್ಯಕ್ಕೆ ಬಳಕೆಯಾಗುತ್ತಿರುವುದು ವಿಷಾದದ ಸಂಗತಿ.

ಧನ್ವಂತರಿ ಮಾನ್ವಿ, ಬಳ್ಳಾರಿ

ದಿನಪತ್ರಿಕೆಗಳಿಂದ ರಾಷ್ಟ್ರೀಯ ಪ್ರಜ್ಞೆ ಸಾಧ್ಯ

ಶಾಲೆಗಳಲ್ಲಿ ದಿನಪತ್ರಿಕೆ ಓದುವುದರಿಂದ ವಿದ್ಯಾರ್ಥಿಗಳಿಗೆ ಪ್ರಾಪಂಚಿಕ ಅರಿವು, ಅರ್ಥಪೂರ್ಣ ವಿಚಾರ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ರಾಷ್ಟ್ರೀಯ ಪ್ರಜ್ಞೆ ಕುರಿತು ಮಾಹಿತಿ ದೊರೆಯುತ್ತದೆ. ಪಠ್ಯಪುಸ್ತಕದ ಅಧ್ಯಯನ ಬರೀ ಅಂಕಗಳಿಗೆ ಸೀಮಿತ. ಮಕ್ಕಳಿಂದ ದಿನಪತ್ರಿಕೆ ಓದಿಸುವುದರಿಂದ ಅವರು ಜೀವನದ ಪಾಠ ಕಲಿಯುತ್ತಾರೆ. ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗುವುದರಲ್ಲಿ ಸಂದೇಹವೇ ಇಲ್ಲ. ಕೆಲವು ಶಾಲೆಗಳಲ್ಲಿ ಈ ಕಾರ್ಯ ನಡೆಯುತ್ತಿದೆ. ರಾಜ್ಯದ ಎಲ್ಲಾ ಶಾಲೆಗಳಲ್ಲಿ ದಿನಪತ್ರಿಕೆ ಓದಿಸುವ ಬಗ್ಗೆ ಶಿಕ್ಷಣ ಇಲಾಖೆಯು ಗಂಭೀರ ಚಿಂತನೆ ನಡೆಸಲಿ.

ಎಚ್.ಎಸ್.ಟಿ. ಸ್ವಾಮಿ, ಚಿತ್ರದುರ್ಗ

ತರಬೇತಿ ವಿಳಂಬ: ವಿದ್ಯಾರ್ಥಿಗಳು ಅತಂತ್ರ

ಸಮಾಜ ಕಲ್ಯಾಣ ಇಲಾಖೆ ಮತ್ತು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಯುಪಿಎಸ್‌ಸಿ, ಕೆಪಿಎಸ್‌ಸಿ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿ ನೀಡಲಾಗುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕಳೆದ ವರ್ಷದ ಮೇ 30ರಂದು ಕಲ್ಯಾಣ ಕರ್ನಾಟಕದ ಸ್ಪರ್ಧಾರ್ಥಿಗಳಿಗೆ ತರಬೇತಿಗಾಗಿ ಪರೀಕ್ಷೆ ನಡೆಸಿದೆ. ಫಲಿತಾಂಶ ಪ್ರಕಟಿಸಿದ ಬಳಿಕ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆಯೂ ನಡೆದಿದೆ. ಕೆಲವು ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಶುಲ್ಕವಾಗಿ ₹750 ಸಂದಾಯ ಮಾಡಿದ್ದಾರೆ. ಇದಕ್ಕೆ ಇಲಾಖೆಯಿಂದ ವಿನಾಯಿತಿ ನೀಡಿದರೂ ಅಭ್ಯರ್ಥಿಗಳಿಗೆ ಕೆಇಎ ಹಣ ಹಿಂದಿರುಗಿಸಿಲ್ಲ. ಮತ್ತೊಂದೆಡೆ ಇಂದಿಗೂ ತರಬೇತಿಯನ್ನು ಆರಂಭಿಸಿಲ್ಲ.

ಸಂಜಯ್ ಪಟ್ಟಣಶೆಟ್ಟಿ, ಕುರುಗೋಡು

ಒಪಿಎಸ್ ಮರುಜಾರಿ: ವಿಳಂಬ ಆಗದಿರಲಿ

ತಮಿಳುನಾಡು ಸರ್ಕಾರವು ಹೊಸ ಪಿಂಚಣಿ ಯೋಜನೆ ಜಾರಿಗೊಳಿಸಿರುವ ಸುದ್ದಿ ಓದಿ ಸಂತಸವಾಯಿತು. ಕರ್ನಾಟಕದಲ್ಲಿ 2006ರ ಏಪ್ರಿಲ್ 1ರಿಂದ ಹಳೆಯ ಪಿಂಚಣಿ ಯೋಜನೆಯನ್ನು ಹಿಂಪಡೆದು ಎನ್‌ಪಿಎಸ್ ಜಾರಿಗೊಳಿಸಲಾಗಿದೆ. ಈ ಯೋಜನೆಯು ಸರ್ಕಾರಿ ನೌಕರರ ನಿವೃತ್ತ ಜೀವನಕ್ಕೆ ಅಷ್ಟೊಂದು ಉಪಕಾರಿ ಆಗಿಲ್ಲ. ಅಧಿಕಾರಕ್ಕೆ ಬಂದರೆ ಒಪಿಎಸ್ ಮರುಜಾರಿಗೊಳಿಸುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪ್ರಕಟಿಸಿತ್ತು. ಒಪಿಎಸ್ ಮರುಜಾರಿ ಸಂಬಂಧ ಸರ್ಕಾರ ಸಮಿತಿ ರಚಿಸಿದೆ. ಈ ಸಮಿತಿಯು ವರದಿ ಸಲ್ಲಿಸಬೇಕಿದೆ. ಇದನ್ನು ಕೂಲಂಕಷವಾಗಿ ಪರಾಮರ್ಶಿಸಿ ವಿಳಂಬ ಮಾಡದೆ ಜಾರಿಗೊಳಿಸಬೇಕಿದೆ.

ಚಂದ್ರಶೇಖರ ಇಟಗಿ, ಮುದ್ದೇಬಿಹಾಳ

ಜಾಲತಾಣ

ಗುಲಾಮಗಿರಿಯ ಕೇಡು

ಬಲಿಷ್ಠರ ಗುಲಾಮಗಿರಿಯನ್ನು ಮಾಡುವ ಯಾವುದೇ ನಾಡು, ಬಲಿಷ್ಠ ಮಾಡುವ ಎಲ್ಲ ಕೇಡುಗಳ ಪಾಪದ ಹೊಣೆಯನ್ನು ಹೊರಬೇಕಾಗುತ್ತದೆ. ಮಾತ್ರವಲ್ಲ, ಒಂದು ದಿನ ತಾನೂ ಬಲಿಪಶು ಆಗುತ್ತದೆ.

ರಹಮತ್ ತರೀಕೆರೆ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಮೊದಲು ಪಂಚಾಯಿತಿ ಮಟ್ಟದಲ್ಲಿ ಅಧಿಕಾರ ಇತ್ತು. ಈಗ ದೆಹಲಿಯಲ್ಲಿ ಅಧಿಕಾರ ಕೇಂದ್ರೀಕೃತವಾಗಿದೆ. ನರೇಗಾ ಸ್ವರೂಪವನ್ನು ಬದಲಾಯಿಸಿ ವಿಬಿ–ಜಿ ರಾಮ್ ಜಿ ಎಂದು ನಾಮಕರಣ ಮಾಡಿರುವುದು ಬಡವರ ವಿರೋಧಿ ಕ್ರಮ.

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 5-1-2001

• ಉತ್ತರ ಭಾರತ: ಚಳಿಗೆ 23 ಸಾವು

ನವದೆಹಲಿ, ಜ. 4 (ಪಿಟಿಐ)– ಚಳಿ ತಡೆಯಲಾಗದೆ ಉತ್ತರ ಪ್ರದೇಶದಲ್ಲಿ 23 ಮಂದಿ ಮೃತಪಟ್ಟಿದ್ದಾರೆ.

ಬರೇಲಿಯಲ್ಲಿ ಏಳು, ಆಗ್ರಾ ಮತ್ತು ಅಂಬೇಡ್ಕರ್ ನಗರದಲ್ಲಿ ತಲಾ ಐವರು, ಬಲ್ಲಿಯಾದಲ್ಲಿ ಮೂವರು, ಸಿದ್ಧಾರ್ಥನಗರದಲ್ಲಿ ಇಬ್ಬರು ಹಾಗೂ ಮೊರದಾಬಾದ್‌ನಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಈ ಪ್ರದೇಶಗಳಲ್ಲಿ ಉಷ್ಣಾಂಶ ಕುಸಿದಿತ್ತು. ಉತ್ತರಪ್ರದೇಶದ ಕೆಲವು ಪಟ್ಟಣಗಳಲ್ಲಿ ದಟ್ಟ ಮಂಜಿನಿಂದಾಗಿ ರಸ್ತೆ ಸಂಚಾರಕ್ಕೆ ಅಡ್ಡಿಯಾಗಿದೆ. ಈ ಪರಿಸ್ಥಿತಿ ಇನ್ನೂ 2 ದಿನ ಹೀಗೇ ಇರುವ ಸಂಭವವಿದೆ.

• ಹಗುರ ಯುದ್ಧ ವಿಮಾನ ಹಾರಾಟ ಯಶಸ್ವಿ ಪ್ರಯೋಗ

ಬೆಂಗಳೂರು, ಜ. 4– ದೇಶದ ಮೊಟ್ಟಮೊದಲ ಅತ್ಯಾಧುನಿಕ ಮತ್ತು ಶರವೇಗದ ಹಗುರ ಯುದ್ಧ ವಿಮಾನದ ಪರೀಕ್ಷಾರ್ಥ ಹಾರಾಟ ಇಂದು ಬೆಳಿಗ್ಗೆ ನಗರದ ವಿಮಾನ ನಿಲ್ದಾಣದಲ್ಲಿ ಯಶಸ್ವಿಯಾಗಿ ನಡೆಯಿತು.

ಕೇಂದ್ರ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರ ಸಮ್ಮುಖದಲ್ಲಿ ಈ ಮಹತ್ವದ ಪ್ರಯೋಗಾರ್ಥ ಹಾರಾಟ ನಡೆಯಿತು. 1983ರಲ್ಲಿ ರೂಪುಗೊಂಡ ಎಲ್‌ಸಿಎ ತಯಾರಿಕೆ ಯೋಜನೆ ಕಾರ್ಯಾರಂಭವಾಗಿದ್ದು, 1993ರಲ್ಲಿ.

75 ವರ್ಷಗಳ ಹಿಂದೆ

ಶುಕ್ರವಾರ, 5-1-1951

• ಆಮದು ಹತೋಟಿ ವಿಚಾರಣಾ ಸಮಿತಿಯ ಸೂಚನೆ ಅಂಗೀಕೃತ

ದೆಹಲಿ, ಜ. 4– ಆಮದು ಹತೋಟಿ ವಿಚಾರಣಾ ಸಮಿತಿಯವರು ಕಳೆದ ಅಕ್ಟೋಬರ್‌ನಲ್ಲಿ ಸಲ್ಲಿಸಿದ ವರದಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗಳಲ್ಲಿ ಬಹುಭಾಗವನ್ನು ಭಾರತ ಸರ್ಕಾರ ಅಂಗೀಕರಿಸಿರುವುದಾಗಿ ಕೇಂದ್ರ ಸರ್ಕಾರದಿಂದ ಅಂಗೀಕೃತವಾದ ನಿರ್ಣಯವೊಂದು ತಿಳಿಸುತ್ತದೆ.

ಹೀಗೆ ಅಂಗೀಕರಿಸಲಾಗಿರುವ ಸೂಚನೆಗಳಲ್ಲಿ ಕೆಲವನ್ನು 1950ರ ಜನವರಿ 1ರಿಂದಲೂ ಮತ್ತೆ ಕೆಲವನ್ನು ಜುಲೈ 1ರಿಂದಲೂ ಕಾರ್ಯಗತ ಮಾಡಲಾಗುವುದು.

ಯೋಜನಾ ಪಂಚಾಯಿತಿಯ ಸದಸ್ಯ ಜಿ.ಎಲ್. ಮೆಹತಾರ ಅಧ್ಯಕ್ಷತೆಯಲ್ಲಿ ಕಳೆದ ಜುಲೈ ತಿಂಗಳಲ್ಲಿ ನೇಮಿತವಾದ ಈ ಸಮಿತಿಯಲ್ಲಿ ತುಳಸೀದಾಸ್ ಕಿಲಾಚಂದ್ ಮತ್ತು ಡಿ.ಎಲ್. ಮಜೂಂದಾರ್ ಸದಸ್ಯರಾಗಿದ್ದರು.

ಚುರುಮುರಿ

ಮನುಷ್ಯತ್ವದ ಸಂಕಲ್ಪ

• ಸುಮಂಗಲಾ

'ತಿರುಪತಿಯ ದೇವಸ್ಥಾನಗಳಲ್ಲಿ ದೇವರ ದರ್ಶನಕ್ಕೆ ಭಕ್ತರು ತಾಸುಗಟ್ಟಲೆ ಕಾಯುತ್ತಾರೆ... ಅಷ್ಟೆಲ್ಲ ಭದ್ರತೆ ಇರತೈತಿ... ಅಂತಾದ್ರಾಗೆ ಈ ಕುಡುಕ ಅದ್ಹೆಂಗೆ ಎಲ್ಲರ ಕಣ್ಣಿಗೆ ಮಣ್ಣೆರಚಿ ಗೋವಿಂದರಾಯ ದೇವಾಲಯದ ಗೋಪುರ ಏರಿದ!' ಬೆಕ್ಕಣ್ಣ ಸುದ್ದಿ ಓದುತ್ತ ಉದ್ಗರಿಸಿತು.

'ಕುಡಿದ ಮತ್ತಿನಲ್ಲಿಯೂ ಅಂವಾ ಕಾಲು ಜಾರದೇ ಅಷ್ಟೆತ್ತರದ ಗೋಪುರ ಏರ್ಯಾನೆ ಅಂದರೆ ಅದವನ ಹೊಸ ವರ್ಷದ ಸಂಕಲ್ಪ ಆಗಿರಬಕು' ಎಂದು ನಾನು ನಕ್ಕೆ.

'ಕಳ್ಳತನದಿಂದ ಗೋಪುರ ಏರಿದರೂ, ಕುಡುಕನೇ ಆದರೂ, ನನ್ನ ಭಕ್ತನೇ ತಾನೆ, ಅವನ ರಕ್ಷಣೆ ಮಾಡಣ ಅಂತ ಪಾಪದ ದೇವರೂ ಸಂಕಲ್ಪ ಮಾಡಿರಬಕು' ಎನ್ನುತ್ತ ಬೆಕ್ಕಣ್ಣ ಮುಸಿಮುಸಿ ನಕ್ಕಿತು.

'ಯಾರ್‍ಯಾರು ಏನೇನು ಹೊಸವರ್ಷದ ಸಂಕಲ್ಪ ಮಾಡ್ಯಾರೋ ಯಾರಿಗೆ ಗೊತ್ತು... ಟ್ರಂಪಣ್ಣನಂತೂ ಈ ಸಲ ನೊಬೆಲ್ ಶಾಂತಿ ಪ್ರಶಸ್ತಿ ತಗಳ್ಳಲೇ ಬೇಕಂತ ಸಂಕಲ್ಪ ಮಾಡಿರಬೌದು.'

'ಶಾಂತಿ ಪ್ರಶಸ್ತಿಗೆ ಮೊದಲನೇ ಹೆಜ್ಜೆ ಅಂತ ಅಂವಾ ವೆನೆಜುವೆಲಾ ಮೇಲೆ ದಾಳಿ ಮಾಡಿ, ಅಲ್ಲಿಯ ಅಧ್ಯಕ್ಷರನ್ನೇ ಸೆರೆ ಹಿಡಿದಾನೆ!'

'ರಷ್ಯಾ ಅಧ್ಯಕ್ಷ ಪುಟಿನ್ ಉಕ್ರೇನ್ ಮೇಲಿನ ಯುದ್ಧ ನಿಲ್ಲಿಸಂಗಿಲ್ಲ ಅಂತ ಸಂಕಲ್ಪ ಮಾಡಿರಬೌದು. ಪ್ಯಾಲೆಸ್ಟೀನ್ ಹಂತಹಂತವಾಗಿ ನಾಶ ಮಾಡೂದು ಇಸ್ರೇಲಿನ ಹೊಸವರ್ಷದ ಗುಪ್ತಸಂಕಲ್ಪ ಆಗಿರಬೌದು' ಎಂದೆ.

'ವಿಶ್ವದ ಉಸಾಬರಿ ನಮಗ್ಯಾಕೆ ಬಿಡು... ನಮ್ಮ ಮಂದಿ ಸಂಕಲ್ಪ ಮಾಡೂದ್ರಾಗೆ ಏನು ಕಡಿಮಿ?' ಎಂದಿತು ಬೆಕ್ಕಣ್ಣ.

'ಭ್ರಷ್ಟಾಚಾರಿಗಳ ಧನಕನಕ ಸಂಕಲ್ಪ, ರಾಜಕಾರಣಿಗಳ ಕುರ್ಚಿ ಸಂಕಲ್ಪ... ಅದಾನಿ, ಅಂಬಾನಿಯಂತಹ ಕಾರ್ಪೊರೇಟ್ ಕುಳಗಳ ಸರ್ವಂಸ್ವಾಹಾ ಸಂಕಲ್ಪ, ತಂದೆತಾಯಂದಿರು, ಖಾಪ್ ಪಂಚಾಯಿತಿಗಳಿಗೆ ಮರ್ಯಾದೆಗೇಡು ಹತ್ಯೆ ಮಾಡುವ ಸಂಕಲ್ಪ...' ನಾನು ಪಟ್ಟಿ ಹೇಳುತ್ತ ಹೋದೆ.

'ಕೊನೇಪಕ್ಷ ತಂದೆ–ತಾಯಂದಿರು ಮನುಷ್ಯರಾಗೋ ಸಂಕಲ್ಪ ಮಾಡಿದರೆ ಸ್ವಂತಮಕ್ಕಳ ಮರ್ಯಾದೆಗೇಡು ಹತ್ಯೆ ತಪ್ಪತೈತಿ. ನೀವು ಮೊದಲು ಮನುಷ್ಯರಾಗುವ ಮನುಷ್ಯತ್ವದ ಸಂಕಲ್ಪ ಮಾಡಿರಿ!' ಎಂದು ಬೆಕ್ಕಣ್ಣ ಗುರುಗುಟ್ಟಿತು.

ಸಂಗತ

ಫಲಾನುಭವಿಗಳ ಬಗ್ಗೆ ಅಸಹನೆ ಏಕೆ?

ಕಲ್ಯಾಣ ಯೋಜನೆಗಳ ಫಲಾನುಭವಿಗಳನ್ನು ಉದಾಸೀನದಿಂದ ನೋಡುವುದು ಅಮಾನವೀಯ ನಡವಳಿಕೆ. ಘನತೆಯ ಬದುಕು ಉಳ್ಳವರಿಗೆ ಸೀಮಿತವಾದುದಲ್ಲ.

• ರಾಜಕುಮಾರ ಕುಲಕರ್ಣಿ

ಇತ್ತೀಚೆಗೆ ಅಂಚೆ ಕಚೇರಿಗೆ ಹೋಗಿದ್ದಾಗ, ವೃದ್ಧಾಪ್ಯ ವೇತನ ಪಡೆಯಲೆಂದು ಅನೇಕ ಹಿರಿಯರು ಸರತಿಯಲ್ಲಿ ನಿಂತಿದ್ದನ್ನು ನೋಡಿದೆ. ಹಣ ಠೇವಣಿ ಇಡುವವರೊಂದಿಗೆ ಮತ್ತು ವೃದ್ಧಾಪ್ಯ ವೇತನ ಪಡೆಯಲು ಬಂದವರ ಜೊತೆಗೆ ವ್ಯವಹರಿಸುವಾಗ ಸಿಬ್ಬಂದಿಯ ವರ್ತನೆಯಲ್ಲಿ ವ್ಯತ್ಯಾಸ ಗೋಚರಿಸುತ್ತಿತ್ತು. ವೃದ್ಧಾಪ್ಯ ವೇತನ ಪಡೆಯಲು ಬಂದವರು ಭಿಕ್ಷೆ ಬೇಡಲು ಬಂದಿರುವವರೇನೋ ಎನ್ನುವಂತಹ ಅಸಹನೆ ಕಚೇರಿಯ ಸಿಬ್ಬಂದಿಯ ಮುಖದಲ್ಲಿತ್ತು.

ಸರ್ಕಾರದ ಯೋಜನೆಗಳ ಫಲಾನುಭವಿಗಳು ಎದುರಿಸುವ ಅವಮಾನ ಮತ್ತು ನೋವು ಅಪಾರ. ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ಮಾಸಾಶನ ಪಡೆಯುವಾಗಲೆಲ್ಲ ಫಲಾನುಭವಿಗಳು ವ್ಯಂಗ್ಯದ ನೋಟಕ್ಕೆ ಗುರಿಯಾಗುತ್ತಾರೆ. ಸಾರಿಗೆ ವಾಹನಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಮಹಿಳೆಯರ ಬಗ್ಗೆ ಚಾಲಕರು ಮತ್ತು ನಿರ್ವಾಹಕರಲ್ಲಿ ಅಸಡ್ಡೆ ಮನೆಮಾಡಿದೆ. 'ಗೃಹಲಕ್ಷ್ಮಿ' ಯೋಜನೆಯಿಂದ ದೊರೆಯುತ್ತಿರುವ ಹಣದಿಂದ ಮಹಿಳೆಯರಲ್ಲಿ ಅಹಂಕಾರ ಮನೆಮಾಡಿದೆ ಎಂದು ದೂಷಿಸಲಾಗುತ್ತಿದೆ.

ಕೆಲವು ದಿನಗಳ ಹಿಂದೆ ವಿಜಯಪುರಕ್ಕೆ ಪ್ರಯಾಣ ಮಾಡುತ್ತಿರುವಾಗ ಬಸ್ ಮಾರ್ಗ ಮಧ್ಯದಲ್ಲೇ ಕೆಟ್ಟು ನಿಂತಿತು. ವಿಜಯಪುರದತ್ತ ಹೊರಟಿದ್ದ ಬಸ್ ಅನ್ನು ನಿರ್ವಾಹಕರು ನಿಲ್ಲಿಸಿದರು. ಬಾಗಲಕೋಟೆಯಿಂದ ಸೊಲ್ಲಾಪುರಕ್ಕೆ ಹೊರಟಿದ್ದ ಆ ಬಸ್ ಹೊರರಾಜ್ಯಕ್ಕೆ ಹೋಗುತ್ತಿದ್ದುದ್ದರಿಂದ ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶವಿರಲಿಲ್ಲ. ಕೆಲವು ಮಹಿಳೆಯರು ಟಿಕೆಟ್ ಖರೀದಿಸುವುದಾಗಿ ಹೇಳಿದರೂ, ಮಾರ್ಗಮಧ್ಯದಲ್ಲಿ ಟಿಕೆಟ್ ನೀಡುವುದು ನಿಯಮಬಾಹಿರ ಎಂದು ಮಹಿಳಾ ಪ್ರಯಾಣಿಕರನ್ನು ನಿರ್ವಾಹಕ ಹತ್ತಿಸಿಕೊಳ್ಳಲಿಲ್ಲ. ಉಚಿತ ಪ್ರಯಾಣದ ಫಲಾನುಭವಿಗಳಿಗಾದ ತೊಂದರೆ ಕುರಿತು ಒಂದು ಬಗೆಯ ಸಂತೋಷ ಚಾಲಕ ಮತ್ತು ನಿರ್ವಾಹಕರ ಮುಖದಲ್ಲಿ ಕಾಣಿಸುತ್ತಿತ್ತು.

ಎಐ ಚಿತ್ರ

ಸಮಾನ ಶಿಕ್ಷಣಕ್ಕಾಗಿ 2009ರಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ತರಲಾಯಿತು. ಈ ಕಾಯ್ದೆ ಅನ್ವಯ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಶೇ 25ರಷ್ಟು ಪ್ರವೇಶವನ್ನು ಬಡಮಕ್ಕಳಿಗಾಗಿ ಕಾಯ್ದಿರಿಸಲಾಯಿತು. ಕಾಯ್ದೆ ಅನುಷ್ಠಾನಕ್ಕೆ ಬಂದ ಆರಂಭದ ದಿನಗಳಲ್ಲಿ ಕಾಯ್ದೆಯಡಿ ಪ್ರವೇಶ ಪಡೆದ ಮಕ್ಕಳನ್ನು ಶಾಲೆಗಳಲ್ಲಿ ಕೆಲವು ಶಿಕ್ಷಕರು ಮತ್ತು ಸಹಪಾಠಿಗಳು ಅಸ್ಪೃಶ್ಯರಂತೆ ನೋಡಿದ್ದು ಸುಳ್ಳಲ್ಲ. ಇಂತಹ ವರ್ತನೆ ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರಿ ಅದು ಅವರ ಕಲಿಕೆ ಕುಂಠಿತಗೊಳ್ಳಲು ಕಾರಣವಾಯಿತು.

ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಲ್ಲಿನ ಮಕ್ಕಳು ಈಗಲೂ ಶಿಕ್ಷಣಕ್ಕಾಗಿ ನೆಚ್ಚಿಕೊಂಡಿರುವುದು ಸರ್ಕಾರಿ ಶಾಲೆಗಳನ್ನೆ. ಬಿಸಿಯೂಟದ ಯೋಜನೆಯಿಂದ ಹಾಗೂ ಉಚಿತ ಸಮವಸ್ತ್ರ ಮತ್ತು ಶೈಕ್ಷಣಿಕ ಪರಿಕರಗಳನ್ನು ಒದಗಿಸುವುದರಿಂದ ಬಡಕುಟುಂಬಗಳಿಗೆ ಮಕ್ಕಳ ಶಿಕ್ಷಣ ಹೊರೆಯಾಗುತ್ತಿಲ್ಲ. ಸಮಾಜದಲ್ಲಿ, ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳನ್ನು ದಡ್ಡರು ಎನ್ನುವಂತೆ ನೋಡಲಾಗುತ್ತಿದೆ. ಮಕ್ಕಳು ಸರ್ಕಾರಿ ಕನ್ನಡ ಶಾಲೆಗಳಲ್ಲಿ ಓದುತ್ತಿದ್ದಾರೆ ಎಂದು ಹೇಳಲು ಬಹುತೇಕ ಪಾಲಕರಿಗೆ ಕೀಳರಿಮೆ ಕಾಡುತ್ತಿದೆ.

ಕರ್ನಾಟಕ ಸರ್ಕಾರ ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ರಜೆಯ ಸೌಲಭ್ಯ ಕಲ್ಪಿಸಿದೆ. ಇದು ಪುರುಷ ಉದ್ಯೋಗಿಗಳ ವ್ಯಂಗ್ಯ ಮತ್ತು ಚರ್ಚೆಗೆ ಆಹಾರವಾಗಿದೆ. ಸೌಲಭ್ಯದ ಫಲಾನುಭವಿಗಳಾದ ಮಹಿಳೆಯರನ್ನು ವಿಚಿತ್ರ ಪ್ರಾಣಿಗಳೆಂಬಂತೆ ನೋಡಲಾಗುತ್ತಿದೆ. ಸರ್ಕಾರ ಘೋಷಿಸಿರುವ ಈ ಸೌಲಭ್ಯವನ್ನು ಸ್ವಾಗತಿಸುವುದರಲ್ಲೇ ಪುರುಷ ಉದ್ಯೋಗಿಗಳ ಮಾನವೀಯತೆ ಅಡಕವಾಗಿದೆ. ಕೀಳು ಚರ್ಚೆ ಮತ್ತು ವ್ಯಂಗ್ಯದ ಮಾತುಗಳು ಸರಿಯಲ್ಲ.

ಯೋಜನೆಯ ಫಲಾನುಭವಿಗಳೊಂದಿಗೆ ಅನಾಗರಿಕವಾಗಿ ವರ್ತಿಸುವುದಕ್ಕಿಂತ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ಪ್ರಾಪ್ತವಾಗುತ್ತಿವೆಯೇ ಎಂದು ಯೋಚಿಸುವುದೊಳಿತು. ಬಡವರೊಂದಿಗೆ ಅನೇಕ ಬಲ್ಲಿದರೂ ಯೋಜನೆಗಳ ಲಾಭ ಪಡೆಯುತ್ತಿದ್ದಾರೆ. ವೃದ್ಧಾಪ್ಯ ವೇತನ, ವಿಧವಾ ವೇತನ, ಅನ್ನಭಾಗ್ಯ, ಗೃಹಲಕ್ಷ್ಮಿ, ಸ್ತ್ರೀಶಕ್ತಿ, ಗೃಹಜ್ಯೋತಿ ಇತ್ಯಾದಿ ಯೋಜನೆಗಳ ಫಲದಲ್ಲಿ ಆರ್ಥಿಕ ಸ್ಥಿತಿವಂತರೂ ಪಾಲುದಾರರಾಗಿದ್ದಾರೆ. ಶ್ರೀಮಂತ ರೈತರ ಬ್ಯಾಂಕ್ ಖಾತೆಗಳಿಗೆ ಬೆಳೆಪರಿಹಾರದ ಹಣ ಜಮೆಯಾಗುತ್ತಿದೆ.

ವಿವೇಕ ಶಾನಭಾಗರ 'ಒಂದು ಬದಿ ಕಡಲು' ಕಾದಂಬರಿಯಲ್ಲಿ ಒಂದು ಸನ್ನಿವೇಶವಿದೆ: ಯಾರನ್ನು ನೈವೇದ್ಯದ ಎಲೆಗೆ ಕೂರಿಸುವುದೆಂದು ನಿರ್ಧರಿಸಲು ವಾಸುದೇವ ಮಕ್ಕಳನ್ನೆಲ್ಲ ವೃತ್ತಾಕಾರ ನಿಲ್ಲಿಸಿ, 'ಈಗ ಅಡಂ ತಡಂ, ತತ್ತರಬಾಜಾ ಆಟ ಆಡಿ, ಯಾರು ಕೊನೆಯಲ್ಲಿ ಉಳಿಯುತ್ತಾರೋ ಅವರಿಗೆ ನೈವೇದ್ಯದ ಎಲೆ' ಅಂದ. ಗುಂಪಿನಲ್ಲಿ ಸೇರದೆ ದೂರನಿಂತ ಪುರಂದರನನ್ನು ಅವನು ಗಮನಿಸಿದರೂ ಕರೆಯಲಿಲ್ಲವೆಂದು ಸಾವಿತ್ರಿಗೆ ಅನಿಸಿತು. ಮಗನ ಹತ್ತಿರ ಹೋಗಿ 'ನಿನಗೂ ನೈವೇದ್ಯದ ಎಲೆಯ ಮೇಲೆ ಕೂರಬೇಕೇನೋ?' ಎಂದು ಕೇಳಿದಳು. ಅವನು ಇಲ್ಲವೆಂದು ತಲೆಯಾಡಿಸಿದ. ಮತ್ತೆ ಮತ್ತೆ ಕೇಳಿದ್ದಕ್ಕೆ 'ನನಗೆ ಇಷ್ಟವಿಲ್ಲವಮ್ಮ' ಅಂದುಬಿಟ್ಟ. ನಮ್ಮಂಥವರ ಮನೆಯ ಮಕ್ಕಳು ಬೇಗನೆ ದೊಡ್ಡವರಾಗಿ ಬಿಡುತ್ತಾರೆ ಎಂದು ಅವಳಿಗನಿಸಿತು.

ಕಾದಂಬರಿಯಲ್ಲಿ ಹೇಳಿದ 'ನಮ್ಮಂಥವರ' ಎನ್ನುವುದು ಬಡವರನ್ನು, ನಿರ್ಗತಿಕರನ್ನು ಸಂಕೇತಿಸುತ್ತದೆ. ಸಮಾಜದಲ್ಲಿ 'ನಮ್ಮಂಥವರ' ಸಂಖ್ಯೆ ಹೇರಳವಾಗಿದೆ. ಸೀಮಿತ ಜನರಲ್ಲಿ ಹಣ ಕ್ರೋಡೀಕರಣಗೊಂಡಿದೆ. ಇಂತಹ ವಿಷಮ ಸನ್ನಿವೇಶದಲ್ಲಿ ಬಡವರು ಬದುಕುವುದಾದರೂ ಹೇಗೆ? ಪ್ರತಿಯೊಬ್ಬ ಮನುಷ್ಯನಿಗೂ ಘನತೆಯ ಬದುಕು ಹಕ್ಕಾಗಬೇಕು. ಸರ್ಕಾರದ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ತಲಪುವಂತಾಗಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ವೆನೆಜುವೆಲಾ: ಅಂಕೆ ಮೀರಿದ ಅಮೆರಿಕ

ಡೊನಾಲ್ಡ್ ಟ್ರಂಪ್

ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಆಡಳಿತವು ದಕ್ಷಿಣ ಅಮೆರಿಕದ ತೈಲ ಸಂಪದ್ಭರಿತ ರಾಷ್ಟ್ರ ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು 'ಸೆರೆ' ಹಿಡಿದು ಅಮೆರಿಕಕ್ಕೆ ಕರೆದೊಯ್ದಿದೆ. ಹಲವು ದೇಶಗಳು ಅಮೆರಿಕದ ನಡೆಯನ್ನು ಖಂಡಿಸಿದರೂ ವಲಸೆ, ಮಾದಕ ವಸ್ತುಗಳು ಮತ್ತು ಮಾದಕವಸ್ತು ಭಯೋತ್ಪಾದನೆಯನ್ನು ಹತ್ತಿಕ್ಕಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಮೆರಿಕ ಹೇಳಿಕೊಂಡಿದೆ. ಆದರೆ, ಮೇಲ್ನೋಟಕ್ಕೆ ಇದು ಕಾರಣವಾಗಿ ಕಂಡರೂ ಈ ಕಾರ್ಯಾಚರಣೆಯ ಹಿಂದೆ ಬೇರೆಯದೇ ಉದ್ದೇಶಗಳಿವೆ. ವೆನೆಜುವೆಲಾದ ತೈಲ ಸಂಪತ್ತಿನ ಮೇಲೆ ಕಣ್ಣಿಟ್ಟಿರುವ ಅಮೆರಿಕ ಅಲ್ಲಿನ ಸರ್ಕಾರದ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಲೇ ಇತ್ತು. ಚೀನಾ, ರಷ್ಯಾಗಳಿಗೆ ಹತ್ತಿರವಾಗಿ ತನ್ನ ವಿರುದ್ಧ ತೊಡೆ ತಟ್ಟಿರುವ ವೆನೆಜುವೆಲಾ ಸರ್ಕಾರವನ್ನು ಕಿತ್ತೊಗೆದು, ಅಲ್ಲಿ ತನ್ನ ನೀತಿ ಬೆಂಬಲಿಸುವ ಸರ್ಕಾರವನ್ನು ಸ್ಥಾಪಿಸುವುದು ಅಮೆರಿಕದ ಉದ್ದೇಶ ಎಂದು ವಿಶ್ಲೇಷಿಸಲಾಗುತ್ತಿದೆ

ಪ್ರಜಾವಾಣಿ ವಾರ್ತೆ

2025ರ ನೊಬೆಲ್ ಶಾಂತಿ ಪ್ರಶಸ್ತಿಯು ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾಡೊ ಅವರಿಗೆ ಸಂದಿತ್ತು. ಪ್ರಶಸ್ತಿ ತನಗೇ ಸಿಗಬೇಕು ಎಂದು ಅದುವರೆಗೂ ಪ್ರತಿಪಾದಿಸಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮಾರಿಯಾ ಅವರ ಆಯ್ಕೆಯನ್ನು ಸ್ವಾಗತಿಸಿದ್ದರು. ವಿಶೇಷ ಎನ್ನಿಸಿದ್ದು, ಮಾರಿಯಾ ಆ ಪ್ರಶಸ್ತಿಯನ್ನು ಟ್ರಂಪ್‌ಗೆ ಅರ್ಪಿಸಿದ್ದರು. ಮುಖ್ಯ ವಿಚಾರವೆಂದರೆ, ಆ ಸಂದರ್ಭದಲ್ಲಿ ವೆನೆಜುವೆಲಾದ ಕರಾವಳಿ ಮೂಲಕ ಸಾಗುತ್ತಿದ್ದ ಹಡಗುಗಳ ಮೇಲೆ ಅಮೆರಿಕ ದಾಳಿ ನಡೆಸಿತ್ತು. ಅವರು ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡುತ್ತಿದ್ದರು ಎಂದು ಅಮೆರಿಕ ತನ್ನ ಕಾರ್ಯಾಚರಣೆಯನ್ನು ಸಮರ್ಥಿಸಿಕೊಂಡಿತ್ತು. ದೇಶದ ಅನೇಕರ ಸಾವಿಗೆ ಕಾರಣವಾಗಿದ್ದ ಅಮೆರಿಕದ ಕಾರ್ಯಾಚರಣೆಯನ್ನು ಸಹಜವಾಗಿಯೇ ವೆನೆಜುವೆಲಾ ವಿರೋಧಿಸಿತ್ತು. ಆದರೆ, ಮಾರಿಯಾ ಅಮೆರಿಕದ ಕಾರ್ಯಾಚರಣೆಯನ್ನು ಸಮರ್ಥಿಸಿದ್ದರು. ಟ್ರಂಪ್ ಅವರನ್ನು ಬೆಂಬಲಿಸಿದ್ದರು. ಇಷ್ಟಾದರೂ ಅಮೆರಿಕದ ಕಾರ್ಯಾಚರಣೆ ಆಗಲಿ, ಮಾರಿಯಾ ಅವರ ನಡೆಯಾಗಲಿ ಅನಿರೀಕ್ಷಿತವಾಗಿಯೇನೂ ಇರಲಿಲ್ಲ.

ಜಗತ್ತಿನಲ್ಲೇ ಅತಿ ಹೆಚ್ಚು ತೈಲ ನಿಕ್ಷೇಪಗಳನ್ನು ಹೊಂದಿರುವ ರಾಷ್ಟ್ರವಾಗಿರುವ ವೆನೆಜುವೆಲಾ, ಸುಮಾರು ಮೂರು ಶತಮಾನ ಸ್ಪೇನ್‌ನ ವಸಾಹತುವಾಗಿತ್ತು. ಸ್ಪೇನ್‌ನಿಂದ ಸ್ವಾತಂತ್ರ್ಯ ಪಡೆದ ನಂತರ ನೆರೆಯ ರಾಷ್ಟ್ರಗಳೊಂದಿಗೆ ಗಡಿ ವಿವಾದ, ಸರ್ವಾಧಿಕಾರ, ಸೇನಾ ದಂಗೆಯಿಂದ ತೆವಳುತ್ತಾ ಸಾಗುತ್ತಿದ್ದ ವೆನೆಜುವೆಲಾಗೆ ಸ್ಥಿರತೆ ತಂದುಕೊಟ್ಟು, ಅದನ್ನು ಅಭಿವೃದ್ಧಿಯ ಪಥದಲ್ಲಿ ನಡೆಯುವಂತೆ ಮಾಡಿದ್ದು ಹ್ಯೂಗೊ ಚಾವೇಸ್. ಎಡಪಂಥೀಯರಾಗಿದ್ದ ಚಾವೇಸ್, ಉದ್ದಿಮೆಗಳ ರಾಷ್ಟ್ರೀಕರಣ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಂಡು ಆರ್ಥಿಕ ಬೆಳವಣಿಗೆ ಸಾಧಿಸಿದರು. ಆದರೆ, ಸರ್ವಾಧಿಕಾರಿ ಎನ್ನುವ ನೆಪದಲ್ಲಿ ದೇಶದ ಒಳಗೆ ಮತ್ತು ಹೊರಗೆ ಅವರ ವಿರೋಧಿಗಳು ಹೆಚ್ಚಾದರು. ದೇಶದ ಹೊರಗಿನ ವಿರೋಧಿಗಳಲ್ಲಿ ಅಮೆರಿಕ ಪ್ರಮುಖವಾದರೆ, ಒಳಗಿನ ವಿರೋಧಿಗಳಲ್ಲಿ ಮಾರಿಯಾ ಕೊರಿನಾ ಮಚಾಡೊ ಪ್ರಮುಖರಾಗಿದ್ದರು. ಅಮೆರಿಕದ ವಿರೋಧಕ್ಕೆ ಕಾರಣವಾಗಿದ್ದು ಇಂಧನ ವ್ಯಾಪಾರ.

ಅಮೆರಿಕ ಕಣ್ಣು ತೈಲದ ಮೇಲೆ: ವೆನೆಜುವೆಲಾದ ಅನಿಲ ಸಂಪನ್ಮೂಲಗಳ ಮೇಲೆ ಅಮೆರಿಕ ದೀರ್ಘಕಾಲದಿಂದಲೂ ಕಣ್ಣಿಟ್ಟಿದೆ. 1920ರಿಂದಲೂ ಅಮೆರಿಕದ ಕಂಪನಿಗಳು ವೆನೆಜುವೆಲಾದಲ್ಲಿ ತೈಲ ವ್ಯಾಪಾರ ಮಾಡುತ್ತಿದ್ದವು. 1976ರಲ್ಲಿ ವೆನೆಜುವೆಲಾದಲ್ಲಿ ಸರ್ಕಾರಿ ಸ್ವಾಮ್ಯದ ಇಂಧನ ಮತ್ತು ನೈಸರ್ಗಿಕ ಅನಿಲ ಕಂಪನಿಯನ್ನು ಸ್ಥಾಪಿಸಿದರೂ ಅಮೆರಿಕವು ಪಾಲುದಾರಿಕೆ ಮತ್ತು ಇತರ ಪರೋಕ್ಷ ವಿಧಾನಗಳಲ್ಲಿ ತೈಲ ವ್ಯಾಪಾರ ಮುಂದುವರಿಸಿತ್ತು. ಆದರೆ, ಚಾವೇಸ್ ಅಧ್ಯಕ್ಷರಾದ (1998) ನಂತರ ರಾಷ್ಟ್ರೀಕರಣದಿಂದ ನಿಯಮಗಳು ಬಿಗಿಯಾಗಿ, ಅಮೆರಿಕ ವೆನೆಜುವೆಲಾದ ತೈಲ ಮಾರುಕಟ್ಟೆಯಿಂದ ಹೊರಬರಲೇಬೇಕಾಯಿತು. ಕಮ್ಯುನಿಸ್ಟ್ ವೆನೆಜುವೆಲಾ ಕಮ್ಯುನಿಸ್ಟ್ ಚೀನಾದತ್ತ ವಾಲಿತು. ಚೀನಾಕ್ಕೆ ತೈಲ ರಫ್ತು ಮಾಡತೊಡಗಿತು. ಅಮೆರಿಕವು ವೆನೆಜುವೆಲಾ ಮೇಲೆ ಹಲವು ರೀತಿಯ ನಿರ್ಬಂಧ ಹೇರಿದ್ದಲ್ಲದೇ ಆಗಿನಿಂದಲೂ ವೆನೆಜುವೆಲಾ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಲೇ ಇತ್ತು.

> ವೆನೆಜುವೆಲಾ, ತೈಲ ವ್ಯಾಪಾರದಲ್ಲಿ ಅಮೆರಿಕದ ಡಾಲರ್ ಕರೆನ್ಸಿಯನ್ನು ಬಳಸುವುದನ್ನು 2017ರಿಂದ ನಿಲ್ಲಿಸಿತ್ತು. ಚೀನಾದ ಯುವಾನ್ ಕರೆನ್ಸಿ ಮೂಲಕ ವಹಿವಾಟು ನಡೆಸುತ್ತಿತ್ತು. ಇದೂ ಅಮೆರಿಕದ ಕೆಂಗಣ್ಣಿಗೆ ಗುರಿಯಾಗಿತ್ತು.

ಚಾವೇಸ್ ನಂತರ ಅವರ ಉತ್ತರಾಧಿಕಾರಿಯಾಗಿ ಬಂದ ನಿಕೊಲಸ್ ಮಡೂರೊ ಕೂಡ ಚಾವೇಸ್ ಅವರ ಅಮೆರಿಕ ವಿರೋಧಿ ನಿಲುವನ್ನು ಮುಂದುವರಿಸಿದರು. ಆದರೆ, ತೈಲದ ಬೆಲೆ ಏರಿಳಿತ, ವಿರೋಧಿಗಳ ಪಿತೂರಿ ಮುಂತಾದ ಕಾರಣಗಳಿಂದ ವೆನೆಜುವೆಲಾದ ಆರ್ಥಿಕ ಸ್ಥಿತಿ ಹದಗೆಡುತ್ತಾ ಬಂದಿತು. ಆಹಾರ ಧಾನ್ಯಗಳ ಬೆಲೆ ಏರಿಕೆ, ಬಡತನ ಹೆಚ್ಚಾಯಿತು. ಲಕ್ಷಾಂತರ ಮಂದಿ ದೇಶ ತೊರೆದರು. ಇಷ್ಟಾದರೂ ಸತತ ಮೂರು ಚುನಾವಣೆಗಳಲ್ಲಿ (2013, 2018, 2024) ಜಯ ಗಳಿಸಿ ಅಧ್ಯಕ್ಷರಾಗಿ ಮುಂದುವರಿದರು. ಅವರು ಚುನಾವಣೆಗಳನ್ನು ಅಕ್ರಮವಾಗಿ ಗೆಲ್ಲುತ್ತಿದ್ದಾರೆ ಎನ್ನುವುದು ವಿರೋಧಿಗಳ ವಾದವಾಗಿತ್ತು.

ಮಾದಕ ವಸ್ತುಗಳ ನೆಪ: ಅಮೆರಿಕದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಟ್ರಂಪ್ ಅಧಿಕಾರಕ್ಕೇರಿದ ನಂತರ, ವೆನೆಜುವೆಲಾ ಸರ್ಕಾರದ ಮೇಲಿನ ಒತ್ತಡವನ್ನು ತೀವ್ರಗೊಳಿಸಿದರು; ಮಡೂರೊ ಬಂಧನಕ್ಕೆ ನೆರವಾಗುವಂಥ ಮಾಹಿತಿ ನೀಡಿದರೆ ಬಹುಮಾನ ಕೊಡುವುದಾಗಿ ಘೋಷಿಸಿದರು. ಜತೆಯಲ್ಲೇ, ಮಾದಕ ವಸ್ತುಗಳ ನೆಪದಲ್ಲಿ, ದಕ್ಷಿಣ ಅಮೆರಿಕದಿಂದ ಅಮೆರಿಕದತ್ತ ಸಾಗುತ್ತಿದ್ದ ಹಡಗುಗಳ ಮೇಲೆ 30 ದಾಳಿಗಳನ್ನು ನಡೆಸಿ, 110ಕ್ಕೂ ಹೆಚ್ಚು ಮಂದಿಯನ್ನು ಹತ್ಯೆ ಮಾಡಿದರು. ವೆನೆಜುವೆಲಾದ ಸಾವಿರಾರು ಪ್ರಜೆಗಳು ಅಕ್ರಮವಾಗಿ ಅಮೆರಿಕ ಪ್ರವೇಶಿಸುತ್ತಿದ್ದು, ಅದಕ್ಕೆ ಮಡೂರೊ ಕಾರಣ ಎನ್ನುವುದು ಅಮೆರಿಕದ ವಾದವಾಗಿತ್ತು. ವೆನೆಜುವೆಲಾದ ಜೈಲುಗಳಲ್ಲಿರುವ ಕೈದಿಗಳನ್ನು ಅಮೆರಿಕಕ್ಕೆ ರವಾನಿಸುತ್ತಿದ್ದಾರೆ ಎಂದು ಯಾವುದೇ ಆಧಾರ ನೀಡದೇ ಆರೋಪಿಸಿತ್ತು. ವೆನೆಜುವೆಲಾವು ತೈಲದಿಂದ ಬಂದ ಆದಾಯವನ್ನು ಮಾದಕ ದ್ರವ್ಯ ಸಂಬಂಧಿ ಅಪರಾಧಗಳಿಗೆ ಬಳಸುತ್ತಿದೆ ಎಂದು ಟ್ರಂಪ್ ಆರೋಪಿಸಿದ್ದರು.

ಎಲ್ಲ ಆರೋಪಗಳನ್ನು ನಿರಾಕರಿಸಿದ್ದ ಮಡೂರೊ, ಅಮೆರಿಕವು ತನ್ನನ್ನು ಅಧಿಕಾರದಿಂದ ಕೆಳಗಿಳಿಸಿ, ವೆನೆಜುವೆಲಾದ ತೈಲ ನಿಕ್ಷೇಪಗಳ ಮೇಲೆ ಹಿಡಿತ ಸಾಧಿಸಲು ಅಮೆರಿಕ ಪ್ರಯತ್ನ ನಡೆಸುತ್ತಿದ್ದು, ಅದಕ್ಕೆ ಮಾದಕ ವಸ್ತುಗಳ ದಾಳವನ್ನು ಬಳಸುತ್ತಿದೆ ಎಂದು ಹೇಳಿದ್ದರು.

ಆಧಾರ: ಪಿಟಿಐ, ಬಿಬಿಸಿ, ಒಪೆಕ್ ವಾರ್ಷಿಕ ವರದಿ–2025, ಮಾಧ್ಯಮ ವರದಿಗಳು

ಮಡೂರೊ ಮಹಿಳಾ ಅನುಯಾಯಿಯ ಪ್ರತಿಭಟನೆ

ಚೀನಾ ಪ್ರಭಾವ ತಗ್ಗಿಸುವ ಉದ್ದೇಶ

ಭೌಗೋಳಿಕವಾಗಿ ಪಶ್ಚಿಮದ ರಾಷ್ಟ್ರಗಳಲ್ಲಿ ತನ್ನ ಪ್ರಾಬಲ್ಯವನ್ನು ಮತ್ತಷ್ಟು ಹೆಚ್ಚಿಸುವುದು ಅಮೆರಿಕದ ಈ ಕ್ರಮದ ಹಿಂದಿನ ಮತ್ತೊಂದು ಕಾರಣವಾದರೆ, ದಕ್ಷಿಣ ಅಮೆರಿಕದ ವ್ಯಾಪ್ತಿಯಲ್ಲಿ ಚೀನಾ ಮತ್ತು ರಷ್ಯಾ ಪ್ರಭಾವವನ್ನು ತಗ್ಗಿಸುವುದು ಮಗದೊಂದು ಕಾರಣ.

ವೆನೆಜುವೆಲಾ ಸೇರಿದಂತೆ ದಕ್ಷಿಣ ಅಮೆರಿಕದ ಹಲವು ರಾಷ್ಟ್ರಗಳಲ್ಲಿ ಚೀನಾವು ಬೆಲ್ಟ್ ಆ್ಯಂಡ್ ರೋಡ್ ಇನಿಷಿಯೇಟಿವ್ ಮೂಲಕ ಭಾರಿ ಪ್ರಮಾಣದಲ್ಲಿ ಬಂಡವಾಳ ಹೂಡಿದೆ. ತನ್ನ ಮಹತ್ವಾಕಾಂಕ್ಷೆ ಯೋಜನೆಗೆ ಈ ಭಾಗದ 24 ರಾಷ್ಟ್ರಗಳು ಸಹಿ ಹಾಕಿವೆ ಎಂದು ಚೀನಾ ಈ ಹಿಂದೆ ಹೇಳಿಕೊಂಡಿತ್ತು. ಇಲ್ಲಿನ ಹಲವು ದೇಶಗಳಿಗೆ ಚೀನಾ ದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರಗಳಲ್ಲೊಂದು. ಚೀನಾದೊಂದಿಗೆ ಪಾಲುದಾರಿಕೆ ಇದ್ದ ಹೊರತಾಗಿಯೂ ಈ ವಲಯದ ಹಲವು ರಾಷ್ಟ್ರಗಳು ಅಮೆರಿಕದೊಂದಿಗೆ ಉತ್ತಮ ಬಾಂಧವ್ಯ ಹೊಂದಿವೆ. ಆದರೆ, ವೆನೆಜುವೆಲಾ ಮತ್ತು ಕ್ಯೂಬಾ ಅಮೆರಿಕದ ವಿರುದ್ಧ ತೊಡೆ ತಟ್ಟಿದ್ದವು.

ಇತ್ತೀಚಿನ ವರ್ಷಗಳಲ್ಲಿ ಅಮೆರಿಕವು ಕ್ಯೂಬಾಕ್ಕಿಂತಲೂ ವೆನೆಜುವೆಲಾವನ್ನೇ ಹೆಚ್ಚು ಗುರಿಯಾಗಿಸಿಕೊಂಡಿತ್ತು.

ಅಮೆರಿಕದಿಂದ ದೂರವಾದ ಬಳಿಕ ಚೀನಾವು ವೆನೆಜುವೆಲಾಕ್ಕೆ ಹತ್ತಿರವಾಗಿತ್ತು. ಚೀನಾವು ಅಲ್ಲಿನ ಇಂಧನ ಕ್ಷೇತ್ರದಲ್ಲಿ ಭಾರಿ ಪ್ರಮಾಣದಲ್ಲಿ ಹೂಡಿಕೆ ಮಾಡಿದೆ. ವೆನೆಜುವೆಲಾವು ತಾನು ಉತ್ಪಾದಿಸುವ ಒಟ್ಟು ತೈಲದಲ್ಲಿ ಶೇ 80ರಷ್ಟನ್ನು ಚೀನಾಕ್ಕೆ ಮಾರುತ್ತಿದೆ. 2024ರಲ್ಲಿ ಅಮೆರಿಕವು ವೆನೆಜುವೆಲಾದ ಮೇಲೆ ನಿರ್ಬಂಧಗಳನ್ನು ಹೇರಿದ ನಂತರ ಚೀನಾವು ಹೂಡಿಕೆಯನ್ನು ಸ್ವಲ್ಪ ಕಡಿಮೆ ಮಾಡಿದ್ದರೂ ಇಂಧನ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ಮುಂದುವರಿದಿತ್ತು. ಚೀನಾ ಕಾನ್‌ಕೋರ್ಡ್ ರಿಸೋರ್ಸಸ್ ಕಾರ್ಪೊರೇಷನ್ ಎಂಬ ಖಾಸಗಿ ಕಂಪೆನಿಯು ವೆನೆಜುವೆಲಾದ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಯೊಂದಿಗೆ ಮ್ಯಾರಕೈಬೊ ಸರೋವರದಲ್ಲಿ ಎರಡು ತೈಲ ಉತ್ಪಾದನಾ ಘಟಕ ಅಭಿವೃದ್ಧಿಪಡಿಸಲು 100 ಕೋಟಿ ಡಾಲರ್ ಮೊತ್ತದ ಒಪ್ಪಂದ ಮಾಡಿಕೊಂಡಿತ್ತು.

2024ರಲ್ಲಿ ಅತಿ ಹೆಚ್ಚು ತೈಲ ನಿಕ್ಷೇಪ ಹೊಂದಿದ್ದ ದೇಶಗಳು (ಕೋಟಿ ಬ್ಯಾರೆಲ್‌ಗಳಲ್ಲಿ)

ವೆನೆಜುವೆಲಾ	30,320
ಸೌದಿ ಅರೇಬಿಯಾ	26,720
ಇರಾನ್	20,860
ಕೆನಡಾ	16,300
ಇರಾಕ್	14,502
ಯುಎಇ	11,300
ಕುವೈತ್	10,150
ರಷ್ಯಾ	8,000
ಲಿಬಿಯಾ	4,836
ಅಮೆರಿಕ	4,500
ನೈಜೀರಿಯಾ	3,750

ಜಗತ್ತಿನಲ್ಲೇ ಅತಿ ಹೆಚ್ಚು ಕಚ್ಚಾ ತೈಲ ನಿಕ್ಷೇಪ ಹೊಂದಿರುವ ರಾಷ್ಟ್ರ ವೆನೆಜುವೆಲಾ. ಜಗತ್ತಿನಲ್ಲಿರುವ ಒಟ್ಟು ತೈಲ ನಿಕ್ಷೇಪದಲ್ಲಿ ಶೇ 19.35ರಷ್ಟು ವೆನೆಜುವೆಲಾ ಒಂದರಲ್ಲೇ ಇದೆ. ಒಪೆಕ್‌ನ ಅಂಕಿ ಅಂಶಗಳ ಪ್ರಕಾರ 2024ರಲ್ಲಿ ಜಾಗತಿಕವಾಗಿ ಲಭ್ಯವಿದ್ದ ತೈಲ ನಿಕ್ಷೇಪದ ಪ್ರಮಾಣ 1,566 ಶತಕೋಟಿ (1.56 ಲಕ್ಷ ಕೋಟಿ) ಬ್ಯಾರೆಲ್‌ಗಳು. ಈ ಪೈಕಿ ವೆನುಜುವೆಲಾದಲ್ಲೇ 303.22 ಶತ ಕೋಟಿ (30,320 ಕೋಟಿ) ಬ್ಯಾರೆಲ್‌ಗಳಷ್ಟು ತೈಲ ಲಭ್ಯವಿದೆ. ಜಗತ್ತಿನಲ್ಲಿ ಅತಿ ಹೆಚ್ಚು ತೈಲ ನಿಕ್ಷೇಪ ಹೊಂದಿರುವ ದೇಶಗಳ ಪಟ್ಟಿಯಲ್ಲಿ ಈ ಪುಟ್ಟ ರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ಅಮೆರಿಕ 10ನೇ ಸ್ಥಾನದಲ್ಲಿದೆ. ಅಲ್ಲಿ 4,500 ಕೋಟಿ ಬ್ಯಾರಲ್‌ಗಳಷ್ಟು ತೈಲ ಲಭ್ಯವಿದೆಯಷ್ಟೆ.

ಮುಂದೇನಾಗಬಹುದು?

ನಿಕೊಲಸ್ ಮಡೂರೊ ಅವರನ್ನು ಹೊತ್ತೊಯ್ದಿರುವ ಅಮೆರಿಕವು, ಸೂಕ್ತವಾದ, ಸುರಕ್ಷಿತವಾದ, ನ್ಯಾಯಯುತವಾದ ಪರ್ಯಾಯ ವ್ಯವಸ್ಥೆ ಆಗುವವರೆಗೂ ವೆನೆಜುವೆಲಾದ ಆಡಳಿತವನ್ನು ತಾನೇ ನಡೆಸುವುದಾಗಿ ಘೋಷಿಸಿದೆ. ತಾವು ಈ ಹಿಂದೆ ಬೆಂಬಲಿಸಿದ್ದ ಮತ್ತು ಅಮೆರಿಕ ಪರ ನಿಲುವು ಹೊಂದಿದ್ದ ವೆನೆಜುವೆಲಾ ವಿರೋಧ ಪಕ್ಷದ (ವೆಂಟೆ ವೆನೆಜುವೆಲಾ) ನಾಯಕಿ ಮಚಾದೊ ಅವರು ಪ್ರಸ್ತುತ ದೇಶದ ಜನರ ವಿಶ್ವಾಸ ಉಳಿಸಿಕೊಂಡಿಲ್ಲ ಎಂದೂ ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ. ಮಡೂರೊ ಅವರನ್ನು ಅಮೆರಿಕವು ಮಾದಕ ವಸ್ತುಗಳಿಗೆ ಸಂಬಂಧಿಸಿದ ನ್ಯಾಯಾಲಯದಲ್ಲಿ ಶೀಘ್ರದಲ್ಲೇ ಹಾಜರುಪಡಿಸುವ ಸಾಧ್ಯತೆ ಇದೆ.

ವೆನೆಜುವೆಲಾದ ಸುಪ್ರೀಂ ಕೋರ್ಟ್, ಉಪಾಧ್ಯಕ್ಷ ಡೆಲ್ಸಿ ರಾಡ್ರಿಗಸ್ ಅವರನ್ನು ಮಧ್ಯಂತರ ಅಧ್ಯಕ್ಷರಾಗಿ ನೇಮಿಸಿದೆ. ತಾವು ಯಾವುದೇ ದೇಶದ ವಸಾಹತು ಆಗಿರಲು ಇಷ್ಟಪಡುವುದಿಲ್ಲ, ಮಡೂರೊ ಅವರು ಮಾತ್ರವೇ ನಮ್ಮ ಅಧ್ಯಕ್ಷರು ಎಂದು ರಾಡ್ರಿಗಸ್ ಹೇಳಿದ್ದಾರೆ. ಈ ಮೂಲಕ ಅಮೆರಿಕದೊಂದಿಗೆ ಕೈ ಜೋಡಿಸುವ ಸಾಧ್ಯತೆಯನ್ನು ಅವರು ನಿರಾಕರಿಸಿದ್ದಾರೆ. ಕೆರೀಬಿಯನ್ ಸಮುದ್ರದಲ್ಲಿ ಅಮೆರಿಕ ನಿಯೋಜಿಸಿರುವ ಸೇನೆಗೆ ಪ್ರತಿಯಾಗಿ ವೆನೆಜುವೆಲಾವೂ ತನ್ನ ನೆಲದಲ್ಲಿ ಸೇನೆ ನಿಯೋಜಿಸಿದೆ.

ವೆನೆಜುವೆಲಾದಲ್ಲಿ ತಾವೇ ಆಡಳಿತ ನಡೆಸುತ್ತೇವೆ ಎನ್ನುವ ಟ್ರಂಪ್ ಹೇಳಿಕೆಗೆ ಪೂರಕ ವಾತಾವರಣವು ಸದ್ಯ ಅಲ್ಲಿ ಕಾಣುತ್ತಿಲ್ಲ. ಅದು ವೆನೆಜುವೆಲಾದಲ್ಲಿ ಹೇಗೆ ಆಡಳಿತ ನಡೆಸಲಿದೆ, ಸೇನಾ ಕಾರ್ಯಾಚರಣೆ ಆರಂಭಿಸುವುದೇ, ಮಡೂರೊ ಅವರಿಗೆ ನಿಷ್ಠವಾಗಿದ್ದ ವೆನೆಜುವೆಲಾದ ಸೇನೆ ಈಗ ಯಾವ ನಿಲುವು ತಳೆಯಲಿದೆ ಎಂಬ ಪ್ರಶ್ನೆಗಳು ಹುಟ್ಟಿಕೊಂಡಿವೆ.


ನಿಕೊಲಸ್ ಮಡೂರೊ

'ದೊಡ್ಡಣ್ಣ'ನ ಹಳೇ ಚಾಳಿ

- ಸ್ವತಂತ್ರ ರಾಷ್ಟ್ರಗಳ ಆಂತರಿಕ ರಾಜಕೀಯದಲ್ಲಿ ಮೂಗುತೂರಿಸುವುದು ಅಮೆರಿಕದ ಹಳೇ ಚಾಳಿ. 120 ವರ್ಷಗಳಲ್ಲಿ ಸುಮಾರು 35 ರಾಷ್ಟ್ರಗಳಲ್ಲಿನ ಸರ್ಕಾರವನ್ನು ಅಮೆರಿಕ ಉರುಳಿಸಿದೆ. ಅದಕ್ಕೆ ಹೊಸ ಸೇರ್ಪಡೆ ವೆನೆಜುವೆಲಾ
- 25 ವರ್ಷಗಳಲ್ಲಿ ಅಮೆರಿಕವು ಮೂರು ರಾಷ್ಟ್ರಗಳ ಆಂತರಿಕ ರಾಜಕೀಯದಲ್ಲಿ ಮಧ್ಯಪ್ರವೇಶಿಸಿ, ಅಲ್ಲಿನ ಸರ್ಕಾರವು ಪತನವಾಗುವಂತೆ ಮಾಡಿದೆ. ಹಿಂಸಾಚಾರ, ಅಶಾಂತಿಯ ಕಾರಣವನ್ನು ಮುಂದೊಡ್ಡಿ ತನ್ನ ಸೈನ್ಯವನ್ನು ಕಳುಹಿಸಿ, ಯುದ್ಧದ ಮೂಲಕ ಸರ್ಕಾರವನ್ನು ಉರುಳಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದಾಗಿ ಹೇಳುತ್ತಾ ಬೇರೆಯವರಿಗೆ ಆಡಳಿತವನ್ನು ಹಸ್ತಾಂತರಿಸುವುದು ಅಮೆರಿಕ ಪಾಲಿಸಿಕೊಂಡು ಬಂದಿರುವ ಕ್ರಮ
- 2001ರಲ್ಲಿ ತಾಲಿಬಾನ್ ಆಡಳಿತವಿದ್ದ ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ಗೆ ನುಗ್ಗಿದ ಅಮೆರಿಕ ಬೆಂಬಲಿತ ಸೇನಾ ಪಡೆಗಳು ಕೆಲವು ವಾರಗಳವರೆಗೆ ಕಾರ್ಯಾಚರಣೆ ನಡೆಸಿ ತಾಲಿಬಾನ್ ಆಡಳಿತವನ್ನು ಕಿತ್ತೆಸೆದವು. ಅಮೆರಿಕ ಬೆಂಬಲದಿಂದ ಹಮೀದ್ ಕರ್ಜೈ ನೇತೃತ್ವದ ಸರ್ಕಾರವು ಅಲ್ಲಿ ಸ್ಥಾಪನೆಯಾಯಿತು. ಆದರೆ, ಎರಡು ದಶಕಗಳ ಬಳಿಕ ಅಲ್ಲಿ ಮತ್ತೆ ತಾಲಿಬಾನ್ ಅಧಿಕಾರಕ್ಕೆ ಬಂದಿದೆ
- 2003ರಲ್ಲಿ ಇರಾಕ್‌ನಲ್ಲೂ ಸದ್ದಾಂ ಹುಸೇನ್ ಆಡಳಿತದ ವಿರುದ್ಧ ಅಮೆರಿಕ ಇದೇ ರೀತಿಯ ಕಾರ್ಯಾಚರಣೆ ನಡೆಸಿ, ಸದ್ದಾಂ ಅವರ ಆಡಳಿತವನ್ನು ಕೊನೆಗೊಳಿಸಿ, ಅವರನ್ನು ಬಂಧಿಸಿತ್ತು. ಅಲ್ಲಿ ಪ್ರಜಾಪ್ರಭುತ್ವ ಸರ್ಕಾರವನ್ನು ಸ್ಥಾಪಿಸುವ ಭರವಸೆಯನ್ನು ಅಮೆರಿಕ ನೀಡಿತ್ತು. ಆದರೆ, ನಾಗರಿಕ ಯುದ್ಧ, ರಾಜಕೀಯ ಅಸ್ಥಿರತೆಯಿಂದ ತತ್ತರಿಸಿರುವ ಅಲ್ಲೀಗ ಇಸ್ಲಾಮಿಕ್ ಸ್ಟೇಟ್ ಎಂಬ ಭಯೋತ್ಪಾದನಾ ಸಂಘಟನೆ ತಲೆ ಎತ್ತಿ, ಇಡೀ ಪಶ್ಚಿಮ ಏಷ್ಯಾದ ಭದ್ರತೆಗೇ ಸವಾಲಾಗಿದೆ
- 2011ರಲ್ಲಿ ಲಿಬಿಯಾದಲ್ಲಿ ನಾಗರಿಕ ಯುದ್ಧ ನಡೆಯುತ್ತಿದ್ದಾಗ ಅಮೆರಿಕ ಬೆಂಬಲಿತ ನ್ಯಾಟೊ ಪಡೆಗಳು ಮಧ್ಯಪ್ರವೇಶಿಸಿ ಮುಅಮ್ಮರ್ ಗಡಾಫಿ ನೇತೃತ್ವದ ಸರ್ಕಾರವನ್ನು ಉರುಳಿಸಿದ್ದವು. ಆ ಕಾರ್ಯಾಚರಣೆಯಲ್ಲಿ ಗಡಾಫಿ ಅವರು ಮೃತಪಟ್ಟಿದ್ದರು. ಈಗಲೂ ಅಲ್ಲಿನ ರಾಜಕೀಯ ಸ್ಥಿತಿ ಸ್ಥಿರವಾಗಿಲ್ಲ. ನ್ಯಾಯ ಸಮ್ಮತ ಚುನಾವಣೆ ನಡೆಸುವ ಪ್ರಯತ್ನಗಳು ಸಫಲವಾಗಿಲ್ಲ
- ಇದಲ್ಲದೇ, ತನ್ನ ಗುಪ್ತಚರ ಸಂಸ್ಥೆ ಸಿಐಎಯನ್ನು ಬಳಸಿಕೊಂಡು ಕೆಲವು ದೇಶಗಳಲ್ಲಿ ಕ್ಷಿಪ್ರಕ್ರಾಂತಿ ನಡೆಸಿ, ಅಲ್ಲಿನ ಸರ್ಕಾರ ಉರುಳಿಸಿರುವ ಆರೋಪವೂ ಅಮೆರಿಕದ ಮೇಲಿದೆ



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾವಿ ಬಟ್ಟೆ ಧರಿಸಿದ ವ್ಯಕ್ತಿಯನ್ನು ಗುಂಪೊಂದು ಥಳಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಾಂಗ್ಲಾದಲ್ಲಿ ಹಿಂದೂ ಸನ್ಯಾಸಿಯ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೊ ಇದಾಗಿದ್ದು, ಅಲ್ಲಿನ ಹಿಂದೂಗಳ ಬಗ್ಗೆ ಯಾರೂ ಗಮನ ಹರಿಸುತ್ತಿಲ್ಲ ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಅವುಗಳನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದು ಇನ್‌ಸ್ಟಾಗ್ರಾಂನಲ್ಲಿ 2025ರ ಡಿ.1ರಂದು ಅಪ್‌ಲೋಡ್ ಮಾಡಲಾದ ವಿಡಿಯೊಕ್ಕೆ ಸಂಪರ್ಕ ಕಲ್ಪಿಸಿತು. 'ಮಕ್ಕಳ ಅಪಹರಣಕಾರ ಬಾಬಾ ಮೂರು ವರ್ಷದ ಮಗುವನ್ನು ಕದ್ದೊಯ್ದಿದ್ದಾರೆ, ಟಂಡ್ ರೈಲು ನಿಲ್ದಾಣ' ಎಂದು ವಿಡಿಯೊ ಕೆಳಗೆ ಅಡಿಟಿಪ್ಪಣಿ ಇದೆ. ಆ ವಿಡಿಯೊ ಹಂಚಿಕೊಂಡಿರುವ ಬಳಕೆದಾರನೇ ಮತ್ತೊಂದು ವಿಡಿಯೊ ಹಂಚಿಕೊಂಡಿದ್ದು, ಅದರಲ್ಲಿ ಬಾಬಾ ಬಗ್ಗೆ ಪಂಜಾಬಿ ಪತ್ರಕರ್ತರೊಬ್ಬರು ಮಾತನಾಡಿದ್ದಾರೆ. ಹೋಷಿಯಾರ್‌ಪುರದ ಊರ್ಮರ್ ಟಂಡ್ ರೈಲು ನಿಲ್ದಾಣದಲ್ಲಿ ಬಾಬಾ ಮೂರು ದಿನದ ಹಿಂದೆ ಮಗುವನ್ನು ಅಪಹರಣ ಮಾಡಲು ಯತ್ನಿಸಿದ್ದು, ಅವರ ಮೇಲೆ ಸ್ಥಳೀಯರು ಹಲ್ಲೆ ನಡೆಸಿದರು ಎಂದು ವಿವರಿಸಿದ್ದಾರೆ. ಇದನ್ನು ಬಾಂಗ್ಲಾದ ವಿಡಿಯೊ ಎಂದು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಯಮ ನಿಯಮದ ಮಹತ್ವ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ತನುವರಿಯದ ನೋವಿಲ್ಲ, ಮನವರಿಯದ ಪಾಪವಿಲ್ಲ ಎಂಬ ಮಾತಿದೆ. ಮನುಷ್ಯನ ದೇಹವನ್ನು ಮೂಳೆ ಮಾಂಸದ ತಡಿಕೆ ಎಂದು ಕರೆಯಲಾಗಿದೆ. ಜೀವವನ್ನು ಹೊತ್ತು ನಡೆಯುವ ಈ ದೇಹವನ್ನು ನಾನಾ ಬಗೆಯಲ್ಲಿ ದಂಡಿಸುವವರಿದ್ದಾರೆ. ಯೋಗದಿಂದ ಮನಸ್ಸಿನ ಏಕಾಗ್ರತೆಯನ್ನು ಸಾಧಿಸಬಹುದು ಎಂದು ಹೇಳುತ್ತಾರೆ. ಯೋಗದ ಎಂಟು ಅವಯವಗಳಲ್ಲಿ ಮೊದಲ ಎರಡರ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದೆ ಮೂರನೆಯದಾದ ಆಸನದ ಬಗ್ಗೆಯೇ ಹೆಚ್ಚು ಆಸಕ್ತಿ, ಪ್ರಚಾರ ಕಂಡು ಬರುತ್ತಿದೆ. ಜಾಗತಿಕವಾಗಿ ಯೋಗ ದಿನಾಚರಣೆ ಶುರುವಾದ ಮೇಲಂತೂ ಅದು ರಾಜಕೀಯ ಹಿತಾಸಕ್ತಿ ರಕ್ಷಣೆಯ ಸಾಧನವಾಗಿಯೂ ಬಳಕೆಯಾಗುತ್ತಿದೆ. ಸಿಕ್ಸ್ ಪ್ಯಾಕ್, ಎಯ್ಟ್ ಪ್ಯಾಕ್ ಎಂದು ಜಿಮ್‌ನಲ್ಲಿ ಬೆವರು ಸುರಿಸುವವರಿಂದ ಹಿಡಿದು ವಿವಿಧ ಭಂಗಿಗಳಲ್ಲಿ ಆಸನ ಮಾಡುವವರಿಗೆ ದೇಹದ ನಾದ ಮತ್ತು ಲಯಗಳು ಅರ್ಥವಾಗಿರಬಹುದೇ? ಕಷ್ಟ ನಿಜ.

ಒಂದು ನಿರ್ದಿಷ್ಟ ಹಂತದವರೆಗೆ ದೇಹವು ಮನುಷ್ಯ ಹೇಳಿದಂತೆ ಕೇಳಬಹುದೇನೋ! ಆದರೆ ಆ ಹಂತ ದಾಟಿತೆಂದರೆ ದೇಹ ಹೇಳಿದಂತೆ ಮನುಷ್ಯ ಕೇಳಲೇ ಬೇಕು. ಕಾಲ ಕಳೆದ ಹಾಗೆ ದೇಹದ ಬೇರೆ ಬೇರೆ ಅಂಗಗಳು ಮಾತಾಡಲಾರಂಭಿಸುತ್ತವೆ. ಅವುಗಳನ್ನು ಗಮನವಿಟ್ಟು ಕೇಳಿಸಿಕೊಳ್ಳಬೇಕು. ನಲವತ್ತರ ನಂತರ ಓಡೋಡಿ ಹೋಗಿ ಬಸ್ ಹತ್ತಲಾಗುವುದಿಲ್ಲ. ನಿಂತು ಪ್ರಯಾಣಿಸಲು ದೇಹ ಸಹಕರಿಸುವುದಿಲ್ಲ. ಮುಂದಿನ ಬಸ್ಸಿಗೆ ಹೋದರಾಯಿತು ಅನಿಸುತ್ತದೆ. ಮಹಡಿ ಮೆಟ್ಟಿಲನು ಹತ್ತುವಾಗ ಯಾಕೋ ಏನೋ ಎಂದಿಲ್ಲದ ಸುಸ್ತು. ಇದು ದೇಹ ಲಯವರಿತು ನಡೆಯುವ ವಿಧಾನ. ಬರುಬರುತ್ತಾ ಅಂಗಾಲು ಉರಿಯುತ್ತವೆ. ಮಂಡಿಗಳು ಸಡಿಲವಾದ ಅನುಭವ. ಸ್ವಲ್ಪ ಹೆಚ್ಚು ಕಡಿಮೆ ತಿಂದರೂ ಹೊಟ್ಟೆಯಲ್ಲಿ ಅಸಹಕಾರ ಶುರು. ಎದೆಯಲ್ಲಿ ಎಂಥದೋ ನೋವು. ನೀರಿನಲ್ಲಿ ಚೂರು ವ್ಯತ್ಯಾಸವಾದರೆ ಗಂಟಲು ಕೈಕೊಟ್ಟು ಮೂಗು ಮುನಿಸಿಕೊಳ್ಳುತ್ತದೆ. ಕಣ್ಣುಗಳಲ್ಲಿ ಸುಮ್ಮನೇ ನೀರು ತುಂಬಿಕೊಂಡು ದೃಷ್ಟಿ ಮಂದವಾಗುತ್ತದೆ. ಊಟ ಮಾಡಿದ್ದೂ ಮರೆತು ಹೋಗುತ್ತದೆ. ಹೀಗೆ ಪ್ರತಿ ಅಂಗವೂ ಏನನ್ನೋ ಕೇಳುತ್ತದೆ, ಆಲಿಸಬೇಕು. ಮತ್ತೇನನ್ನೋ ಸೂಚಿಸುತ್ತದೆ, ಅದನ್ನು ಪೂರೈಸಬೇಕು. ದೇಹದ ನಾದ ಲಯಗಳನ್ನು ಅರಿತುಕೊಳ್ಳುವ ಹೊತ್ತು ಇದೇ. ಉಪೇಕ್ಷಿಸಿದರೆ ಆಗುವ ಅನಾಹುತ ದೊಡ್ಡದು. ಮನುಷ್ಯನ ದೇಹ ಸ್ಟ್ರಾಂಗ್ ಅಲ್ಲವೇ ಅಲ್ಲ. ಅದನ್ನು ಇಲ್ಲವಾಗಿಸಲು ಹುಲಿಸಿಂಹಗಳೇ ಎರಗಬೇಕೆಂದಿಲ್ಲ. ಒಂದು ಸೊಳ್ಳೆ ಸಾಕು. ಬರಿಗಣ್ಣಿಗೆ ಕಾಣದ ಕೊರೊನಾ ವೈರಸ್ ಸಾವಿರಾರು ಜೀವಗಳನ್ನು ಬಲಿ ಪಡೆದದ್ದು ಗೊತ್ತೇ ಇದೆ.

ದೇಹವನ್ನು ದಂಡಿಸಿಕೊಂಡು ವಜ್ರಕಾಯನಾದ ಗೋರಕ್ಷನಿಗೆ ಅಲ್ಲಮನ ಸವಾಲು ದಿಗಿಲು ಹುಟ್ಟಿಸುತ್ತದೆ. ತನ್ನ ದೇಹಕ್ಕೆ ಹರಿತವಾದ ಕತ್ತಿ ಬೀಸಿದರೆ ಉಕ್ಕಿನಂತೆ ಸದ್ದಾಗಿ ಪುಟಿದು ಬರುತ್ತದೆ. ಅದೇ ಅಲ್ಲಮನ ದೇಹಕ್ಕೆ ಕತ್ತಿ ತಾಗುವುದೇ ಇಲ್ಲ. ಗಾಳಿಯಲ್ಲಿ ಬೀಸಿದಂತಾಗುತ್ತದೆ. ಯೋಗದ ಅಲ್ಪ ಸಾಧನೆಗಿಂತ ಆತ್ಮದ ಅಹಂಕಾರವನ್ನು ಜಯಿಸುವುದು ಮುಖ್ಯ ಎಂದು ಗೋರಕ್ಷನಿಗೆ ಅರಿವಾಗುತ್ತದೆ. ಯೋಗದ ಆಸನಗಳನ್ನು ಸಾಧನೆ ಎಂದುಡವರು ಮೊದಲೆರಡು ಅಂಗಗಳನ್ನು ಪ್ರಜ್ಞಾಪೂರ್ವಕವಾಗಿ ಉಪೇಕ್ಷಿಸುತ್ತಾರೆಯೇ? ಹೌದೆನ್ನುತ್ತದೆ ಮನಃಶಾಸ್ತ್ರ. ಯಾಕೆಂದರೆ ಯೋಗದ ಮೊದಲೆರಡು ಅಂಗಗಳಾದ ಯಮ, ನಿಯಮಗಳನ್ನು ಸಾಧಿಸುವುದು ಕಷ್ಟಸಾಧ್ಯ. ಕೊಲ್ಲದ, ಕದಿಯದ, ಹುಸಿಯಾಡದ, ಪರವಧು, ಪರಧನವನ್ನು ಬಯಸದ, ಸರ್ವೇಂದ್ರಿಯ ನಿಗ್ರಹ ಸಾಮರ್ಥ್ಯವೇ ಯಮ. ತನ್ನನ್ನು ತಾನರಿಯುತ್ತಾ ಆತ್ಮವನ್ನು ಶುದ್ಧೀಕರಿಸಿಕೊಳ್ಳುವುದು ನಿಯಮ. ಇದು ಕಷ್ಟವೆಂದೇ ಆಸನ ಭಂಗಿಗಳನ್ನು ಸಾಧನೆಗಳೆಂದು ಭ್ರಮಿಸಲಾಗಿದೆ. ನಾಲ್ಕನೆಯ ಅಂಗವಾದ ಪ್ರಾಣಾಯಾಮವನ್ನು ಕೂಡ ಸರಳೀಕರಿಸಲಾಗಿದೆ. ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಗಳು ಬಹುಪಾಲು ನಿರ್ಲಕ್ಷ್ಯಕ್ಕೊಳಗಾಗಿವೆ. ಕೆಲವರಿಗಂತೂ ಯೋಗಾಸನವು ಸಾಂಸಾರಿಕ ಹೊಣೆಗಾರಿಕೆಗಳನ್ನು ಮರೆಸುವುದಕ್ಕೆ ಅಗತ್ಯವಾದ ಭೂಮಿಕೆಯಾಗಿದೆ. ಆದ ಕಾರಣ ಯೋಗವು ಯಮನಿಯಮಗಳ ಮೂಲಕವೇ ಲೋಕೋಪಯೋಗಿಯಾಗುವ ಎತ್ತರದ ನೈತಿಕತೆಯ ದ್ಯೋತಕವಾಗಿ ಪ್ರಚುರಗೊಳ್ಳಬೇಕು. ಯಮನಿಯಮಗಳೇ ಯೋಗದ ಸಮಾಜನಿಷ್ಠೆಯ ತಾತ್ವಿಕ ಕ್ರಿಯಾಕೇಂದ್ರವಾಗಬೇಕು. ❖

ಗುಂಡಣ್ಣ

ಪದಬಂಧ 6275

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಅವನ ಲೋಕವನ್ನು ನೋಡುವುದು! (5)
5.ತಂದೆಯ ಅಥವಾ ತಾಯಿಯ ತಂದೆ (2)
6.ಕಡಲ ಹತ್ತಿರ ಪಡೆದುಕೊಂಡಿರುವ ಸಾಲ (2)
7.ರಕ್ತ ಹರಿಯುವ ನಾಳ (3)
8.ಕೊಡದಂತಿರುವ ದೊಡ್ಡ ಪಾತ್ರೆ (3)
10.ಕ್ರಮ ಅಥವಾ ರೂಢಿ (2)
11.ಮಣಿ ಧರಿಸಿರುವ ನಲ್ಲೆ (3)
12.ನೀರು ತರುತ್ತಿರುವ ಚಲುವೆ ತಿರುಗಿದ್ದಾಳಲ್ಲಾ! (2)
13.ಆತಂಕ ಹುಟ್ಟಿಸಿದ ಕೊಲೆಗಾರ (3)
15.ಕಣದಲ್ಲಿ ನಡೆದ ಮದುವೆ (3)
16.ನೆನಪಿನಿಂದ ಮಾಸದ ತಿಂಗಳು (2)
17.ಏಳು ದಿನಗಳ ಅವಧಿ (2)
19.ಕಳೆಯುವ ಲೆಕ್ಕವಿದು (5)

ಮೇಲಿಂದ ಕೆಳಕ್ಕೆ

2.ಈತ ಶ್ರೇಷ್ಠನಾದ ಕವಿ (4)
3.ಹಸುವಿನ ಮರಿ (2)
4.ಪ್ರೇಮಿಗಳ ಅಗಲಿಕೆಯ ನೋವು (3)
5.ನಿರೀಕ್ಷಿಸದೆ ಉಂಟಾದುದು (5)
7.ಧಣಿ ನಿಂತಿರುವ ಭೂಮಿ (3)
9.ಚಂದ್ರನನ್ನು ಹೀಗೂ ಕರೆಯುತ್ತಾರೆ (5)
11.ಮಣ ಭಾರ ಹೊತ್ತಿರುವ ನಲ್ಲ (3)
13.ಹಂಸಪಕ್ಷಿಯ ತುಪ್ಪುಳು (4)
14.ಭೀಕರವಾದ ಕೊಲೆ (3)
18.ವರನಿಗೆ ಕೇಳಿದ ಧ್ವನಿ (2)

6274ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವರಮಾನ 3.ವನ್ಯಮೃಗ 5.ದುರಾಸೆ 6.ರವಾನೆ 8.ಪ್ರವರ 10.ಮಂಕರಿ 11.ಸರಕು 13.ಕಳಸ 15.ಸಹೋದರಿ 16.ಪರದಾಟ

ಮೇಲಿಂದ ಕೆಳಕ್ಕೆ: 1.ವನಚರ 2.ನಗದು 3.ವರಸೆ 4.ಗಡಿಯಾರ 7.ವಾದಕ 9.ವಕ್ತಾರ 10.ಮಂದಹಾಸ 12.ಕುಡಿನೋಟ 13.ಕಮರಿ 14.ಸಲ್ಲಾಪ

ಸುಡೊಕು 6659

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			3		4		6
4		1	5		2			
				4			5	1
	9				4	6		
6		2		8				5
		4	2			3		
				2				9
	1	3	8		5		6	
9	4		6		3	8		

6658 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

05 ಜನವರಿ 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ದ್ವಿತೀಯ ಗಂ 9-57 **ನಕ್ಷತ್ರ:** ಪುಷ್ಯ ಗಂ 13-25 **ಯೋಗ:** ವಿಷ್ಕಂಭ ಗಂ. 22-47 **ಕರಣ:** ಗರ ಗಂ. 9-57 ನಂತರ, ವಣಿಜ ಗಂ 20-54 ಧನು ಮಾಸದ 21 ನೇ ದಿನ. **ಮಳೆ ನಕ್ಷತ್ರ:** ಪೂರ್ವಾಷಾಢ 3 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 - 09-00, **ಸೂರ್ಯೋದಯ:** 06-59 **ಸೂರ್ಯಾಸ್ತ:** 06-13, **ಮುಸ್ಲಿಂ ದಿನಾಂಕ:** 15 ರಜಬ್, **ಅದೃಷ್ಟ ಸಂಖ್ಯೆ:** 5, 3

ಮೇಷ: ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ. ತಾಯಿಯವರ ಆರೋಗ್ಯ ಸುಧಾರಿಸಿ ಆಸ್ಪತ್ರೆಯಿಂದ ಮನೆಗೆ ಬರುವಂತಾಗಲಿದೆ.

ವೃಷಭ: ವಿದ್ಯಾರ್ಥಿಗಳು ಹೆಚ್ಚಿನ ಶ್ರಮದಿಂದ ಉತ್ತಮ ಅಂಕಗಳನ್ನು ಗಳಿಸುವಲ್ಲಿ ಯಶಸ್ವಿಯಾಗುವಿರಿ. ವೃತ್ತಿಯಲ್ಲಿ ಸಾಕಷ್ಟು ಸುಸಂದರ್ಭಗಳು ಎದುರಾಗಲಿವೆ. ಅಧಿಕಾರಿಗಳ ವಿಶ್ವಾಸಗಳಿಸಲು ಪ್ರಯತ್ನಿಸಿ.

ಮಿಥುನ: ಹಿರಿಯರು ಮೊದಲಿನಿಂದ ಕುಟುಂಬದಲ್ಲಿ ನಡೆಸಿಕೊಂಡು ಬಂದ ಧಾರ್ಮಿಕ ವಿಧಿವಿಧಾನವನ್ನು ಆಚರಿಸುವ ಬಗ್ಗೆ ತೀರ್ಮಾನಿಸಿ. ಜೀವನದ ಶೈಲಿಯಲ್ಲಿ ಬದಲಾವಣೆಯ ಗಾಳಿ ಬೀಸಲು ಆರಂಭಿಸುತ್ತದೆ.

ಕರ್ಕಾಟಕ: ವಾಹನ ಮಾರಾಟಗಾರರಿಗೆ ಹಾಗೂ ರಿಪೇರಿ ಮಾಡುವವರಿಗೆ ಉದ್ಯೋಗದಲ್ಲಿ ಬಿಡುವಿಲ್ಲದ ಕಾರ್ಯ. ಆಯುರ್ವೇದದ ಪ್ರಭಾವದಿಂದ ಆರೋಗ್ಯದಲ್ಲಿ ಸುಧಾರಣೆ. ಕೆಲಸಗಳಲ್ಲಿ ಆಸಕ್ತಿ ವೃದ್ಧಿ.

ಸಿಂಹ: ವಾಣಿಜ್ಯೋದ್ಯಮ ಮಂದಿಗೆ ಬಂಡವಾಳ ತೊಡಗಿಸಲು ಉತ್ತಮ ದಿನ. ಕೃಷಿ ಕಾರ್ಯವು ವಿಳಂಬವಾಗದಂತೆ ಕೃಷಿಕರು ಗಮನವಹಿಸಿ. ಆರೋಗ್ಯದ ವಿಚಾರದಲ್ಲಿ ಅಸಡ್ಡೆ ತೋರದಿರಿ. ಮುಖ್ಯ ಕೆಲಸಗಳಿಗೆ ಆಪ್ತರ ಸಲಹೆ ಅಗತ್ಯ.

ಕನ್ಯಾ: ಹಾದಿಯಲ್ಲಿ ಹೋಗುವ ಸಮಸ್ಯೆಯನ್ನು ಮೈ ಮೇಲೆ ಎಳೆದುಕೊಳ್ಳು-ವಂಥ ಘಟನೆಯೊಂದು ನಡೆಯುವುದು. ಕ್ರಿಯಾತ್ಮಕ ಬರವಣಿಗೆಯಿಂದ ಏಳಿಗೆ ದೊರಕುವುದು. ಅಪರೂಪದ ಸಮಾರಂಭಕ್ಕೆ ಆಹ್ವಾನ ಬರುವುದು.

ತುಲಾ: ದೈನಂದಿನ ಖರ್ಚು-ವೆಚ್ಚಗಳಿಗೆ ಹಾಗೂ ಜೀವನೋಪಾಯಕ್ಕೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವಿರಿ. ಯೋಜನೆಗಳು ಸರಿಯಾದ ಹಾದಿಯಲ್ಲಿ ಸಾಗುತ್ತಿರುವುದರಿಂದ ಸಮಾಧಾನ ಇರಲಿದೆ.

ವೃಶ್ಚಿಕ: ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ ಅಥವಾ ಬಂಧುಮಿತ್ರರು ಮನೆಗೆ ಬರಲಿದ್ದಾರೆ. ಗೃಹ ನಿರ್ಮಾಣ ಕಾರ್ಯಕ್ಕೆ ಆರ್ಥಿಕತೆಯ ಅಭಾವ ಸ್ಥಿತಿ ಎದುರಾಗಬಹುದು. ಪರಿಣಾಮವಾಗಿ ಮನಸ್ಸಿನಲ್ಲಿ ಹೆದರಿಕೆ ಮೂಡಲಿದೆ.

ಧನು: ಪದವೀಧರರಿಗೆ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ ಕಂಡುಬರಲಿದೆ. ರಫ್ತು ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದುವಿರಿ. ಬೇರೆ ಯಾರಿಗೂ ಯೋಜನೆಯ ಸುಳಿವು ಸಿಗದಂತೆ ಗೌಪ್ಯತೆ ಕಾಪಾಡಿ.

ಮಕರ: ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದು ಮಾರ್ಗದರ್ಶಿ ಮಾತಿನಂತೆ ಧಾರ್ಮಿಕ ಚುಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಕೃಷಿ ಹಾಗೂ ಹೈನು ವ್ಯಾಪಾರಗಳಿಂದ ಅಧಿಕ ಲಾಭ.

ಕುಂಭ: ಹಲವು ಅವಕಾಶಗಳಿಂದ ಗೊಂದಲಕ್ಕೆ ಈಡಾಗುವಿರಿ. ವ್ಯವಹಾರ ಚಾಣಾಕ್ಷತನಕ್ಕೆ, ಕ್ರಿಯಾಶೀಲತೆಗೆ ಸರಿಯಾಗಿ ಲಾಭವಾಗುವುದು. ಚಿನ್ನ ಮಾರಾಟಗಾರರಿಗೆ ಶುಭ ದಿನ.

ಮೀನ: ವ್ಯಾಪಾರ ವಿಷಯಗಳ ಸಂಬಂಧದಲ್ಲಿ ಕ್ಲಿಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಅಂತರಂಗದ ಭಾವನೆಗಳಿಗೆ ಆದ್ಯತೆ ನೀಡಿ. ದೇಹಕ್ಕೆ ಅತಿ ಶ್ರಮವಾದರೂ ಇಷ್ಟ ಪ್ರಾಪ್ತಿಗಾಗಿ ಕಾರ್ಯ ಸಾಧಿಸಿದ ಸಂತೋಷ ಇರುವುದು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಸಿ. ಅಪ್ಪಾಜಿ
(ಮಾಜಿ ಶಾಸಕರು, ಕನಕಪುರ)

ನಮ್ಮ ಇಂದಿನ ಜೀವನ ನಿಮ್ಮ ಅಂದಿನ ಆದರ್ಶ ಜೀವನದ ಹಾದಿಯಲ್ಲಿ ಸಾಗುತ್ತಿದ್ದೂ, ನೀವು ಇಂದಿಗೂ ನಮ್ಮ ಜೀವನದ ಪ್ರತಿ ಹಂತದಲ್ಲೂ ಸ್ಫೂರ್ತಿದಾಯಕವಾಗಿ ನಮ್ಮ ಬಾಳಿಗೆ ನಂದಾದೀಪವಾಗಿ ಪ್ರಜ್ವಲಿಸುತ್ತಿದ್ದೀರಿ.

ಮಗ, ಸೊಸೆ, ಮೊಮ್ಮಕ್ಕಳು ಮತ್ತು ಬಂಧು ಮಿತ್ರರು.

ಸವಿನೆನಪು



ಶ್ರೀ ಕೆ. ಬಿ. ಮಲ್ಲಪ್ಪ
ನಿಧನ: 05-01-2013

ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಅರಕಲಗೂಡು ತಾ|| ಹಾಸನ ಜಿಲ್ಲೆ

ಸದಾ ನಿಮ್ಮ ನೆನಪಿನಲ್ಲಿರುವ...
ಪತ್ನಿ-ಶಾರದಮ್ಮ ಮತ್ತು ಕುಟುಂಬದವರು ಹಾಗೂ ಅಪಾರ ಬಂಧುಮಿತ್ರರು
ಫೋ: 9448134242

ವೈಕುಂಠ ಸಮಾರಾಧನೆ

ಶ್ರೀ ಎಸ್. ಎನ್. ಅಣ್ಣಯ್ಯರೆಡ್ಡಿ ರವರು

ಶ್ರೀನಿವಾಸ ಚಿತ್ರಮಂದಿರದ ಮಾಲೀಕರು, ಸುದ್ದಗುಂಟೆಪಾಳ್ಯ, ಬೆಂಗಳೂರು

ಶ್ರೀನಿವಾಸ ನಿಲಯ, ನಂ. 10/3, 1ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಸುದ್ದಗುಂಟೆ ಪಾಳ್ಯ, ಬೆಂಗಳೂರು-29

ಇವರು ದಿ:26.12.2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 05.01.2026 ಸೋಮವಾರ, ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖಪತ್ತರು: ಪತ್ನಿ- ಶ್ರೀಮತಿ ಕೆ.ಎಂ.ಪುಷ್ಪ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

23ನೇ ವರ್ಷದ ಚಿರಸ್ಮರಣೆ



ಎನ್. ಗೋವಿಂದಯ್ಯ
ಜನನ: 18-09-1936
ಮರಣ: 05-01-2003

ನಿಮ್ಮ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿರುವ

ಶ್ರೀಮತಿ ಅಮ್ಮಯ್ಯಮ್ಮ ಮತ್ತು ಕುಟುಂಬವರ್ಗ

ಬನಶಂಕರಿ ಗ್ರೂಫ್ ಆಫ್ ಕಂಪನೀಸ್ ಸಿಬ್ಬಂದಿ ವರ್ಗ

ಮಾರಾಟವಾಗದ ಮನೆಗಳು 5.77 ಲಕ್ಷ

ನವದೆಹಲಿ (ಪಿಟಿಐ): 2025ರಲ್ಲಿ ದೇಶದ ಏಳು ಪ್ರಮುಖ ನಗರಗಳಲ್ಲಿ ಮಾರಾಟವಾಗದೆ ಉಳಿದ ಮನೆಗಳ ಸಂಖ್ಯೆ 5.77 ಲಕ್ಷ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಹೇಳಿದೆ.

ಇದೇ ಅವಧಿಯಲ್ಲಿ ಬೆಂಗಳೂರಿನಲ್ಲಿ ಮಾರಾಟವಾಗದೆ ಉಳಿದ ಮನೆಗಳ ಪ್ರಮಾಣ ಶೇ 23ರಷ್ಟು ಹೆಚ್ಚಳವಾಗಿದೆ.

2024ರ ಕ್ಯಾಲೆಂಡರ್ ವರ್ಷದಲ್ಲಿ ದೇಶದ ಏಳು ಪ್ರಮುಖ ನಗರಗಳಲ್ಲಿ ಮಾರಾಟವಾಗದೆ ಉಳಿದಿದ್ದ ಮನೆಗಳ ಸಂಖ್ಯೆ 5.53 ಲಕ್ಷ ಆಗಿತ್ತು. ಕಳೆದ ವರ್ಷ ಈ ಸಂಖ್ಯೆಯು 5.76 ಲಕ್ಷಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಮನೆಗಳ ಬೇಡಿಕೆಯು ಮಂದಗತಿಗೆ ತಿರುಗಿದೆ, ಹೊಸ ಮನೆಗಳ ಪೂರೈಕೆಯಲ್ಲಿ ಹೆಚ್ಚಳ ಆಗಿದೆ. ಇವು ಮನೆಗಳು ಮಾರಾಟವಾಗದೇ ಉಳಿಯಲು ಕಾರಣ ಎಂದು ವರದಿ ತಿಳಿಸಿದೆ.

ಮುಂಬೈ ಮಹಾನಗರ ಪ್ರದೇಶ (ಎಂಎಂಆರ್) ಮತ್ತು ಹೈದರಾಬಾದ್‌ನಲ್ಲಿ ಮಾರಾಟವಾಗದ ಮನೆಗಳ ಪ್ರಮಾಣ ಇಳಿಕೆಯಾಗಿದೆ, ದೆಹಲಿ-ಎನ್‌ಸಿಆರ್, ಪುಣೆ, ಚೆನ್ನೈ, ಬೆಂಗಳೂರು ಮತ್ತು ಕೋಲ್ಕತ್ತದಲ್ಲಿ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ ಮಾರಾಟವಾಗದೆ ಉಳಿದ ಮನೆಗಳ ಸಂಖ್ಯೆಯು 64,863ಕ್ಕೆ ಏರಿಕೆ ಆಗಿದೆ. 2024ರಲ್ಲಿ ಇದು 52,807 ಆಗಿತ್ತು. ಪುಣೆ (ಶೇ 3), ಚೆನ್ನೈ (ಶೇ 18) ಮತ್ತು ಕೋಲ್ಕತ್ತದಲ್ಲಿ ಮಾರಾಟವಾಗದೇ ಉಳಿದ ಮನೆಗಳ ಪ್ರಮಾಣ ಶೇ 9 ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹665	100 ಕ್ಕೆ	₹675
12 ಕ್ಕೆ	₹94		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹500-755
ದ್ವಿತಳಿ (ಬಿ.ವಿ)	₹339-902

ಹಣಕಾಸಿನ ಒತ್ತಡಕ್ಕೆ ಒಳಗಾಗುವುದೇಕೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಸಾಕಷ್ಟು ಆದಾಯವಿಲ್ಲದ ಕಾರಣದಿಂದ ಹಣಕಾಸಿನ ಒತ್ತಡ ಉಂಟಾಗುತ್ತದೆ ಎಂದು ಬಹುತೇಕರು ಭಾವಿಸುತ್ತಾರೆ. ಆದರೆ ಅದು ಸತ್ಯವಾಗಿದ್ದರೆ ಹೆಚ್ಚು ಸಂಬಳ ಪಡೆಯುವ ಐ.ಟಿ ಉದ್ಯೋಗಿಗಳು, ವೈದ್ಯರು, ಉದ್ಯಮಗಳ ಮಾಲೀಕರು ದುಡ್ಡಿನ ಒತ್ತಡಕ್ಕೆ ಒಳಗಾಗುತ್ತಿರಲೇ ಇಲ್ಲ ಅಲ್ಲವೇ? ಭಾರತದಲ್ಲಿ ವಿವಿಧ ವೇತನ ವರ್ಗಗಳ ಜನರಲ್ಲಿ ಹಣಕಾಸಿನ ಒತ್ತಡ ವ್ಯಾಪಕವಾಗಿದೆ. ಈಗಷ್ಟೇ ಕಾಲೇಜಿನಿಂದ ಹೊರಬಂದು ಕೆಲಸಕ್ಕೆ ಸೇರಿ ₹25 ಸಾವಿರ ಸಂಬಳ ಪಡೆಯುವವರಿಂದ ಆರಂಭಿಸಿ ತಿಂಗಳಿಗೆ ₹3 ಲಕ್ಷದಿಂದ ₹4 ಲಕ್ಷ ಸಂಬಳ ಪಡೆಯುವವರಿಗೂ ದುಡ್ಡಿನ ತಲೆಬಿಸಿ ಇದ್ದೇ ಇದೆ. ಬಹುತೇಕ ಸಂದರ್ಭಗಳಲ್ಲಿ ಸರಿಯಾದ ಹಣಕಾಸು ಯೋಜನೆ ಇಲ್ಲದ ಕಾರಣ ಜನರು ದುಡ್ಡಿನ ಒತ್ತಡ ಅನುಭವಿಸುತ್ತಾರೆಯೇ ಹೊರತು ಆದಾಯದ ಕೊರತೆಯಿಂದ ಅಲ್ಲ.

ಒತ್ತಡ ಏಕೆ ಉಂಟಾಗುತ್ತದೆ?

ಮಾನಸಿಕ ಕಾರಣಗಳು: ಮನುಷ್ಯನ ಮನಸ್ಸು ಅನಿಶ್ಚಿತತೆಗೆ ತೀವ್ರವಾಗಿ ಪ್ರತಿಕ್ರಿಯಿಸುತ್ತದೆ. ಬರುವ ಆದಾಯ, ವೆಚ್ಚಗಳು, ಹೂಡಿಕೆಗಳು, ಭವಿಷ್ಯದ ಗುರಿಗಳ ಬಗ್ಗೆ ಸ್ಪಷ್ಟತೆ ಇಲ್ಲದಿದ್ದಾಗ ಮಿದುಳು ಅದನ್ನು ಅಪಾಯದ ಸ್ಥಿತಿ ಎಂದು ಭಾವಿಸುತ್ತದೆ. ವಾಸ್ತವದಲ್ಲಿ ತಕ್ಷಣದ ಹಣಕಾಸಿನ ತೊಡಕುಗಳು ಇಲ್ಲದಿದ್ದರೂ ಮನಸ್ಸು ಒತ್ತಡಕ್ಕೆ ಒಳಗಾಗುತ್ತದೆ.

ಮನೋವಿಜ್ಞಾನದ ಪ್ರಕಾರ ಹಣಕಾಸು ನಿರ್ವಹಣೆಗೆ ಸಂಬಂಧಿಸಿದಂತೆ ಮೂರು ರೀತಿಯ ಒತ್ತಡಗಳಿಗೆ ಜನರು ಒಳಗಾಗುತ್ತಾರೆ;

ಹಣಕಾಸು ನಿರ್ವಹಣೆಗೆ 7 ಹಂತಗಳ ಚೌಕಟ್ಟು

1. ನಿಮ್ಮ ಮಾಸಿಕ ಆದಾಯದ ಎಲ್ಲ ಮೂಲಗಳನ್ನು ಕೇಂದ್ರೀಕರಿಸಿ ಲೆಕ್ಕಾಚಾರ ಮಾಡಿ
2. ನಿಮ್ಮ ಪ್ರತಿ ಖರ್ಚುಗಳನ್ನು ನಿಖರವಾಗಿ ಲೆಕ್ಕ ಮಾಡಿ, ಅಂದಾಜಿನ ಲೆಕ್ಕಾಚಾರ ಬಿಡಿ
3. ನಿಮ್ಮ ಉಳಿತಾಯ ಮತ್ತು ಹೂಡಿಕೆಗಳನ್ನು ಸ್ವಯಂ ಚಾಲಿತ ವ್ಯವಸ್ಥೆಗೆ ತನ್ನಿ
4. ಅನಿಶ್ಚಿತ ಸಂದರ್ಭಗಳಿಗೆ ಕನಿಷ್ಠ 6 ತಿಂಗಳ ಖರ್ಚಿನ ಮೊತ್ತ ತುರ್ತು ನಿಧಿಯಲ್ಲಿಟ್ಟುಕೊಳ್ಳಿ
5. ಆರೋಗ್ಯ ಮತ್ತು ಜೀವ ವಿಮೆಗಳಿಗೆ ಆದ್ಯತೆ ಕೊಡುವುದನ್ನು ಮರೆಯದಿರಿ
6. ಮಕ್ಕಳ ವಿದ್ಯಾಭ್ಯಾಸಕ್ಕೆ, ಮನೆ ಖರೀದಿಗೆ, ನಿವೃತ್ತಿಗೆ ಹೀಗೆ ನಿರ್ದಿಷ್ಟ ಗುರಿಯೊಂದಿಗೆ ಹೂಡಿಕೆ ಮಾಡಿ
7. ಪ್ರತಿ ತಿಂಗಳಿಗೊಮ್ಮೆ ನಿಮ್ಮ ಹೂಡಿಕೆಗಳನ್ನು ಪರಾಮರ್ಶಿಸಿ ನೋಡಿ, ಏನಾದರೂ ದಿಕ್ಕುತಪ್ಪುತ್ತಿದ್ದರೆ ಸರಿಪಡಿಸಿ

1. ಸ್ಪಷ್ಟತೆಯ ಭಯ: ಹಣಕಾಸು ನಿರ್ವಹಣೆ ಮಾಡುವಾಗ ಯಾವುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲವೋ ಅದರ ಬಗ್ಗೆ ಜನರು ಹೆಚ್ಚು ಆತಂಕಪಡುತ್ತಾರೆ

2. ನಷ್ಟದ ಭಯ: ಹೂಡಿಕೆ ಮಾಡುವಾಗ 'ಏನಾದರೂ ತಪ್ಪಾದರೆ?' ಎಂಬ ಭಯ ಮನಸ್ಸಿನಲ್ಲಿ ಆಳವಾಗಿ ಬೇರೂರಿ ಆಂತಕ ಹೆಚ್ಚಿಸುತ್ತದೆ

3. ವಿಳಂಬ ಮತ್ತು ಮಾನಸಿಕ ಒತ್ತಡ: ಹಣಕಾಸಿನ ನಿರ್ಣಯಗಳು ಜಟಿಲವಾಗಿದ್ದರೆ, ಜನರು ಅವನ್ನು ಮುಂದೂಡುತ್ತಾರೆ. ಇದರ ಪರಿಣಾಮವಾಗಿ ಅನಿಶ್ಚಿತತೆ ಹೆಚ್ಚುತ್ತದೆ ಮತ್ತು ಹಣಕಾಸಿನ ಒತ್ತಡ ಜಾಸ್ತಿಯಾಗುತ್ತದೆ. ಅಂದರೆ, ಪೂರ್ವ ಯೋಜಿತವಲ್ಲದ ಹಣಕಾಸು ನಿರ್ವಹಣೆ ಮಾನಸಿಕ ಒತ್ತಡವನ್ನು ಉಂಟು ಮಾಡುತ್ತದೆ

ಒಂದೇ ಆದಾಯ, ಆದರೆ ಒತ್ತಡ ಬೇರೆ: ಒಂದೇ ರೀತಿಯ ಸಂಬಳ ಪಡೆಯುವ ಇಬ್ಬರು ವ್ಯಕ್ತಿಗಳು ಒಂದೊಂದು ರೀತಿಯ ಒತ್ತಡ ಎದುರಿಸುತ್ತಿರಬಹುದು. ಬಂದ ಆದಾಯದಲ್ಲಿ ಸರಿಯಾದ ಯೋಜನೆಯೊಂದಿಗೆ ಖರ್ಚು-ವೆಚ್ಚಗಳನ್ನು ಯಾರು ನಿರ್ವಹಿಸುವರೋ ಅವರು ಕಡಿಮೆ ಒತ್ತಡದಲ್ಲಿರುತ್ತಾರೆ ಮತ್ತು ಯಾರು ದುಡ್ಡಿನ ನಿರ್ವಹಣೆಯಲ್ಲಿ ಶಿಸ್ತು ಪಾಲಿಸುವುದಿಲ್ಲವೋ ಅವರು ಮೇಲಿಂದ ಮೇಲೆ ಒತ್ತಡಕ್ಕೆ ಒಳಗಾಗುತ್ತಾರೆ.

ಉದಾಹರಣೆಗೆ ಬೆಂಗಳೂರಿನಲ್ಲಿ ರಮೇಶ್ ಮತ್ತು ರವಿ (ಕಾಲ್ಪನಿಕ ವ್ಯಕ್ತಿಗಳು) ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಅವರ ಮಾಸಿಕ ಸಂಬಳ ₹1 ಲಕ್ಷ ಎಂದು ಭಾವಿಸೋಣ. ರಮೇಶ್ ಮನೆ ಖರೀದಿಗಾಗಿ ಗೃಹ ಸಾಲ ಮಾಡಿದ್ದಾರೆ. ತಿಂಗಳ ಖರ್ಚುಗಳ ಲೆಕ್ಕ ಮಾಡುತ್ತಾರೆ, ಮಕ್ಕಳ ಶಿಕ್ಷಣಕ್ಕಾಗಿ ಮತ್ತು ನಿವೃತ್ತಿ ಜೀವನಕ್ಕಾಗಿ ಹೂಡಿಕೆ ಮಾಡುತ್ತಿದ್ದಾರೆ, ಆರೋಗ್ಯ ಮತ್ತು ಜೀವ ವಿಮೆ ಮಾಡಿಸಿದ್ದಾರೆ ಮತ್ತು 6 ತಿಂಗಳ ತುರ್ತುನಿಧಿ ಕಾಪಾಡಿಕೊಂಡಿದ್ದಾರೆ.

ಆದರೆ, ರವಿ ₹1 ಲಕ್ಷ ಸಂಬಳ ಇದ್ದರೂ ಸರಿಯಾಗಿ ಹಣಕಾಸು ನಿರ್ವಹಣೆ ಮಾಡುತ್ತಿಲ್ಲ. ಪ್ರತಿ ತಿಂಗಳ ಖರ್ಚು - ವೆಚ್ಚಗಳನ್ನು ಅವರು ಪರಿಶೀಲಿಸುತ್ತಿಲ್ಲ, ಸ್ನೇಹಿತರು ಹೇಳುವ ಎಸ್‌ಐಪಿಗಳ ಮೇಲೆ ಅವರು ಹೂಡಿಕೆ ಮಾಡುತ್ತಾರೆ, ನಿವೃತ್ತಿಗಾಗಿ ಮತ್ತು ಭವಿಷ್ಯದ ಗುರಿಗಳಿಗಾಗಿ ಅವರು ಹೂಡಿಕೆ ಮಾಡುತ್ತಿಲ್ಲ, ತುರ್ತು ನಿಧಿಯೂ ಇಲ್ಲ, ಒಳ್ಳೆಯ ಜೀವ ವಿಮೆ ಕೂಡ ಪಡೆದಿಲ್ಲ.

ಒಂದೇ ಕಂಪನಿಯಲ್ಲಿ ಒಂದೇ ಬಗೆಯ ಸಂಬಳ ಪಡೆದರೂ ಹಣಕಾಸಿನ ನಿರ್ವಹಣೆಯ ದಿಕ್ಕು ಸರಿ ಇಲ್ಲದಿದ್ದಾಗ ಹಣಕಾಸಿನ ಒತ್ತಡ ಹೇಗೆ ಭಿನ್ನವಾಗುತ್ತದೆ ಎನ್ನುವುದಕ್ಕೆ ಇದು ನಿದರ್ಶನ.

ಕೊರತೆಯ ಸೂಚನೆಗಳು: ಹಣಕಾಸಿನ ಒತ್ತಡ ಅನುಭವಿಸುವ ಬಹುತೇಕರಿಗೆ ಆದಾಯದ ಕೊರತೆ ಇರುವುದಿಲ್ಲ. ಬದಲಿಗೆ, ಅವರಿಗೆ ಸ್ಪಷ್ಟತೆಯ ಕೊರತೆ ಇರುತ್ತದೆ. ಮಾಸಿಕ ಉಳಿತಾಯದ ಮೇಲೆ ಹೆಚ್ಚಿನ ಗಮನ ನೀಡದೆ ಇರುವುದು, ಖರ್ಚುಗಳನ್ನು ದಾಖಲಿಸದೆ ಮನಸ್ಸಿನಲ್ಲೇ ಅಂದಾಜು ಮಾಡುವುದು, ಹೂಡಿಕೆಗಳನ್ನು ಮಾರುಕಟ್ಟೆ ಕುಸಿತದ ಸಮಯದಲ್ಲಿ ಮಾತ್ರ ಪರಿಶೀಲಿಸುವುದು, ವಿಮಾ ಪಾಲಿಸಿಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು, ಸಾಲದ ಮಾಸಿಕ ಕಂತುಗಳನ್ನು ಸರಿಯಾದ ಸಮಯಕ್ಕೆ ಪಾವತಿಸದಿರುವುದು, ನಿರ್ದಿಷ್ಟ ಗುರಿ ಇಲ್ಲದೆ ಮ್ಯೂಚುವಲ್ ಫಂಡ್ ಎಸ್‌ಐಪಿ ಆರಂಭಿಸುವುದು ಮತ್ತು ನಿವೃತ್ತಿ ಜೀವನಕ್ಕಾಗಿ ಹೂಡಿಕೆ ವಿಳಂಬ ಮಾಡುವುದನ್ನು ಹಣಕಾಸು ನಿರ್ವಹಣೆಯಲ್ಲಿನ ಕೊರತೆಯ ಸೂಚನೆ ಎಂದು ಹೇಳಬಹುದು.

ಇಲ್ಲಿದೆ ದಾರಿ: ಹಣಕಾಸಿನ ಸರಿಯಾದ ನಿರ್ವಹಣೆಯು ಒತ್ತಡವನ್ನು ಕಡಿಮೆ ಮಾಡುವ ಜೊತೆಗೆ ಜೀವನ ಸುಗಮಗೊಳಿಸುತ್ತದೆ. ಉಳಿತಾಯಕ್ಕೆ ಸರಿಯಾದ ಯೋಜನೆ, ಸ್ವಯಂಚಾಲಿತ ಹೂಡಿಕೆ ವ್ಯವಸ್ಥೆ, 6 ತಿಂಗಳ ಖರ್ಚಿಗೆ ಬೇಕಾಗುವ ತುರ್ತು ನಿಧಿ, ಸರಿಯಾದ ಆರೋಗ್ಯ ಮತ್ತು ಜೀವ ವಿಮೆ, ಗುರಿ ಆಧಾರಿತ ಹೂಡಿಕೆ ಆಯ್ಕೆ, ಲೆಕ್ಕಾಚಾರ ಮಾಡಿ ಸಾಲ ಮಾಡುವುದು ಮತ್ತು ಕಾಲಕಾಲಕ್ಕೆ ಹಣಕಾಸಿನ ಪರಿಸ್ಥಿತಿ ಪರಾಮರ್ಶಿಸುವುದನ್ನು ಮಾಡಿದಾಗ ಹಣಕಾಸಿನ ಬಗ್ಗೆ ಇರುವ ಅನಿಶ್ಚಿತತೆ ಕಡಿಮೆಯಾಗಿ ಕುಟುಂಬದ ಆರ್ಥಿಕ ಪರಿಸ್ಥಿತಿ ಹತೋಟಿಗೆ ಬರುತ್ತದೆ.

ಆದಾಯ ಹೆಚ್ಚಳದಿಂದ ತಗ್ಗದು...: ಆದಾಯ ಹೆಚ್ಚಳವಾದ ಮಾತ್ರಕ್ಕೆ ಹಣಕಾಸಿನ ಒತ್ತಡಗಳು ಕಡಿಮೆಯಾಗುತ್ತವೆ ಎಂದು ಭಾವಿಸಲಾಗದು. ಆದಾಯ ಹೆಚ್ಚಳಕ್ಕೆ ತಕ್ಕಂತೆ ಖರ್ಚುಗಳು ಹೆಚ್ಚುತ್ತವೆ, ನಮ್ಮ ಹಣಕಾಸಿನ ಗುರಿಗಳು ದೊಡ್ಡದಾಗುತ್ತವೆ, ಹೆಚ್ಚು ರಿಸ್ಕ್ ಇರುವ ಹೂಡಿಕೆಗಳನ್ನು ನಾವು ಪರಿಗಣಿಸಲು ಶುರು ಮಾಡುತ್ತೇವೆ, ಹೂಡಿಕೆಗಳಲ್ಲಿ ವೈವಿಧ್ಯ ಕಾಪಾಡಿಕೊಳ್ಳಲು ಬೇರೆ ಬೇರೆ ಕಡೆ ಹೂಡಿಕೆ ಮಾಡುತ್ತೇವೆ, ಜವಾಬ್ದಾರಿಗಳು ಹೆಚ್ಚಳವಾಗಿ ಆಸ್ತಿ ಖರೀದಿಗಾಗಿ ಸಾಲ ಪಡೆದುಕೊಳ್ಳುವ ಸಂದರ್ಭ ಬರುತ್ತದೆ. ಇಷ್ಟೆಲ್ಲಾ ಬದಲಾವಣೆಗಳನ್ನು ನಾವು ಆರ್ಥಿಕವಾಗಿ ಕಾಣುವಾಗ ಒತ್ತಡಕ್ಕೆ ಒಳಗಾಗದೆ ಹಣಕಾಸು ನಿರ್ವಹಣೆ ಮಾಡಬೇಕಾದರೆ ಅದಕ್ಕೊಂದು ಸರಿಯಾದ ಯೋಜನೆ ಬೇಕೇಬೇಕು.

ಅಕ್ಕಿ ಉತ್ಪಾದನೆ: ಭಾರತ ಅಗ್ರ

ನವದೆಹಲಿ (ಪಿಟಿಐ): 'ಭಾರತವು, ಜಗತ್ತಿನಲ್ಲಿ ಅತಿ ಹೆಚ್ಚು ಅಕ್ಕಿ ಉತ್ಪಾದನೆ ಮಾಡುವ ರಾಷ್ಟ್ರವಾಗಿದೆ. ಈ ಮೂಲಕ ಅಕ್ಕಿ ಉತ್ಪಾದನೆಯಲ್ಲಿ ಚೀನಾವನ್ನು ಭಾರತ ಮೀರಿಸಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಶಿವರಾಜ್ ಸಿಂಗ್ ಚೌಹಾಣ್

2024-25ರ ಬೆಳೆ ವರ್ಷದಲ್ಲಿ ಭಾರತವು 15.01 ಕೋಟಿ ಟನ್ ಅಕ್ಕಿ ಉತ್ಪಾದನೆ ಮಾಡಿದೆ, ಚೀನಾ ದೇಶವು 14.52 ಕೋಟಿ ಟನ್ ಉತ್ಪಾದನೆ ಮಾಡಿದೆ. ಈ ಮೂಲಕ ಜಗತ್ತಿನಲ್ಲಿ ಅತಿ ಹೆಚ್ಚು ಅಕ್ಕಿ ಉತ್ಪಾದನೆ ಮಾಡಿದ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ ಎಂದು ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೇಳಿದರು. ಅವರು 25 ಬೆಳೆಗಳ 184 ಹೊಸ ಸುಧಾರಿತ ತಳಿಗಳನ್ನು ಬಿಡುಗಡೆ ಮಾಡಿದರು.

ಈ ತಳಿಗಳನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್), ಕೇಂದ್ರ ಹಾಗೂ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು, ಖಾಸಗಿ ಬಿತ್ತನೆ ಬೀಜ ಕಂಪನಿಗಳು ಅಭಿವೃದ್ಧಿಪಡಿಸಿವೆ.

ಈ ಹೊಸ ತಳಿಗಳು ಹೆಚ್ಚು ಇಳುವರಿ ನೀಡಲಿದ್ದು, ರೈತರ ಆದಾಯವನ್ನು ಹೆಚ್ಚಿಸಲಿವೆ. ಹೆಚ್ಚಿನ ಮಟ್ಟದ ರೋಗ ನಿರೋಧಕ ಶಕ್ತಿ ಹೊಂದಿವೆ. ಈ ತಳಿಗಳನ್ನು ತ್ವರಿತವಾಗಿ ರೈತರಿಗೆ ಲಭ್ಯವಾಗಿಸುವಂತೆ ಮಾಡಲಾಗುವುದು ಎಂದು ಸಚಿವರು ಹೇಳಿದ್ದಾರೆ.

1969ರಿಂದ 2014ರ ನಡುವೆ ಅಧಿಕ ಇಳುವರಿ ನೀಡುವ 3,969 ತಳಿಗಳಿಗೆ ಅನುಮೋದನೆ ನೀಡಲಾಗಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅಧಿಕ ಇಳುವರಿ ನೀಡುವ 3,236 ತಳಿಗಳಿಗೆ ಅನುಮೋದನೆ ನೀಡಿದೆ ಎಂದು ಹೇಳಿದ್ದಾರೆ.

ವೆನೆಜುವೆಲಾ: ನಿರ್ಬಂಧ ಸಡಿಲಿಕೆ ನಿರೀಕ್ಷೆ

ಒಎನ್‌ಜಿಸಿ ವಿದೇಶ್ ಲಿಮಿಟೆಡ್‌ಗೆ ಲಾಭಾಂಶ ಬಾಕಿ ಉಳಿಸಿಕೊಂಡಿರುವ ದೇಶ

ನವದೆಹಲಿ (ಪಿಟಿಐ): ವೆನೆಜುವೆಲಾದ ತೈಲ ಉದ್ಯಮ ವಲಯವನ್ನು ಅಮೆರಿಕವು ತನ್ನ ಹಿಡಿತಕ್ಕೆ ತೆಗೆದುಕೊಂಡರೆ ಭಾರತಕ್ಕೆ ಅದರಿಂದ ಲಾಭವೇ ಆಗಬಹುದು ಎಂದು ತಜ್ಞರು ನಿರೀಕ್ಷಿಸಿದ್ದಾರೆ.

ಹಿಂದೊಂದು ಸಂದರ್ಭದಲ್ಲಿ ಭಾರತವು ವೆನೆಜುವೆಲಾದಿಂದ ಪ್ರತಿನಿತ್ಯ 4 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿತ್ತು. ಅಮೆರಿಕವು ಆ ದೇಶದ ಮೇಲೆ ನಿರ್ಬಂಧ ವಿಧಿಸಿದ ನಂತರ, 2020ರಿಂದ ಆಮದು ನಿಂತಿತು.

ಭಾರತದ ಒಎನ್‌ಜಿಸಿ ವಿದೇಶ್ ಲಿಮಿಟೆಡ್ (ಒವಿಎಲ್) ಕಂಪನಿಯು ವೆನೆಜುವೆಲಾದ ಪೂರ್ವ ಭಾಗದ ಸ್ಯಾನ್ ಕ್ರಿಸ್ಟೊಬಾಲ್ ತೈಲ ನಿಕ್ಷೇಪದಿಂದ ಕಚ್ಚಾ ತೈಲವನ್ನು ಜಂಟಿಯಾಗಿ ಹೊರತೆಗೆಯುತ್ತಿದೆ. ಆದರೆ ಅಮೆರಿಕದ ನಿರ್ಬಂಧದಿಂದಾಗಿ ಅಲ್ಲಿ ಕಚ್ಚಾ ತೈಲ ಉತ್ಪಾದನೆಯು ತೀವ್ರವಾಗಿ ಕಡಿಮೆ ಆಗಿದೆ.

ವೆನೆಜುವೆಲಾ ದೇಶವು ಒವಿಎಲ್ ಕಂಪನಿಗೆ 2014ರವರೆಗಿನ ಲಾಭಾಂಶ (ಇಂದಿನ ಅಂದಾಜು ₹4,824 ಕೋಟಿ) ಪಾವತಿಸಲು ವಿಫಲವಾಗಿದೆ. ನಂತರದ ವರ್ಷಗಳ ಲಾಭಾಂಶವನ್ನೂ ಅದು ಪಾವತಿಸಿಲ್ಲ.

ಈಗ ಅಮೆರಿಕವು ವೆನೆಜುವೆಲಾ ಮೇಲೆ ನಿಯಂತ್ರಣ ಸಾಧಿಸಿರುವ ಕಾರಣದಿಂದಾಗಿ, ನಿರ್ಬಂಧಗಳು ಸಡಿಲವಾಗುವ ನಿರೀಕ್ಷೆ ಇದೆ. ನಿರ್ಬಂಧ ಸಡಿಲವಾದಲ್ಲಿ ಒವಿಎಲ್ ಕಂಪನಿಯು ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಉತ್ಪಾದಿಸಬಹುದು ಎಂದು ಮೂಲಗಳು ಹೇಳಿವೆ.

ಅಲ್ಲಿನ ನಿಕ್ಷೇಪಗಳಿಂದ ಒವಿಎಲ್ ಪ್ರತಿನಿತ್ಯ 1 ಲಕ್ಷ ಬ್ಯಾರೆಲ್‌ವರೆಗೆ ಕಚ್ಚಾ ತೈಲ ಉತ್ಪಾದಿಸಬಹುದು ಎನ್ನಲಾಗಿದೆ.

ಅಮೆರಿಕದ ಪ್ರಮುಖ ಕಚ್ಚಾ ತೈಲ ಕಂಪನಿಗಳು ವೆನೆಜುವೆಲಾಕ್ಕೆ ಮರಳಲಿವೆ, ಅಲ್ಲಿನ ಕಚ್ಚಾ ತೈಲ ಉದ್ಯಮದ ಮೂಲಸೌಕರ್ಯವನ್ನು ಸರಿಪಡಿಸಲಿವೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ವೆನೆಜುವೆಲಾ ದೇಶವು ಅಮೆರಿಕ ಹಾಗೂ ಇತರ ದೇಶಗಳ ಕಂಪನಿಗಳ ನೆರವಿನಿಂದ ತೈಲ ಉತ್ಪಾದನೆಯನ್ನು ಮತ್ತೆ ಆರಂಭಿಸಿದ ನಂತರದಲ್ಲಿ ಭಾರತವು ಪ್ರಮುಖ ಖರೀದಿದಾರ ದೇಶಗಳ ಪೈಕಿ ಒಂದಾಗಲಿದೆ ಎಂದು ಅಂದಾಜು ಮಾಡಲಾಗಿದೆ.

ಭಾರತದ ಕಚ್ಚಾ ತೈಲ ಸಂಸ್ಕರಣಾ ಘಟಕಗಳು ವೆನೆಜುವೆಲಾದ ಹೆಚ್ಚು ಸಾಂದ್ರೀಕೃತ ಕಚ್ಚಾ ತೈಲವನ್ನು ಪೆಟ್ರೋಲ್, ಡೀಸೆಲ್‌ನಂತಹ ಇಂಧನವನ್ನಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿವೆ ಎಂದು ಮೂಲಗಳು ಹೇಳಿವೆ.

ಪ್ರತಿಭಟನೆ: ಸಾವಿನ ಸಂಖ್ಯೆ 15ಕ್ಕೆ ಏರಿಕೆ

ಟೆಹರಾನ್/ ದುಬೈ (ಎಪಿ/ ಎಎಫ್‌ಪಿ): ಇರಾನ್‌ನಲ್ಲಿ ಆರ್ಥಿಕತೆಯ ಕುಸಿತದಿಂದ ಸರ್ಕಾರದ ವಿರುದ್ಧ ಜನರ ಆಕ್ರೋಶ ಭುಗಿಲೆದ್ದಿದೆ. ಕಳೆದ ಒಂದು ವಾರದಿಂದ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಮೃತಪಟ್ಟವರ ಸಂಖ್ಯೆ 15ಕ್ಕೇರಿದೆ.

ಆರ್ಥಿಕ ಕುಸಿತ, ಹಣದುಬ್ಬರ, ಬೆಲೆಯೇರಿಕೆ ಮತ್ತು ನಿರುದ್ಯೋಗ ಸಮಸ್ಯೆಗಳು ಯುವಜನರನ್ನು ಬೀದಿಗಿಳಿಯುವಂತೆ ಮಾಡಿದೆ. ರಾಜಧಾನಿ ಟೆಹರಾನ್‌ನಲ್ಲಿ ಆರಂಭವಾದ ಪ್ರತಿಭಟನೆ ಇದೀಗ ಇತರ ಕೆಲವು ನಗರಗಳಿಗೂ ವ್ಯಾಪಿಸಿದೆ. ಕೌಮ್ ಮತ್ತು ಹರ್ಸಿನ್ ಪಟ್ಟಣಗಳಲ್ಲಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಕೆರ್ಮನ್‌ಶಾ ಪ್ರಾಂತ್ಯದಲ್ಲಿ ಭದ್ರತಾ ಪಡೆಯ ಸಿಬ್ಬಂದಿಯೊಬ್ಬರು ಗುಂಡೇಟಿಗೆ ಬಲಿಯಾಗಿದ್ದಾರೆ.

ಇರಾನ್‌ನ ಒಟ್ಟು 31 ಪ್ರಾಂತ್ಯಗಳಲ್ಲಿ 25 ಪ್ರಾಂತ್ಯಗಳಿಗೆ ಪ್ರತಿಭಟನೆಯ ಕಾವು ಹಬ್ಬಿದೆ. ಈ ಪ್ರಾಂತ್ಯಗಳ 170ಕ್ಕೂ ಅಧಿಕ ತಾಣಗಳಲ್ಲಿ ಪ್ರತಿಭಟನೆ ನಡೆಯುತ್ತಿದ್ದು, 580 ಮಂದಿಯನ್ನು ಬಂಧಿಸಲಾಗಿದೆ ಎಂದು ಅಮೆರಿಕ ಮೂಲದ ಮಾನವ ಹಕ್ಕುಗಳ ಸಂಘಟನೆ ತಿಳಿಸಿದೆ.

ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರು ಪ್ರತಿಭಟನೆಯ ಬಗ್ಗೆ ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿದ್ದಾರೆ. 'ನಾವು ಪ್ರತಿಭಟನಕಾರರೊಂದಿಗೆ ಮಾತನಾಡುತ್ತೇವೆ. ಅಧಿಕಾರಿಗಳು ಖಂಡಿತವಾಗಿಯೂ ಅವರೊಂದಿಗೆ ಮಾತನಾಡಬೇಕು. ಆದರೆ, ಗಲಭೆಕೋರರೊಂದಿಗೆ ಮಾತನಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಗಲಭೆಕೋರರನ್ನು ಮಟ್ಟಹಾಕಬೇಕು' ಎಂದು ಹೇಳಿದ್ದಾರೆ.

'ಇರಾನ್ ಸರ್ಕಾರವು ಪ್ರತಿಭಟನಕಾರರ ಮೇಲೆ ಹಿಂಸೆ ನಡೆಸಿದರೆ ನಾವು ಮಧ್ಯ ಪ್ರವೇಶಿಸುತ್ತೇವೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಎಚ್ಚರಿಸಿದ್ದರು. 'ನಮ್ಮ ಆಂತರಿಕ ವಿಷಯದಲ್ಲಿ ಕೈಹಾಕುವವರನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಇರಾನ್ ತಿರುಗೇಟು ನೀಡಿತ್ತು.

ಅಮೆರಿಕ ಮಡೂರೊ ಸೆರೆಹಿಡಿದದ್ದು ಹೇಗೆ?

150 ವಿಮಾನ, 2 ಗಂಟೆ 20 ನಿಮಿಷ ಕಾರ್ಯಾಚರಣೆ

ವಾಷಿಂಗ್ಟನ್ (ಎಪಿ): ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಅವರ 'ಭದ್ರಕೋಟೆ' ಭೇದಿಸಲು ಅಮೆರಿಕ ಸೇನೆಯ 'ಡೆಲ್ಟಾ' ಪಡೆ 2025ರ ಸೆಪ್ಟೆಂಬರ್‌ನಿಂದಲೇ ವೆನುಜುವೆಲಾ ಕರಾವಳಿಯಲ್ಲಿ ತರಬೇತಿ ಪ್ರಾರಂಭಿಸಿತ್ತು. ಇಡೀ ಕಾರ್ಯಾಚರಣೆ ಅತ್ಯಂತ ರಹಸ್ಯವಾಗಿ 'ಕತ್ತಲ ಮರೆ'ಯಲ್ಲಿ ನಡೆಯುವಂತೆ ಯೋಜನೆ ರೂಪಿಸಲಾಗಿತ್ತು. ಮಡೂರೊ ಸೆರೆಗೆ 'ಸಂಪೂರ್ಣ ಪರಿಹಾರ' ಎಂಬ ಹೆಸರಿಡಲಾಗಿತ್ತು.

ಅಮೆರಿಕದ ಸೆಂಟ್ರಲ್ ಇಂಟೆಲಿಜೆನ್ಸ್ ಏಜೆನ್ಸಿಯು (ಸಿಐಎ) ಮಡೂರೊ ಅವರ ಆಹಾರದಿಂದ -ನಿದ್ರೆಯವರೆಗೆ, ಅವರ ಸಾಕು ಪ್ರಾಣಿಗಳಿಂದ, ಧರಿಸುವ ಬಟ್ಟೆಯವರೆಗೆ ಪ್ರತಿಯೊಂದರ ಬಗ್ಗೆಯೂ ಇಂಚಿಂಚೂ ಮಾಹಿತಿ ಸಂಗ್ರಹಿಸಿತ್ತು. ಮಡೂರೊ ನಿವಾಸ ಮತ್ತು ಆವರಣದ ಪ್ರತಿಕೃತಿ ನಿರ್ಮಿಸಿಕೊಂಡಿದ್ದ ಡೆಲ್ಟಾ ಪಡೆಯು, ಈ ಕೋಟೆಗೆ ನುಗ್ಗಿ, ಅವರನ್ನು ಸೆರೆ ಹಿಡಿದು ಹೊರಗೆ ತರುವುದನ್ನು ರಹಸ್ಯವಾಗಿ ತಾಲೀಮು ನಡೆಸಿತ್ತು . ಒಂದು ವೇಳೆ ಮಡೂರೊ ತನ್ನ ಕೋಟೆಯೊಳಗಿನ ರಹಸ್ಯ ಕೊಠಡಿ ಸೇರಿಕೊಂಡರೆ, ಅದನ್ನು ಸ್ಫೋಟಿಸಲೂ ಯೋಜನೆ ರೂಪಿಸಿತ್ತು. ವಿಮಾನಗಳ ಪೈಲಟ್‌ಗಳು ಕತ್ತಲಲ್ಲಿ, ಪ್ರತಿಕೂಲ ಹವಾಮಾನದಲ್ಲೂ ಹಾರಾಟ ನಡೆಸುವುದರ ಬಗ್ಗೆ ತರಬೇತಿ ಪಡೆದುಕೊಂಡಿದ್ದರು.

ತಿಂಗಳುಗಳು ನಡೆದ ರಹಸ್ಯ ಕಾರ್ಯಾಚರಣೆಗೆ ಜ.2ರ ತಡರಾತ್ರಿ ಮುಹೂರ್ತ ನಿಗದಿಯಾಗಿತ್ತು. ಟ್ರಂಪ್ ಅವರಿಂದ ಅಂತಿಮ ಆದೇಶ ಸಿಗುತ್ತಿದ್ದಂತೆಯೇ ಆಗಸಕ್ಕೆ ಚಿಮ್ಮಿದ ಅಮೆರಿಕದ 150 ವಿಮಾನಗಳು ವೆನೆಜುವೆಲಾದ ರಾಜಧಾನಿ ಕರಾಕಸ್ ಅನ್ನು ಕತ್ತಲಲ್ಲಿ ಮುಳುಗಿಸಿದ್ದವು. ಏನಾಗುತ್ತಿದೆ ಎನ್ನುವಷ್ಟರಲ್ಲಿ ಡೆಲ್ಟಾ ತಂಡವು, ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ಸೆರೆ ಹಿಡಿದು, ಕರಾವಳಿಯಲ್ಲಿ ಲಂಗರು ಹಾಕಿದ್ದ ಅಮೆರಿಕದ ಯುದ್ಧನೌಕೆಗೆ ತಂದು ಇಳಿಸಿದ್ದರು. ಒಟ್ಟಾರೆ ಕಾರ್ಯಾಚರಣೆ 2 ಗಂಟೆ 20 ನಿಮಿಷದಲ್ಲಿ ಮುಗಿಯಿತು.

ಕ್ರಿಸ್‌ಮಸ್ ರಜಾ ದಿನ ಕಳೆಯಲು ಫ್ಲಾರಿಡಾದ ಪಾಮ್ ಬೀಚ್ ಕ್ಲಬ್‌ಗೆ ತೆರಳಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಡೀ ಕಾರ್ಯಾಚರಣೆಯನ್ನು ಅಲ್ಲಿಂದ ನೇರ ವೀಕ್ಷಣೆ ಮಾಡಿದರು.

ಮಡೂರೊ ಸೆರೆ ಕಾರ್ಯಾಚರಣೆ ಹಿಂದಿನ ರೂವಾರಿ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಮಾರ್ಕ್ ರುಬಿಯೊ ಎಂಬ ವಿಶ್ಲೇಷಣೆಗಳು ಈಗ ನಡೆಯುತ್ತಿವೆ. ಮಾದಕವಸ್ತು ಭಯೋತ್ಪಾದನೆ ಪ್ರಕರಣದಲ್ಲಿ ಮಡೂರೊ ಅವರನ್ನು ಅಮೆರಿಕದ ನೆಲದಲ್ಲಿ, ಅಮೆರಿಕದ ಕೋರ್ಟ್‌ನಲ್ಲಿ ವಿಚಾರಣೆ ನಡೆಸುವುದಾಗಿ ಅಲ್ಲಿನ ಅಟಾರ್ನಿ ಜನರಲ್ ಹೇಳಿದ್ದಾರೆ.

ಹಿಂದೂ ವ್ಯಾಪಾರಿ ಸಾವು: ಮೂವರ ಬಂಧನ

ಢಾಕಾ (ಪಿಟಿಐ): ಹಿಂದೂ ವ್ಯಾಪಾರಿ ಖೋಕನ್ ಚಂದ್ರದಾಸ್ ಅವರನ್ನು ಥಳಿಸಿ, ಬೆಂಕಿ ಹಚ್ಚಿದ್ದ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮೂವರನ್ನು ಭಾನುವಾರ ಬಂಧಿಸಲಾಗಿದೆ. ಮೂರು ದಿನಗಳ ಸಾವು-ಬದುಕಿನ ಹೋರಾಟದ ಬಳಿಕ ಚಂದ್ರದಾಸ್ ಶನಿವಾರ ಮೃತಪಟ್ಟಿದ್ದರು.

ದಾಮುದ್ಯಾರ್ ಸೊಹಾಗ್ ಖಾನ್ (27), ರಬ್ಬಿ ಮೊಲ್ಲಾ (21) ಮತ್ತು ಪಲಾಶ್ ಸರ್ದಾರ್ (25) ಎಂಬುವರನ್ನು ರ್‍ಯಾಪಿಡ್ ಆ್ಯಕ್ಷನ್ ಬೆಟಾಲಿಯನ್ ಬಂಧಿಸಿದೆ. 'ಸಾಯುವುದಕ್ಕೂ ಮುನ್ನ ಚಂದ್ರದಾಸ್ ಅವರು ಆರೋಪಿಗಳ ಹೆಸರುಗಳನ್ನು ಹೇಳಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ.
9035710381

HRD & Admin

COMPUTER OPERATOR HR & Accountant REQUIRED In Our Firm JM ENTERPRISES BANGALORE, Send RESUME 9008195943 or jmgroupkar@gmail.com

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9019593297, 8095133188.

Wanted

ತಕ್ಷಣ ಬೇಕಾಗಿದ್ದಾರೆ, ಮಾರ್ಕೆಟಿಂಗ್ ಅಲ್ಲ ಕರ್ನಾಟಕದಲ್ಲಿರುವ ಕಂಪನಿಗಳಿಗೆ ಹಳ್ಳಿಗಳಿಂದ ಬರುವ ಯುವಕರಿಗೆ ಯುವತಿಯರಿಗೆ ಸಂಬಳ 20000-35000 (ವಿದ್ಯಾರ್ಹತೆಯಿಲ್ಲದವರಿಗು) ವಸತಿಯೂಟವಿರುತ್ತದೆ. 9916788422

ಕೋಳಿರೊಟ್ಟಿ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ. ವೇತನ 18,000/-. ಊಟ, ವಸತಿ ಉಚಿತ. ಉಡುಪಿ. ಸಂಪರ್ಕಿಸಿ: 8050841450

ವ್ಯಾಪಾರ

Business to Business

Finance

ಶ್ರೀ ಶಕ್ತಿ ಫೈನಾನ್ಸ್, ವ್ಯಾಪಾರ ಮಾಡುವವರು, ಸ್ಯಾಲರಿ ಇದ್ದವರು, ಸ್ವಂತ ಮನೆ ಇದ್ದವರಿಗೆ 10, 20, 30, 40, 50 ಸಾವಿರದವರೆಗೆ ಸಾಲ ಕೊಡಲಾಗುವುದು. ಸಂಪರ್ಕಿಸಿ ಶೇಷಾದ್ರಿಪುರಂ ಬೆಂಗಳೂರು 9036316959.

ಭವಿಷ್ಯ

Astrology

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನಗಳಲ್ಲಿ ಪರಿಹಾರ.9886755306

ಪ್ರವಾಸ

Travel

11ದಿನಗಳ ಗುಜರಾತ್ ರನ್‌ಆಫ್ ಕಚ್. 12 ದಿನಗಳ ಮದ್ಯಪ್ರದೇಶ. 4 ದಿನಗಳ ಪುರಿಜಗನ್ನಾಥ್. 4 ದಿನಗಳ ಉಜ್ಜಯಿನಿ ಓಂಕಾರೇಶ್ವರ. 10ದಿನಗಳ ನೇಪಾಳ ಮುಕ್ತಿನಾಥ್. 8 ದಿನಗಳ ಅಸ್ಸಾಂ,ಮೇಘಾಲಯ ಕಾಜಿರಂಗ ಸಂಪರ್ಕಿಸಿ. ನಂದಿ ಹಾಲಿಡೇಸ್ ಬಸವನಗುಡಿ 9740228186 9035513332

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಮೆರಿಕದಲ್ಲಿ ವಲಸಿಗರಿಗೆ ನೆರವು: ಪಟ್ಟಿಯಲ್ಲಿ ಭಾರತಕ್ಕೆ ಸ್ಥಾನ ಇಲ್ಲ

ನ್ಯೂಯಾರ್ಕ್/ವಾಷಿಂಗ್ಟನ್(ಪಿಟಿಐ): ಅಮೆರಿಕಕ್ಕೆ ಬರುವ ವಲಸಿಗರಿಗೆ ನೀಡುವ ಸೌಲಭ್ಯಗಳು/ನೆರವಿನ ವಿವರ ಹಾಗೂ ಸಂಬಂಧಿಸಿದ ದೇಶಗಳ ಪಟ್ಟಿಯನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಪ್ರಕಟಿಸಿದ್ದು, ಈ ಪಟ್ಟಿಯಲ್ಲಿ ಭಾರತ ಸ್ಥಾನ ಪಡೆದಿಲ್ಲ.

ಡೊನಾಲ್ಡ್ ಟ್ರಂಪ್

ಪಾಕಿಸ್ತಾನ, ಭೂತಾನ್, ಚೀನಾ, ಬಾಂಗ್ಲಾದೇಶ, ನೇಪಾಳ ಸೇರಿ 120 ರಾಷ್ಟ್ರಗಳ ಹೆಸರು ಈ ಪಟ್ಟಿಯಲ್ಲಿವೆ. ಈ ಪಟ್ಟಿಯನ್ನು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರುಥ್ ಸೋಷಿಯಲ್'ನಲ್ಲಿ ಟ್ರಂಪ್ ಪ್ರಕಟಿಸಿದ್ದಾರೆ.

ವಲಸಿಗರು ಜನಿಸಿದ ದೇಶ ಹಾಗೂ ಅವರಿಗೆ ಅಮೆರಿಕದಲ್ಲಿ ನೀಡಲಾಗುವ ನೆರವಿನ ಪ್ರಮಾಣವನ್ನು ಸಹ ಈ ಪಟ್ಟಿಯಲ್ಲಿ ನೀಡಲಾಗಿದೆ. ಬಾಂಗ್ಲಾದೇಶದಿಂದ ಬಂದಿರುವ ವಲಸಿಗರ ಪೈಕಿ ಶೇ 54.8ರಷ್ಟು ಕುಟುಂಬಗಳು ನೆರವನ್ನು ಪಡೆಯುತ್ತಿವೆ.

ಪಾಕಿಸ್ತಾನ(ಶೇ 40.2), ನೇಪಾಳ(ಶೇ 34.8), ಚೀನಾ(ಶೇ 32.9) ಹಾಗೂ ಇಸ್ರೇಲ್/ಪ್ಯಾಲೆಸ್ಟೀನ್‌ನ ಶೇ 25.9ರಷ್ಟು ಕುಟುಂಬಗಳು ನೆರವು ಪಡೆಯುತ್ತಿವೆ ಎಂದು ಪಟ್ಟಿಯಲ್ಲಿ ವಿವರಿಸಲಾಗಿದೆ.

ನ್ಯೂಯಾರ್ಕ್ ಜೈಲಿಗೆ ಮಡೂರೊ

ಒಂದನೇ ಪುಟದಿಂದ...

'ವೆನೆಜುವೆಲಾದಲ್ಲಿ ಅಧಿಕಾರವು ನಾವು ಬಯಸಿದ ರೀತಿಯಲ್ಲಿ ವರ್ಗಾವಣೆಯಾಗುವವರೆಗೂ ಆ ದೇಶದ ಆಡಳಿತವನ್ನು ನೋಡಿಕೊಳ್ಳಲಿದ್ದೇವೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಅಲ್ಲಿನ ಆಡಳಿತ ನೋಡಿಕೊಳ್ಳಲು ತಮ್ಮ ಸಂಪುಟದ ಕೆಲವರನ್ನು ನೇಮಿಸಲಾಗುವುದು ಎಂದಿದ್ದಾರೆ.

ಆದರೆ ಅಮೆರಿಕ ಸೇನೆಗೆ ವೆನೆಜುವೆಲಾ ಮೇಲೆ ಯಾವುದೇ ನಿಯಂತ್ರಣ ಇಲ್ಲದಿರುವ ಕಾರಣ, ಅಲ್ಲಿನ ಆಡಳಿತವನ್ನು ಹೇಗೆ ನೋಡಿಕೊಳ್ಳುವರು ಎಂಬುದು ಸ್ಪಷ್ಟವಾಗಿಲ್ಲ. ಇದರಿಂದ ಅಧಿಕಾರ ವರ್ಗಾವಣೆ ಕುರಿತ ಅನಿಶ್ಚಿತ ಸ್ಥಿತಿ ಮುಂದುವರಿದಿದೆ. ಮಡೂರೊ ದೇಶದಲ್ಲಿ ಇಲ್ಲದಿದ್ದರೂ ಅವರದ್ದೇ ಸರ್ಕಾರ ಅಧಿಕಾರದಲ್ಲಿ ಮುಂದುವರಿದಿದ್ದು, ಆಡಳಿತ ವರ್ಗಾವಣೆ ವಿಚಾರದಲ್ಲಿ ಅಮೆರಿಕದ ಜತೆ ಸಹಕರಿಸುವ ಯಾವುದೇ ಸಾಧ್ಯತೆಯಿಲ್ಲ.

ಶನಿವಾರ ಮಧ್ಯಾಹ್ನ ಸರ್ಕಾರದ ಉನ್ನತ ಅಧಿಕಾರಿಗಳೊಂದಿಗೆ ದೇಶವನ್ನುದ್ದೇಶಿಸಿ ಮಾತನಾಡಿದ ಉಪಾಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ಅವರು ಅಮೆರಿಕದ ದಾಳಿಯನ್ನು ಖಂಡಿಸಿದರು.

'ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ನಾವು ಒತ್ತಾಯಿಸುತ್ತೇವೆ' ಎಂದ ಡೆಲ್ಸಿ, ಮಡೂರೊ ಅವರನ್ನು 'ವೆನೆಜುವೆಲಾದ ಏಕೈಕ ಅಧ್ಯಕ್ಷರು' ಎಂದು ಕರೆದರು. ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವಂತೆ ವೆನಿಜುವೆಲಾದ ನ್ಯಾಯಾಲಯವು ರಾಡ್ರಿಗಸ್ ಅವರಿಗೆ ಶನಿವಾರ ರಾತ್ರಿ ಆದೇಶಿಸಿದೆ.

ವಿರೋಧಿಗಳ ಸಂಭ್ರಮ: ಮಡೂರೊ ಅವರ ಸರ್ಕಾರದ ದಬ್ಬಾಳಿಕೆ ಮತ್ತು ಆರ್ಥಿಕ ಕುಸಿತದಿಂದ ಬೇಸತ್ತು ವೆನೆಜುವೆಲಾ ತೊರೆದು ಇತರ ದೇಶಗಳಲ್ಲಿ ಆಶ್ರಯ ಪಡೆದಿರುವ ಸಾವಿರಾರು ಮಂದಿ ಅಮೆರಿಕದ ಕ್ರಮವನ್ನು ಸ್ವಾಗತಿಸಿದ್ದಾರೆ. ಮಡೂರೊ ಅವರನ್ನು ಪದಚ್ಯುತಗೊಳಿಸಿದ್ದಕ್ಕೆ ಬೆಂಬಲ ಸೂಚಿಸಿ ಫ್ಲಾರಿಡಾ ಸೇರಿದಂತೆ ವಿವಿಧ ನಗರಗಳಲ್ಲಿ ಬೀದಿಗಿಳಿದು ಸಂಭ್ರಮಿಸಿದರು.

ಇದೇ ವೇಳೆ, ಅಮೆರಿಕದ ದಾಳಿಯನ್ನು ಖಂಡಿಸಿ ವೆನೆಜುವೆಲಾ ಸೇರಿದಂತೆ ವಿವಿಧ ದೇಶಗಳಲ್ಲಿ ಪ್ರತಿಭಟನೆಗಳು ನಡೆದವು.

ಯುದ್ಧಕ್ಕೆ ಸಮನಾದ ಕೃತ್ಯ: ಮಮ್ದಾನಿ

ಒಂದನೇ ಪುಟದಿಂದ...

'ಸಾರ್ವಭೌಮ ರಾಷ್ಟ್ರದ ಮೇಲೆ ಏಕಪಕ್ಷೀಯವಾಗಿ ದಾಳಿ ನಡೆಸುವುದು ಯುದ್ಧಕ್ಕೆ ಸಮನಾದ ಕೃತ್ಯ ಮತ್ತು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಆಡಳಿತ ಬದಲಾವಣೆಗೆ ನಡೆದಿರುವ ಈ ಪ್ರಯತ್ನವು ನ್ಯೂಯಾರ್ಕ್‌ನಲ್ಲಿ ನೆಲಸಿರುವ ವೆನೆಜುವೆಲಾದವರು ಮಾತ್ರವಲ್ಲ ನಗರದ ಇತರ ನಿವಾಸಿಗಳ ಮೇಲೂ ಪರಿಣಾಮ ಬೀರುತ್ತದೆ. ಈ ನಗರವನ್ನು 'ನಮ್ಮ ಮನೆ' ಎಂದು ಕರೆಯುವ ವೆನೆಜುವೆಲಾದ ಸಾವಿರಾರು ಮಂದಿ ಇಲ್ಲಿದ್ದಾರೆ. ಅವರ ಸುರಕ್ಷತೆ ಸೇರಿದಂತೆ ನ್ಯೂಯಾರ್ಕ್‌ನ ಪ್ರತಿಯೊಬ್ಬರ ಸುರಕ್ಷತೆಯ ಮೇಲೆ ನನ್ನ ಗಮನ ಇರಲಿದೆ. ನನ್ನ ಆಡಳಿತವು ಪರಿಸ್ಥಿತಿಯನ್ನು ಅವಲೋಕಿಸಿ, ಅಗತ್ಯ ಮಾರ್ಗದರ್ಶನ ನೀಡುವುದನ್ನು ಮುಂದುವರಿಸಲಿದೆ' ಎಂದಿದ್ದಾರೆ.

ಏನೆಲ್ಲಾ ಆರೋಪ?

ಮಡೂರೊ ಮತ್ತು ಪತ್ನಿ ವಿರುದ್ಧ ನ್ಯೂಯಾರ್ಕ್‌ನ ಸದರ್ನ್ ಡಿಸ್ಟ್ರಿಕ್ಟ್ ನ್ಯಾಯಾಲಯದಲ್ಲಿ ದೋಷಾರೋಪ ಹೊರಿಸಲಾಗಿದೆ ಎಂದು ಅಮೆರಿಕದ ಅಟಾರ್ನಿ ಜನರಲ್ ಪಮೆಲಾ ಬಾಂಡಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಾದಕ ದ್ರವ್ಯ-ಭಯೋತ್ಪಾದನೆ, ಕೊಕೇನ್ ಆಮದು ಪಿತೂರಿ, ಮಷೀನ್ ಗನ್‌ಗಳು ಮತ್ತು ಇತರ ಶಸ್ತ್ರಾಸ್ತ್ರಗಳನ್ನು ಹೊಂದಿರುವುದು, ಮಷೀನ್ ಗನ್‌ಗಳು ಹಾಗೂ ಶಸ್ತ್ರಾಸ್ತ್ರ ಹೊಂದಲು ಪಿತೂರಿ ನಡೆಸಿದ ಆರೋಪಗಳನ್ನು ಹೊರಿಸಲಾಗಿದೆ.

ನೇರವಾಗಿ ಟೀಕಿಸದ ಭಾರತ

ಒಂದನೇ ಪುಟದಿಂದ...

'ವೆನೆಜುವೆಲಾ ಜನರ ಯೋಗಕ್ಷೇಮ ಮತ್ತು ಸುರಕ್ಷತೆಗೆ ಭಾರತ ತನ್ನ ಬೆಂಬಲವನ್ನು ಪುನರುಚ್ಚರಿಸುತ್ತದೆ. ಇಡೀ ಪ್ರದೇಶದ ಶಾಂತಿ ಮತ್ತು ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು, ಸಮಸ್ಯೆಯನ್ನು ಮಾತುಕತೆ ಮೂಲಕ ಶಾಂತಿಯುತವಾಗಿ ಬಗೆಹರಿಸುವಂತೆ ಸಂಬಂಧಪಟ್ಟ ಎಲ್ಲರಿಗೂ ಕರೆ ನೀಡುತ್ತೇವೆ' ಎಂದಿದೆ. ಚೀನಾ, ರಷ್ಯಾ ಮತ್ತು ಬ್ರೆಜಿಲ್ ದೇಶಗಳು ಅಮೆರಿಕದ ದಾಳಿಯನ್ನು ಖಂಡಿಸಿವೆ.

ಕಾನೂನಿನ ಉಲ್ಲಂಘನೆ ಸಲ್ಲ: 'ವೆನೆಜುವೆಲಾದಲ್ಲಿ ಅಮೆರಿಕ ಕೈಗೊಂಡ ಕ್ರಮಗಳ ಬಗ್ಗೆ ಕಾಂಗ್ರೆಸ್ ಪಕ್ಷ ತೀವ್ರ ಕಳವಳ ವ್ಯಕ್ತಪಡಿಸುತ್ತದೆ. ಯಾವುದೇ ಒಂದು ದೇಶ ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸುವಂತಿಲ್ಲ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ತಕ್ಷಣ ಬಿಡುಗಡೆಗೆ ಚೀನಾ ಒತ್ತಾಯ

ಬೀಜಿಂಗ್: ನಿಕೊಲಸ್ ಮಡೂರೊ ಮತ್ತು ಅವರ ಪತ್ನಿಯನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಚೀನಾ, ಅಮೆರಿಕವನ್ನು ಭಾನುವಾರ ಒತ್ತಾಯಿಸಿದೆ.

'ಮಡೂರೊ ಮತ್ತು ಅವರ ಪತ್ನಿಯನ್ನು ಅಮೆರಿಕವು ಬಲವಂತವಾಗಿ ದೇಶದಿಂದ ಹೊರಗೆ ಕರೆದೊಯ್ದಿರುವುದಕ್ಕೆ ಚೀನಾ ತೀವ್ರ ಕಳವಳ ವ್ಯಕ್ತಪಡಿಸುತ್ತದೆ' ಎಂದು ಚೀನಾ ವಿದೇಶಾಂಗ ಸಚಿವಾಲಯದ ಹೇಳಿಕೆ ತಿಳಿಸಿದೆ.

'ಈ ಕ್ರಮವು ಅಂತರರಾಷ್ಟ್ರೀಯ ಕಾನೂನು ಮತ್ತು ವಿಶ್ವಸಂಸ್ಥೆಯ ಸನ್ನದಿನ ಉದ್ದೇಶಗಳು ಹಾಗೂ ತತ್ವಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಸಂವಾದ ಮತ್ತು ಮಾತುಕತೆಯ ಮೂಲಕ ಸಮಸ್ಯೆಗಳನ್ನು ಪರಿಹರಿಸಲು ಚೀನಾವು ಅಮೆರಿಕವನ್ನು ಒತ್ತಾಯಿಸುತ್ತದೆ' ಎಂದು ಹೇಳಿದೆ.

ಹೊರಬಂತು ಜನ ನಾಯಕನ್ ಟ್ರೇಲರ್

ದಳಪತಿ ವಿಜಯ್

ದಳಪತಿ ವಿಜಯ್ ಅವರ ಕೊನೆಯ ಸಿನಿಮಾ 'ಜನ ನಾಯಕನ್' ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಚ್. ವಿನೋತ್ ನಿರ್ದೇಶನದ ಚಿತ್ರ ಜ.9ರಂದು ತೆರೆ ಕಾಣುತ್ತಿದೆ.

ಚಿತ್ರದಲ್ಲಿ ವಿಜಯ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು, ಮಾಸ್ ಆ್ಯಕ್ಷನ್ ಕಥೆಯನ್ನು ಹೊಂದಿದೆ. ಜತೆಗೆ ತಂದೆ ಮಗಳ ಬಾಂಧವ್ಯವೂ ಚಿತ್ರದ ಪ್ರಮುಖ ಅಂಶ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಪೂಜಾ ಹೆಗ್ಡೆ, ಬಾಬಿ ಡಿಯೋಲ್, ಮಮಿತಾ ಬೈಜು, ಗೌತಮ್ ವಾಸುದೇವ್ ಮೆನನ್, ಪ್ರಕಾಶ್ ರಾಜ್, ಪ್ರಿಯಾಮಣಿ ಮತ್ತು ನರೇನ್ ಸೇರಿದಂತೆ ಅನೇಕ ಕಲಾವಿದರು ಚಿತ್ರದಲ್ಲಿದ್ದಾರೆ. ಕೆವಿಎನ್ ಸಂಸ್ಥೆಯ ವೆಂಕಟ್ ಕೆ. ನಾರಾಯಣ ಅವರು ಬಂಡವಾಳ ಹೂಡಿದ್ದಾರೆ. ಅನಿರುದ್ಧ್ ಸಂಗೀತ, ಸತ್ಯನ್ ಸೂರ್ಯನ್ ಛಾಯಾಚಿತ್ರಗ್ರಹಣ ಹಾಗೂ ಪ್ರದೀಪ್ ಇ. ರಾಘವ್ ಅವರ ಸಂಕಲನ ಈ ಚಿತ್ರಕ್ಕಿದೆ.

'ಮಲೇಷ್ಯಾದಲ್ಲಿ ನಡೆದ ಆಡಿಯೋ ಬಿಡುಗಡೆಗೆ ಸಿಕ್ಕ ಅಭೂತಪೂರ್ವ ಸ್ಪಂದನೆಯೇ ವಿಜಯ್ ಮತ್ತು ಅವರ ಅಭಿಮಾನಿಗಳ ನಡುವಿನ ಬಾಂಧವ್ಯಕ್ಕೆ ಸಾಕ್ಷಿ. ಮಲೇಷ್ಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ನಮ್ಮ ಚಿತ್ರ ಸೇರ್ಪಡೆಯಾಗಿರುವುದು ಹೆಮ್ಮೆಯ ವಿಷಯ. ಈಗ ಟ್ರೇಲರ್ ಸೃಷ್ಟಿಸಿರುವ ಈ ಅಬ್ಬರವು ಚಿತ್ರದ ಮೇಲಿನ ನಿರೀಕ್ಷೆಯನ್ನು ದುಪ್ಪಟ್ಟು ಮಾಡಿದೆ' ಎಂದು ನಿರ್ಮಾಪಕರು ಹೇಳಿದ್ದಾರೆ.

'ವಿಕಲ್ಪ' ಟೀಸರ್ ಬಿಡುಗಡೆ

ಬಹುತೇಕ ಹೊಸ ಪ್ರತಿಭೆಗಳೇ ಸೇರಿ ನಿರ್ಮಿಸಿರುವ 'ವಿಕಲ್ಪ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸೈಕಾಲಜಿಕಲ್-ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ಪೃಥ್ವಿರಾಜ್ ಪಾಟೀಲ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಮನುಷ್ಯನ ಮನಸ್ಸಿನ ಸುಪ್ತ ಭಾವನೆಗಳು ಮತ್ತು ತಲ್ಲಣಗಳನ್ನು ಚಿತ್ರರೂಪದಲ್ಲಿ ತೆರೆಮೇಲೆ ತರುತ್ತಿದ್ದೇವೆ. 'ವಿಕಲ್ಪ' ಎಂದರೆ ವಾಸ್ತವ ಮತ್ತು ಕಲ್ಪನೆಗಳ ನಡುವಿನ ಒಂದು ಸ್ಥಿತಿ ಎಂದರ್ಥ. ಚಿತ್ರ ಸೆನ್ಸಾರ್ ಹಂತದಲ್ಲಿದೆ' ಎಂದರು ನಿರ್ದೇಶಕ.

ಶ್ರೀಮತಿ ಇಂದಿರಾ ಶಿವಸ್ವಾಮಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನಿರ್ದೇಶಕರೇ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ನಾಗಶ್ರೀ ಹೆಬ್ಬಾರ್, ಹರಿಣಿ ಶ್ರೀಕಾಂತ್, ಸಂಧ್ಯಾ ವಿನಾಯಕ್, ಗಣಪತಿ ವಡ್ಡಿನಗದ್ದೆ, ಗೋಡೆ ನಾರಾಯಣ ಹೆಗಡೆ ಮುಂತಾದವರು ಚಿತ್ರದಲ್ಲಿದ್ದಾರೆ. ಅಭಿರಾಮ್ ಗೌಡ ಛಾಯಾಚಿತ್ರಗ್ರಹಣ, ಸುರೇಶ್ ಆರುಮುಗಮ್ ಸಂಕಲನ, ಸಂವತ್ಸರ ಸಂಗೀತ ನಿರ್ದೇಶನವಿದೆ.

ನಾಗಶ್ರೀ ಹೆಬ್ಬಾರ್

ಮಮ್ಮುಟ್ಟಿ ಚಿತ್ರದಲ್ಲಿ ನಯನತಾರಾ?

ನಯನತಾರಾ

ಮಲಯಾಳ ಚಿತ್ರರಂಗದ ಹೆಸರಾಂತ ನಿರ್ದೇಶಕ ಅಡೂರು ಗೋಪಾಲ ಕೃಷ್ಣನ್ ಮತ್ತು ಮಮ್ಮುಟ್ಟಿ ಒಟ್ಟಿಗೆ ಸಿನಿಮಾ ಮಾಡುತ್ತಿರುವುದು ಕೆಲ ದಿನಗಳ ಹಿಂದೆ ಸುದ್ದಿಯಾಗಿತ್ತು. ಈ ಚಿತ್ರದಲ್ಲಿ ನಯನತಾರಾ ಕೂಡ ನಟಿಸುತ್ತಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ.

ಒಂದು ಕಾಲಕ್ಕೆ ಸೂಪರ್ ಹಿಟ್ ಸಿನಿಮಾಗಳನ್ನು ನೀಡಿದ್ದ ಅಡೂರು ದಶಕಗಳ ಬಳಿಕ ಮತ್ತೆ ಕಮರ್ಷಿಯಲ್ ಸಿನಿಮಾ ನಿರ್ದೇಶನಕ್ಕೆ ಮರಳಿದ್ದಾರೆ. 1950ರ ಬಹು ಜನಪ್ರಿಯ ಕಾದಂಬರಿ 'ರಂಡಿಡಜಯಿ' ಕಥೆ ಆಧಾರಿತ ಸಿನಿಮಾವಿದು. 'ಚೋಮನ ದುಡಿ' ರೀತಿಯದ್ದೇ ಕಥಾಹಂದರ ಹೊಂದಿರುವ ಚಿತ್ರ ಈ ತಿಂಗಳ ಅಂತ್ಯದಲ್ಲಿ ಸೆಟ್ಟೇರುವ ನಿರೀಕ್ಷೆಯಿದೆ. ಅಡೂರು ಈ ಹಿಂದೆ ಮಮ್ಮುಟ್ಟಿಗೆ 'ಮದಿಲುಗಳ್', 'ವಿಧೇಯನ್' ಚಿತ್ರಗಳನ್ನು ನಿರ್ದೇಶಿಸಿದ್ದರು. ಮಮ್ಮುಟ್ಟಿ ಹಾಗೂ ನಯನತಾರಾ 'ಪುದಿಯ ನಿಯಮಮ್' ಸೇರಿದಂತೆ ಕೆಲ ಸಿನಿಮಾಗಳಲ್ಲಿ ಒಟ್ಟಿಗೆ ನಟಿಸಿದ್ದರು. ಹೀಗಾಗಿ ಚಿತ್ರದ ಮೇಲಿನ ನಿರೀಕ್ಷೆ ಇನ್ನಷ್ಟು ಹೆಚ್ಚಾಗಿದೆ.

'ಪ್ರೀಪ್ರೊಡಕ್ಷನ್ ಕೆಲಸಗಳು ಚಾಲ್ತಿಯಲ್ಲಿವೆ. ಈ ಪಾತ್ರಕ್ಕೆ ಮಮ್ಮುಟ್ಟಿ ಹೊರತಾಗಿ ಬೇರೆ ಯಾವ ನಟನೂ ಸೂಕ್ತವಲ್ಲ ಎನ್ನುವಂತಿದೆ. ಹೀಗಾಗಿ ಅವರ ಜತೆಯೇ ಈ ಸಿನಿಮಾ ಮಾಡಲು ನಿರ್ಧರಿಸಿದೆ' ಎಂದು ಅಡೂರು ಈ ಹಿಂದೆ ಹೇಳಿದ್ದರು.

ಚಿಟಿಕೆ ಸುದ್ದಿ

ಕರಾವಳಿ ಪಡೆಗೆ 'ಸಮುದ್ರ ಪ್ರತಾಪ್'

ನವದೆಹಲಿ (ಪಿಟಿಐ): ದೇಶೀಯವಾಗಿ ವಿನ್ಯಾಸಗೊಳಿಸಿ ನಿರ್ಮಿಸಿರುವ ಮಾಲಿನ್ಯ ನಿಯಂತ್ರಣ ಹಡಗು 'ಸಮುದ್ರ ಪ್ರತಾಪ್' ಅನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಜ.5ರ ಸೋಮವಾರ ಭಾರತೀಯ ಕರಾವಳಿ ಪಡೆಗೆ ಸೇರ್ಪಡೆಗೊಳಿಸಲಿದ್ದಾರೆ.

4,200 ಟನ್ ತೂಕದ ಈ ಹಡಗು ಗಂಟೆಗೆ 22 ನಾಟಿಕಲ್ ಮೈಲು ವೇಗದಲ್ಲಿ ಚಲಿಸಲಿದ್ದು, 6 ಸಾವಿರ ನಾಟಿಕಲ್ ಮೈಲು ದೂರ ಚಲಿಸುವ ಸಾಮರ್ಥ್ಯ ಹೊಂದಿದೆ. 114.5 ಮೀಟರ್ ಉದ್ದವಿದ್ದು, ಶೇ 60ರಷ್ಟು ದೇಶೀಯ ವಸ್ತುಗಳಿಂದಲೇ ನಿರ್ಮಾಣಗೊಂಡಿದೆ.

ಕಡಲ ಮಾಲಿನ್ಯ ನಿಯಂತ್ರಣ ನಿಯಮಗಳು, ಕಡಲ ಕಾನೂನು ಜಾರಿ, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು ಸೇರಿದಂತೆ ವಿಶೇಷ ಆರ್ಥಿಕ ವಲಯವನ್ನು (ಇಇಝೆಡ್) ರಕ್ಷಿಸುವಲ್ಲಿ ಈ ಹಡಗು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ.

ಕೇರಳ: ಸತೀಶನ್ ವಿರುದ್ಧ ಸಿಬಿಐ ತನಿಖೆಗೆ ಶಿಫಾರಸು


ವಿ.ಡಿ. ಸತೀಶನ್

ತಿರುವನಂತಪುರ (ಪಿಟಿಐ): ವಿದೇಶಗಳಿಂದ ನಿಧಿ ಸಂಗ್ರಹಿಸುವ ವೇಳೆ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿ ರಾಜ್ಯ ವಿಧಾನಸಭೆ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್ ಮುಖಂಡ ವಿ.ಡಿ. ಸತೀಶನ್ ವಿರುದ್ಧ ಸಿಬಿಐ ತನಿಖೆ ನಡೆಸಬೇಕು ಎಂದು ಕೇರಳದ ಜಾಗೃತ ಹಾಗೂ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಶಿಫಾರಸು ಮಾಡಿದೆ ಎಂದು ಮೂಲಗಳು ತಿಳಿಸಿವೆ.

'ಕೇಂದ್ರ ಸರ್ಕಾರದಿಂದ ಅನುಮತಿ ಪಡೆದ ಬಳಿಕ ಸತೀಶನ್ ವಿದೇಶಗಳಿಗೆ ಭೇಟಿ ನೀಡಿದ್ದರು, ಆಗ, ಸಂಗ್ರಹಿಸಿದ್ದ ನಿಧಿಯನ್ನು ಕೇರಳದಲ್ಲಿನ ಖಾತೆಗಳಿಗೆ ವರ್ಗಾಯಿಸಿದ್ದರು. ಈ ಮೂಲಕ ಅವರು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ ಉಲ್ಲಂಘಿಸಿದ್ದಾರೆ' ಎಂದು ಆರೋಪಿಸಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಸತೀಶನ್, 'ಈ ವಿಚಾರದ ವಿರುದ್ಧ ನಾನು ಹೋರಾಡುತ್ತೇನೆ' ಎಂದು ಹೇಳಿದ್ದಾರೆ.

ಕಾಶ್ಮೀರ: ಉಗ್ರರ ಅಡಗುತಾಣ ನಾಶ

ಶ್ರೀನಗರ (ಪಿಟಿಐ): ಜಮ್ಮು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿದ್ದ ಉಗ್ರರ ಅಡಗುತಾಣವೊಂದನ್ನು ಭದ್ರತಾ ಪಡೆ ಅಧಿಕಾರಿಗಳು ನಾಶಗೊಳಿಸಿದ್ದಾರೆ.

ಅಡಗುತಾಣದಲ್ಲಿದ್ದ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

ಜಿಲ್ಲೆಯ ಶೀರಿ ಪ್ರದೇಶದಲ್ಲಿರುವ ಅರಣ್ಯದಲ್ಲಿ ಶನಿವಾರ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಅಡಗುತಾಣ ಪತ್ತೆಯಾಯಿತು. ಎರಡು ಹ್ಯಾಂಡ್ ಗ್ರೆನೇಡ್‌ಗಳು, ಎಕೆ–47 ರೈಫಲ್‌ನ 24 ಗುಂಡುಗಳು, ವೈರ್‌ಲೆಸ್ ಆ್ಯಂಟೆನಾ ಹಾಗೂ ಒಂದು ಕೊಡಲಿ ಸೇರಿದಂತೆ ಹಲವು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಎಸ್‌ಐಆರ್ ಸ್ಥಗಿತಕ್ಕೆ ಮಮತಾ ಆಗ್ರಹ

ಸಿಇಸಿ ಜ್ಞಾನೇಶ್ ಕುಮಾರ್‌ಗೆ ಪತ್ರ ಬರೆದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಗ್ರಹಿಸಿದ್ದಾರೆ.

ಈ ಕುರಿತು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರಿಗೆ ಪತ್ರ ಬರೆದಿರುವ ಮಮತಾ, 'ಆಯೋಗ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಪಾಯಕ್ಕೆ ಶಾಶ್ವತ ಹಾನಿ ಉಂಟು ಮಾಡಲಿದೆ ಹಾಗೂ ಮತ ಚಲಾಯಿಸುವ ಹಕ್ಕಿನಿಂದ ಜನರು ವಂಚಿತರಾಗುವಂತೆ ಮಾಡಲಿದೆ' ಎಂದು ವಿವರಿಸಿದ್ದಾರೆ.

'ಎಸ್‌ಐಆರ್ ನಡೆಸುವ ವೇಳೆ ಹಲವು ಅಕ್ರಮಗಳು ನಡೆಯುತ್ತಿವೆ, ನಿಯಮಗಳ ಉಲ್ಲಂಘನೆಯಾಗುತ್ತಿದೆ' ಎಂದು ಆರೋಪಿಸಿರುವ ಅವರು, 'ಇಡೀ ಪ್ರಕ್ರಿಯೆಯನ್ನು ಯಾವುದೇ ಪೂರ್ವತಯಾರಿ ಇಲ್ಲದೆಯೇ ಕೈಗೊಳ್ಳಲಾಗಿದೆ' ಎಂದು ಡಿಸೆಂಬರ್ 3ರಂದು ಬರೆದಿರುವ ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

'ಅವಸರದಿಂದ ಹಾಗೂ ಸೂಕ್ತ ತಯಾರಿ ಇಲ್ಲದೆಯೇ ಎಸ್‌ಐಆರ್ ಕೈಗೊಳ್ಳಲಾಗಿದೆ. ಕಂಪ್ಯೂಟರ್, ತಂತ್ರಾಂಶ ಸೇರಿ ಅಗತ್ಯ ಮೂಲಸೌಕರ್ಯಗಳ ಕೊರತೆ ಇದೆ. ಸಿಬ್ಬಂದಿಗೆ ಸಮರ್ಪಕ ತರಬೇತಿಯನ್ನೂ ನೀಡಲಾಗಿಲ್ಲ' ಎಂದು ಆರೋಪಿಸಿದ್ದಾರೆ.

ಅಹವಾಲು ಸಲ್ಲಿಕೆ ಬಳಿಕ ವೃದ್ಧ ಸಾವು: ಜಟಾಪಟಿ

ಕೋಲ್ಕತ್ತ/ಜಯನಗರ: ಆಸ್ಪತ್ರೆಯಿಂದ ಮನೆಗೆ ಕಳುಹಿಸಲಾಗಿದ್ದ 68 ವರ್ಷದ ವ್ಯಕ್ತಿ, ಎಸ್‌ಐಆರ್ ಭಾಗವಾಗಿ ನಡೆದ ಅಹವಾಲು ಆಲಿಕೆ ಸಭೆಗೆ ಹಾಜರಾದ ಕೆಲ ದಿನಗಳ ಬಳಿಕ ಮೃತಪಟ್ಟಿರುವುದು ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿದೆ.

24 ದಕ್ಷಿಣ ಪರಗಣ ಜಿಲ್ಲೆಯ ಉತ್ತರ ಠಾಕೂರೆಚಕ್ ಪ್ರದೇಶದ ನಜಿತ್ ಉಲ್ ಮೊಲ್ಲಾ ಶನಿವಾರ ರಾತ್ರಿ ಮೃತಪಟ್ಟಿದ್ದಾರೆ.

'ಉಸಿರಾಟದ ತೊಂದರೆಯಿಂದಾಗಿ ನಜಿತ್ ಉಲ್ ಮೊಲ್ಲಾ ಅವರನ್ನು ಡಿ.20ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎಸ್‌ಐಆರ್‌ಗೆ ಸಂಬಂಧಿಸಿ ಖುದ್ದು ಹಾಜರಾಗಿ ಮಾಹಿತಿ ಒದಗಿಸುವಂತೆ ಇತ್ತೀಚೆಗೆ ಅವರಿಗೆ ನೋಟಿಸ್ ನೀಡಲಾಗಿತ್ತು' ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

'ಡಿ.28ರಂದು ಅವರನ್ನು ಮನೆಗೆ ಕಳುಹಿಸಲಾಯಿತು. ಮೂಗಿನ ಮೂಲಕ ಅಳವಡಿಸಿದ್ದ ಕ್ಯಾನುಲಾವನ್ನು ತೆಗೆದಿರಲಿಲ್ಲ. ಅದೇ ಸ್ಥಿತಿಯಲ್ಲಿ ಅವರು ಡಿ.31ರಂದು ಎಸ್‌ಐಆರ್ ನಡೆಸುತ್ತಿದ್ದ ಸಿಬ್ಬಂದಿ ಮುಂದೆ ಹಾಜರಾಗಿದ್ದರು' ಎಂದು ತಿಳಿಸಿದ್ದಾರೆ.

'ಮನೆಗೆ ಮರಳಿದ ಬಳಿಕ ಅವರ ಆರೋಗ್ಯ ಹದಗೆಟ್ಟ ಕಾರಣ, ಜನವರಿ 2ರಂದು ಪುನಃ ಆಸ್ಪತ್ರೆಗೆ ದಾಖಲಿಸಲಾಯಿತು. ಶನಿವಾರ ರಾತ್ರಿ ಅವರು ಮೃತಪಟ್ಟರು' ಎಂದೂ ತಿಳಿಸಿದ್ದಾರೆ.

ಆರೋಪ–ಪ್ರತ್ಯಾರೋಪ: ಈ ವಿಚಾರ ಮುಂದಿಟ್ಟುಕೊಂಡು ಕೇಂದ್ರ ಚುನಾವಣಾ ಆಯೋಗ ಹಾಗೂ ಬಿಜೆಪಿ ವಿರುದ್ಧ ಟಿಎಂಸಿ ವಾಗ್ದಾಳಿ ನಡೆಸಿದೆ.

'ಎಸ್‌ಐಆರ್‌ನಿಂದಾಗಿ ಮತದಾರರಲ್ಲಿ ಆತಂಕ, ಒತ್ತಡ ಅಥವಾ ಆತ್ಮಹತ್ಯಾ ಯೋಚನೆಗಳು ಕಂಡುಬರುತ್ತಿವೆ. ಇಂತಹ ಮಾನಸಿಕ ಸಮಸ್ಯೆಯಿಂದಾಗಿ ಈವರೆಗೆ ರಾಜ್ಯದಲ್ಲಿ 56 ಜನರು ಮೃತಪಟ್ಟಿದ್ದಾರೆ' ಎಂದು ಟಿಎಂಸಿ ಟೀಕಿಸಿದೆ.

'ಇವು ರಾಜಕೀಯ ಪ್ರೇರಿತ ಆರೋಪಗಳು' ಎಂದು ಬಿಜೆಪಿ ತಿರುಗೇಟು ನೀಡಿದೆ.

'ಮತದಾರರ ಪಟ್ಟಿಯ ಪರಿಷ್ಕರಣೆ ದೇಶದಾದ್ಯಂತ ನಡೆಯುತ್ತಿದೆ. ರಾಜ್ಯದಲ್ಲಿ ಸಂಭವಿಸಿದ ಸಾವುಗಳನ್ನು ಟಿಎಂಸಿ ತನ್ನ ರಾಜಕೀಯ ಲಾಭಕ್ಕೆ ಹಾಗೂ ಬಿಜೆಪಿ ಹೆಸರಿಗೆ ಮಸಿ ಬಳಿಯಲು ಬಳಸಿಕೊಳ್ಳುತ್ತಿದೆ' ಎಂದು ಬಿಜೆಪಿ ನಾಯಕರು ಆರೋಪಿಸಿದ್ದಾರೆ.

ಈ ಕುರಿತು ಚುನಾವಣಾ ಆಯೋಗ ಈ ವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್‌ಗೆ 15ನೇ ಬಾರಿ ಪೆರೋಲ್

ಚಂಡೀಗಢ (ಪಿಟಿಐ): ಅತ್ಯಾಚಾರ ಪ್ರಕರಣದಲ್ಲಿ 20 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್‌ಗೆ ಮತ್ತೆ 40 ದಿನಗಳ ಪೆರೋಲ್ ನೀಡಲಾಗಿದೆ.

40 ದಿನಗಳ ಪೆರೋಲ್

ಸದ್ಯ ಗುರ್ಮೀತ್ ಹರಿಯಾಣದ ರೋಹ್ಟಕ್‌ನ ಸುನಾರಿಯಾ ಜೈಲಿನಲ್ಲಿದ್ದಾನೆ. ಅತ್ಯಾಚಾರ ಪ್ರಕರಣದಲ್ಲಿ 2017ರಲ್ಲಿ ಶಿಕ್ಷೆಗೆ ಒಳಗಾದ ನಂತರ ಇದುವರೆಗೆ 14 ಬಾರಿ ಪೆರೋಲ್ ಪಡೆದು ಜೈಲಿನಿಂದ ಹೊರಬಂದಿದ್ದಾನೆ. 2025ರ ಆಗಸ್ಟ್‌ನಲ್ಲೂ ಗುರ್ಮೀತ್‌ಗೆ 40 ದಿನಗಳ ಪೆರೋಲ್ ಲಭಿಸಿತ್ತು.

2024ರ ಅಕ್ಟೋಬರ್‌ನಲ್ಲಿ 20 ದಿನ, 2025ರ ಏಪ್ರಿಲ್‌ನಲ್ಲಿ 21 ದಿನ, 2025ರ ಜನವರಿಯಲ್ಲಿ 30 ದಿನ ಪೆರೋಲ್ ಲಭಿಸಿತ್ತು. ದೆಹಲಿ, ಹರಿಯಾಣ, ಪಂಜಾಬ್ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲೂ ಗುರ್ಮೀತ್‌ಗೆ ಪೆರೋಲ್ ನೀಡಲಾಗಿತ್ತು. 16 ವರ್ಷಗಳ ಹಿಂದೆ ನಡೆದಿದ್ದ ಪತ್ರಕರ್ತನ ಕೊಲೆ ಪ್ರಕರಣದಲ್ಲಿ ಸಿಂಗ್ ಮತ್ತು ಇತರ ಮೂವರು ಆರೋಪಿಗಳ ವಿರುದ್ಧ 2019ರಲ್ಲಿ ಆರೋಪ ಸಾಬೀತಾಗಿತ್ತು.

2002ರಲ್ಲಿ ನಡೆದಿದ್ದ ಡೇರಾ ಸಚ್ಚಾ ಸೌದಾದ ಮಾಜಿ ವ್ಯವಸ್ಥಾಪಕ ರಂಜಿತ್ ಸಿಂಗ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಜಾಬ್ ಮತ್ತು ಹರಿಯಾಣ ಕೋರ್ಟ್ ಸಿಂಗ್ ಮತ್ತು ಇತರೆ ನಾಲ್ವರು ಆರೋಪಿಗಳನ್ನು 2024ರ ಮೇ ತಿಂಗಳಲ್ಲಿ ಖುಲಾಸೆಗೊಳಿಸಿತ್ತು.

ಶಿರೋಮಣಿ ಗುರುದ್ವಾರ ಪ್ರಬಂಧಕ್ ಸಮಿತಿ ಸೇರಿದಂತೆ ಸಿಖ್ ಸಂಘಟನೆಗಳು ಸಿಂಗ್‌ಗೆ ಪೆರೋಲ್ ನೀಡುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿವೆ.

'ಶೀಘ್ರವೇ ಎನ್‌ಡಿಎ ತೆಕ್ಕೆಗೆ ತಮಿಳುನಾಡು, ಪ.ಬಂಗಾಳ'


ಅಮಿತ್ ಶಾ

ಪುದುಕೊಟ್ಟೈ (ಪಿಟಿಐ): 'ಪ್ರಸಕ್ತ ವರ್ಷ ನಡೆಯಲಿರುವ ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟವು ಗೆಲುವು ಸಾಧಿಸಲಿದೆ. ಈ ಎರಡೂ ರಾಜ್ಯಗಳು ಎನ್‌ಡಿಎ ತೆಕ್ಕೆಗೆ ಸೇರಲಿವೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಲ್ಲಿ ನಡೆದ ಬಿಜೆಪಿ ರ್‍ಯಾಲಿಯಲ್ಲಿ ಮಾತನಾಡಿದ ಅವರು, 2024ರಿಂದ ಬಿಜೆಪಿ–ಎನ್‌ಡಿಎ ಗೆಲುವುಗಳು, ಹರಿಯಾಣದಲ್ಲಿ ಸತತ 3ನೇ ಬಾರಿಯೂ ವಿಜಯ ಸಾಧಿಸಿದ್ದನ್ನು ಪಟ್ಟಿ ಮಾಡಿದ್ದಾರೆ. ಇದೇ ವೇಳೆ ಎನ್‌ಡಿಎ ತೆಕ್ಕೆಗೆ ಸೇರುವ ಸರದಿ ಈಗ ತಮಿಳುನಾಡು, ಪಶ್ಚಿಮ ಬಂಗಾಳದ್ದು ಎಂದಿದ್ದಾರೆ.

ಆಡಳಿತಾರೂಢ ಡಿಎಂಕೆ ವಿರುದ್ಧ ಹರಿಹಾಯ್ದು,

> **ಡಿಎಂಕೆ ಸರ್ಕಾರದ್ದು ದೇಶದಲ್ಲೇ ಅತ್ಯಂತ ಭ್ರಷ್ಟ ಆಡಳಿತ. ರಾಜ್ಯದಲ್ಲಿ ಶೇಕಡ 20ರಷ್ಟು ಕಮಿಷನ್ ನೀತಿ ಜಾರಿಯಲ್ಲಿದ್ದು, ರಾಜ್ಯದ ಆರ್ಥಿಕತೆಯನ್ನು ಸಾಲ ಹಾಗೂ ಮದ್ಯ ಮಾರಾಟದಿಂದ ನಡೆಸಲಾಗುತ್ತಿದೆ**
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

'ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಪುತ್ರ ಉದಯನಿಧಿ ಸ್ಟಾಲಿನ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದೇ ಡಿಎಂಕೆ ಆಡಳಿತದ ಏಕಮಾತ್ರ ಉದ್ದೇಶ. ಕುಟುಂಬ ರಾಜಕಾರಣವನ್ನು ಶಾಶ್ವತಗೊಳಿಸುವ ಕನಸು ಈ ಬಾರಿ ನನಸಾಗುವುದಿಲ್ಲ. ರಾಜ್ಯದಲ್ಲಿ ಕುಟುಂಬ ರಾಜಕಾರಣ ಅಂತ್ಯಗೊಳಿಸುವ ಸಮಯ ಬಂದಾಗಿದೆ' ಎಂದೂ ಅವರು ಹೇಳಿದ್ದಾರೆ.

ಇತ್ತ ಅಮಿತ್ ಶಾ ರ್‍ಯಾಲಿ ನಡೆಯುತ್ತಿರುವಾಗಲೇ ಅತ್ತ ಸೇಲಂ ಜಿಲ್ಲೆಯಲ್ಲಿ ಬಿಜೆಪಿಯ ಪ್ರಮುಖ ಮೈತ್ರಿ ಪಕ್ಷವಾಗಿರುವ ಎಐಎಡಿಎಂಕೆಯ ಮುಖ್ಯಸ್ಥ ಎಡಪ್ಪಾಡಿ ಕೆ.ಪಳನಿಸ್ವಾಮಿ ಕೂಡ ರ್‍ಯಾಲಿ ನಡೆಸಿದರು.

ಎಸ್‌ಐಆರ್ ಕರ್ತವ್ಯಕ್ಕೆ ಅಡ್ಡಿ: ವರದಿ ನೀಡಲು ಡಿಜಿಪಿಗೆ ಸೂಚನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿನ ಎಸ್‌ಐಆರ್ ವಿಚಾರಣಾ ಕೇಂದ್ರವೊಂದಕ್ಕೆ ಚುನಾವಣಾ ನೋಂದಣಾಧಿಕಾರಿ (ಇಆರ್‌ಒ) ತೆರಳುತ್ತಿದ್ದಾಗ ಗಂಭೀರ ಭದ್ರತಾಲೋಪವಾಗಿದ್ದು, ಈ ಬಗ್ಗೆ ಜನವರಿ 6ರೊಳಗಾಗಿ ಸಮಗ್ರ ವರದಿ ನೀಡಬೇಕು ಎಂದು ಕೇಂದ್ರ ಚುನಾವಣಾ ಆಯೋಗವು ಪಶ್ಚಿಮ ಬಂಗಾಳ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿದೆ.

ಹಿರಿಯ ಅಧಿಕಾರಿ ಮುರುಗನ್ ಅವರು ಡಿಸೆಂಬರ್ 29ರಂದು ಎಸ್‌ಐಆರ್ ವಿಚಾರಣಾ ಕೇಂದ್ರಕ್ಕೆ ತೆರಳುತ್ತಿದ್ದಾಗ ಭದ್ರತಾ ಲೋಪ ಸಂಭವಿಸಿದೆ. ಇಂಥ ಹಲವು ಘಟನೆಗಳು ನಡೆದಿದ್ದು, ಈ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ನೀಡಬೇಕು ಎಂದು ಆಯೋಗವು ಪೊಲೀಸ್ ಮಹಾನಿರ್ದೇಶಕರಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದೆ.

ಕೆಲಸಕ್ಕೆ ಅಡ್ಡಿಪಡಿಸುವುದು ಮತ್ತು ಅಧಿಕಾರಿಗಳ ವಾಹನಕ್ಕೆ ಅಡ್ಡಿಪಡಿಸಿರುವ ಕುರಿತು ವರದಿಗಳಾಗಿವೆ. ಚುನಾವಣಾ ಅಧಿಕಾರಿಗಳ ಪ್ರವಾಸದ ಬಗ್ಗೆ ಮುಂಚಿತವಾಗಿ ಮಾಹಿತಿ ನೀಡಿದ್ದರೂ ಸೂಕ್ತ ಭದ್ರತೆ ನೀಡಲಾಗಿಲ್ಲ. ಚುನಾವಣಾ ಆಯೋಗದ ವಿಶೇಷ ವೀಕ್ಷಕರು ಮತ್ತು ಬಂಗಾಳದ ಮುಖ್ಯ ಚುನಾವಣಾಧಿಕಾರಿ ಸಲ್ಲಿಸಿರುವ ವರದಿಗಳಲ್ಲೂ ಈ ಬಗ್ಗೆ ಉಲ್ಲೇಖಗಳಿವೆ ಎಂದು ಆಯೋಗ ಹೇಳಿದೆ.

'ಟಿವಿಕೆ ಪಕ್ಷದ ಜತೆ ಮೈತ್ರಿ ಇಲ್ಲ'

ಚೆನ್ನೈ (ಪಿಟಿಐ): ಈ ವರ್ಷ ತಮಿಳುನಾಡಿನಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ, ನಟ ವಿಜಯ್ ನೇತೃತ್ವದ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆಯನ್ನು ಕಾಂಗ್ರೆಸ್ ತಳ್ಳಿ ಹಾಕಿದೆ.

ರಾಜ್ಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಸೆಲ್ವಪೆರುಂತಗೈ ಹಾಗೂ ತಮಿಳುನಾಡು ರಾಜ್ಯ ಕಾಂಗ್ರೆಸ್‌ನ ಎಐಸಿಸಿ ಉಸ್ತುವಾರಿ ಗಿರೀಶ್ ಚೋಡಂಕರ್ ಅವರು ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಸೀಟು ಹಂಚಿಕೆ ಸೇರಿದಂತೆ ಚುನಾವಣೆಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಶೀಘ್ರವೇ ಡಿಎಂಕೆ ನಾಯಕರು ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ಹೇಳಿದರು.

'ಕಾಂಗ್ರೆಸ್ ಪಕ್ಷವು ಡಿಎಂಕೆಯೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿಲ್ಲ ಎಂದು ನಿಮಗೆ ಯಾರಾದರು ಹೇಳಿದ್ದಾರೆಯೇ' ಎಂದೂ ಪ್ರಶ್ನಿಸಿದರು.

'ಡಿಎಂಕೆಯೊಂದಿಗೆ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ಆಸಕ್ತಿ ಹೊಂದಿದ್ದರಿಂದ, ಸೀಟು ಹಂಚಿಕೆ ಕುರಿತು ಮಾತುಕತೆ ನಡೆಸಲು ಒಂದೂವರೆ ತಿಂಗಳ ಹಿಂದೆ ಸಮಿತಿಯನ್ನು ರಚಿಸಿತು' ಎಂದರು.

ಅಧಿಕಾರ ಹಂಚಿಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಚೋಡಂಕರ್, 'ಯಾವುದಾದರೂ ರಾಜಕೀಯ ಪಕ್ಷವು ಅಧಿಕಾರ ಬೇಡ ಎನ್ನುತ್ತದೆಯೇ? ಹಾಗೆಂದರೆ ನಾವು ನಮ್ಮನ್ನು ಎನ್‌ಜಿಒಗಳು ಎಂದು ಹೆಸರಿಸಿಕೊಳ್ಳಬೇಕಾಗುತ್ತದೆ' ಎಂದರು.

ಕಾಂಗ್ರೆಸ್ ನಾಯಕ ಪ್ರವೀಣ್ ಚಕ್ರವರ್ತಿ ಅವರು ಟಿವಿಕೆ ಮುಖ್ಯಸ್ಥ ವಿಜಯ್ ಅವರನ್ನು ಇತ್ತೀಚೆಗೆ ಭೇಟಿಯಾಗಿದ್ದರು.

> **ಡಿಎಂಕೆ ವಿಶ್ವಾಸಾರ್ಹ ಮತ್ತು ದೀರ್ಘಕಾಲದ ಮಿತ್ರಪಕ್ಷವಾಗಿದೆ. ನಾವು ಟಿವಿಕೆಯೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿಲ್ಲ**
> **ಗಿರೀಶ್ ಚೋಡಂಕರ್,** ಎಐಸಿಸಿ ತಮಿಳುನಾಡು ಉಸ್ತುವಾರಿ

ಐಎಎಸ್ ಅಧಿಕಾರಿ ಇ.ಡಿ. ವಶಕ್ಕೆ

ಅಹಮದಾಬಾದ್ (ಪಿಟಿಐ): 'ಸುರೇಂದ್ರ ನಗರದ ಈ ಹಿಂದಿನ ಜಿಲ್ಲಾಧಿಕಾರಿಯೂ ಆಗಿದ್ದ ಐಎಎಸ್ ಅಧಿಕಾರಿ ರಾಜೇಂದ್ರ ಕುಮಾರ್ ಪಟೇಲ್ ಅವರು ಭೂ ಬಳಕೆ ಬದಲಾವಣೆ ಅರ್ಜಿಯನ್ನು ಅನುಮೋದಿಸಲು ಒಂದು ಚದರ ಮೀಟರ್‌ಗೆ ₹5ರಿಂದ ₹10 ಲಂಚ ಪಡೆಯುತ್ತಿದ್ದರು' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

ಪಟೇಲ್ ಅವರನ್ನು ವಶಕ್ಕೆ ನೀಡುವಂತೆ ಜ.2ರಂದು ಇ.ಡಿ ಅಧಿಕಾರಿಗಳು ಪಿಎಂಎಲ್‌ಎ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಜ.7ರವರೆಗೆ ನ್ಯಾಯಾಲಯವು ಅವರನ್ನು ಇ.ಡಿ. ವಶಕ್ಕೆ ನೀಡಿತು. ಅರ್ಜಿಯಲ್ಲಿ ಈ ಎಲ್ಲ ಮಾಹಿತಿಯನ್ನು ವಿವರಿಸಲಾಗಿದೆ. ಪಟೇಲ್ ವಿರುದ್ಧದ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಇ.ಡಿ ನಡೆಸುತ್ತಿದೆ.

'ಅರ್ಜಿಗಳು ತ್ವರಿತವಾಗಿ ಅನುಮೋದನೆಗೊಳ್ಳಬೇಕೆಂದರೆ 'ತ್ವರಿತವಾಗಿ ಹಣ' ಸಂದಾಯವಾಗಬೇಕಿತ್ತು. ಜಿಲ್ಲಾಧಿಕಾರಿ ಕಚೇರಿಯೇ ಈ ಭ್ರಷ್ಟಾಚಾರ ಜಾಲವನ್ನು ನಿರ್ವಹಿಸುತ್ತಿತ್ತು. ಸುಮಾರು 800ಕ್ಕೂ ಅಧಿಕ ಅರ್ಜಿಗಳನ್ನು ಇಲ್ಲಿಯವರೆಗೆ ತನಿಖೆಗೆ ಒಳಪಡಿಸಲಾಗಿದೆ. ಇವುಗಳಿಂದ ಸುಮಾರು ₹10 ಕೋಟಿ ಲಂಚವನ್ನು ಪಡೆದುಕೊಳ್ಳಲಾಗಿದೆ. ಪ್ರಕರಣ ಬಹಿರಂಗವಾದ ಬಳಿಕ, ಪಟೇಲ್ ಅವರನ್ನು ಜಾಗ ಸೂಚಿಸದೇ ವರ್ಗಾವಣೆ ಮಾಡಲಾಗಿದೆ' ಎಂದು ಇ.ಡಿ ತಿಳಿಸಿದೆ.

'ಪಟೇಲ್ ಅವರಿಗೆ ಶೇ 50ರಷ್ಟು ಹಣ'

'ಪಟೇಲ್ ಅವರ ಆಪ್ತ ಸಹಾಯಕನ ಮೂಲಕವೇ ಎಲ್ಲವೂ ನಡೆಯುತ್ತಿದ್ದವು. ಅರ್ಜಿಯೊಂದರಿಂದ ಪಡೆದ ಲಂಚದ ಶೇ 50ರಷ್ಟು ಹಣವು ಪಟೇಲ್ ಅವರಿಗೇ ಸಂದಾಯವಾಗುತ್ತಿತ್ತು. ಮತ್ತು ಇವರೇ ಈ ಜಾಲದ ಸೂತ್ರಧಾರರು. ಶೇ 10ರಷ್ಟು ಹಣವು ಮಧ್ಯವರ್ತಿಗೆ ಸಂದಾಯವಾಗುತ್ತಿದೆ. ಉಳಿದ ಹಣವನ್ನು ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳು ಹಂಚಿಕೊಳ್ಳುತ್ತಿದ್ದರು' ಎಂದು ಇ.ಡಿ ಹೇಳಿದೆ.

ತ್ರಿಶ್ಶೂರ್: 500 ದ್ವಿಚಕ್ರ ವಾಹನ ಭಸ್ಮ

ಪ್ರಜಾವಾಣಿ ವಾರ್ತೆ/ಪಿಟಿಐ

ತ್ರಿಶ್ಶೂರ್: ಇಲ್ಲಿನ ರೈಲು ನಿಲ್ದಾಣದ ದ್ವಿಚಕ್ರ ವಾಹನ ನಿಲುಗಡೆ ಪ್ರದೇಶದಲ್ಲಿ ಭಾನುವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಲ್ಲಿ ನಿಲ್ಲಿಸಲಾಗಿದ್ದ ಸುಮಾರು 500ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು ಸುಟ್ಟು ಕರಕಲಾಗಿವೆ. ಇಲ್ಲಿ ಸುಮಾರು 600 ದ್ವಿಚಕ್ರ ವಾಹನಗಳನ್ನು ನಿಲ್ಲಿಸಲಾಗಿತ್ತು ಎನ್ನಲಾಗಿದೆ.

ವಾಹನ ನಿಲುಗಡೆ ಗುತ್ತಿಗೆ ಪಡೆದಿದ್ದ ಕಂಪನಿಗೆ ಸೇರಿದ 2 ಮೊಬೈಲ್, ₹10 ಸಾವಿರ ನಗದು ಮತ್ತು ರಶೀದಿ ಮುದ್ರಿಸುವ ಯಂತ್ರವೂ ಸುಟ್ಟು ಹೋಗಿದೆ.

ವಿದ್ಯುತ್ ತಂತಿಯಲ್ಲಿ ಹೊತ್ತಿಕೊಂಡಿದ್ದ ಕಿಡಿ ಎರಡು ದ್ವಿಚಕ್ರ ವಾಹನಗಳ ಮೇಲೆ ಬಿದ್ದಿದ್ದರಿಂದ ಬೆಂಕಿ ಹೊತ್ತಿಕೊಂಡಿತು ಎನ್ನಲಾಗುತ್ತಿದೆ.

ಆಂಬುಲೆನ್ಸ್‌ನಲ್ಲಿ ಮಹಿಳೆ ಮೇಲೆ ಅತ್ಯಾಚಾರ

ಫರೀದಾಬಾದ್ (ಪಿಟಿಐ): ಚಲಿಸುತ್ತಿದ್ದ ಆಂಬುಲೆನ್ಸ್‌ನಲ್ಲಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿರುವ ಘಟನೆ ಫರೀದಾಬಾದ್‌ನಲ್ಲಿ ನಡೆದಿದ್ದು, ಆರು ದಿನಗಳ ಬಳಿಕ ದುಷ್ಕೃತ್ಯ ಗೊತ್ತಾಗಿದೆ.

'ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಇವರು ಉತ್ತರ ಪ್ರದೇಶದ ಮಥುರಾ ಮತ್ತು ಝಾನ್ಸಿ ಪ್ರದೇಶಕ್ಕೆ ಸೇರಿದವರು. ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ತನಿಖಾಧಿಕಾರಿ ಭಾನುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಅತ್ಯಾಚಾರ ನಡೆದಿರುವುದು ವ್ಯಾನ್‌ನಲ್ಲಿ ಅಲ್ಲ, ಖಾಸಗಿ ಆಸ್ಪತ್ರೆಗೆ ಸೇರಿದ ಆಂಬುಲೆನ್ಸ್‌ನಲ್ಲಿ. ಆರೋಪಿಗಳಲ್ಲಿ ಒಬ್ಬ ಇದೇ ಆಂಬುಲೆನ್ಸ್‌ನಲ್ಲಿ ಚಾಲಕನಾಗಿ, ಮತ್ತೊಬ್ಬ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಇಬ್ಬರೂ ಸೇರಿಕೊಂಡು ಚಲಿಸುತ್ತಿರುವ ಆಂಬುಲೆನ್ಸ್‌ನಲ್ಲೇ 25 ವರ್ಷದ ಮಹಿಳೆ ಮೇಲೆ ಕೃತ್ಯ ಎಸಗಿದ್ದಾರೆ. ಕೃತ್ಯದ ಬಳಿಕ ಮಹಿಳೆಯನ್ನು ರಸ್ತೆ ಬದಿಗೆ ತಳ್ಳಿ ಪರಾರಿಯಾಗಿದ್ದರು' ಎಂದು ಅವರು ಹೇಳಿದರು.

ವಿಡಿಯೊ ಬಹಿರಂಗ

ಘಟನೆಯ ನಂತರ ರೆಕಾರ್ಡ್ ಮಾಡಿದ್ದು ಎನ್ನಲಾದ ವಿಡಿಯೊವೊಂದು ಪೊಲೀಸರಿಗೆ ಲಭಿಸಿದೆ. ಈ ವಿಡಿಯೊದಲ್ಲಿ, 'ನನಗೆ ಆರೋಪಿಗಳ ಯಾವುದೇ ಪೂರ್ವ ಪರಿಚಯ ಇರಲಿಲ್ಲ. ಲಿಫ್ಟ್ ನೀಡಿದ ಬಳಿಕ, ನಾನು ಕಾರಿನಲ್ಲಿ ಕುಳಿತಿರುವಾಗಲೇ ಆರೋಪಿಗಳಲ್ಲಿ ಒಬ್ಬ ನನ್ನ ಪೇಟಿಎಂ ಅಕೌಂಟ್‌ಗೆ ₹600 ಪಾವತಿಸಿದರು. ಬಳಿಕ ಕಾರ್‌ನ ಬಾಗಿಲು ಲಾಕ್ ಮಾಡಿ, ನನ್ನ ಮೊಬೈಲ್ ಕಿತ್ತುಕೊಂಡರು. ನಾನು ಸಹಾಯಕ್ಕಾಗಿ ಜೋರಾಗಿ ಕೂಗಿಕೊಂಡೆ. ಆದರೆ, ಯಾವುದೇ ಸಹಾಯ ಸಿಗಲಿಲ್ಲ' ಎಂದು ಸಂತ್ರಸ್ತೆ ಹೇಳುತ್ತಿರುವುದು ವಿಡಿಯೊದಲ್ಲಿದೆ. ಈ ವಿಡಿಯೊದ ವಿಶ್ವಾಸಾರ್ಹತೆಯನ್ನು ಪರಿಶೀಲನೆಗೆ ಒಳಪಡಿಸಿಲ್ಲ ಎಂದು ಸುದ್ದಿಸಂಸ್ಥೆ ಹೇಳಿದೆ.

'ಸದ್ಯ ಸಂತ್ರಸ್ತೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ಚೇತರಿಸಿಕೊಂಡ ನಂತರ, ಆರೋಪಿಗಳ ಗುರುತು ಪತ್ತೆ ಕಾರ್ಯ ನಡೆಯಲಿದೆ. ನಂತರ ಅವರನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸ್ ಮೂಲಗಳ ಪ್ರಕಾರ, 'ಸಂತ್ರಸ್ತ ಮಹಿಳೆ ಡಿ.29ರಂದು ಸಂಜೆ ಫರೀದಾಬಾದ್‌ನ ಸೆಕ್ಟರ್ 23ರಲ್ಲಿರುವ ಸ್ನೇಹಿತೆಯ ಮನೆಗೆ ಹೋಗಿದ್ದರು. ಮಧ್ಯರಾತ್ರಿ ವಾಪಸ್ ಬರುವಾಗ ಎನ್‌ಐಟಿ–2 ಚೌಕ್‌ವರೆಗೆ ಆಟೊರಿಕ್ಷಾದಲ್ಲಿ ಬಂದು, ಅಲ್ಲಿಂದ ಮೆಟ್ರೊ ಚೌಕ್‌ಗೆ ನಡೆದುಕೊಂಡು ಹೊರಟಿದ್ದರು. ಅಲ್ಲಿಂದ ಇನ್ನೊಂದು ಆಟೊದಲ್ಲಿ ಮನೆಗೆ ಹೋಗಲು ನಿರ್ಧರಿಸಿದ್ದರು. ಮೆಟ್ರೊ ಚೌಕ್‌ಬಳಿ ಆರೋಪಿಗಳು ಮಹಿಳೆಯನ್ನು ಮನೆಗೆ ತಲುಪಿಸುವುದಾಗಿ ಹೇಳಿ ತಮ್ಮ ವಾಹನಕ್ಕೆ ಹತ್ತಿಸಿಕೊಂಡರು. ಚಲಿಸುತ್ತಿರುವ ವಾಹನದಲ್ಲೇ ಮಹಿಳೆ ಮೇಲೆ ಅತ್ಯಾಚಾರ ಎಸಗಿದರು. ಬೆಳಗಿನ ಜಾವ 3ರ ಸುಮಾರಿಗೆ ಫರೀದಾಬಾದ್‌ನ ರಾಜಾ ಚೌಕ್ ಬಳಿ ರಸ್ತೆಗೆ ಎಸೆದು ಹೋದರು'.

ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿಕೆ

'ಭ್ರಷ್ಟಾಚಾರಕ್ಕೆ ಅನ್ವರ್ಥದಂತಿತ್ತು'

ನವದೆಹಲಿ/ಬೇಗುಸರಾಯ್/ಭುವನೇಶ್ವರ (ಪಿಟಿಐ): 'ಭ್ರಷ್ಟಾಚಾರಕ್ಕೆ ಮತ್ತೊಂದು ಹೆಸರು ನರೇಗಾ ಎನ್ನುವಂತೆ ಈ ಯೋಜನೆ ಇತ್ತು. ಇದಕ್ಕಿಂತಲೂ ಜಿ ರಾಮ್ ಜಿ ಯೋಜನೆಯು ಅತ್ಯುತ್ತಮವಾಗಿದೆ' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭಾನುವಾರ ಹೇಳಿದರು.

ನರೇಗಾ

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ ಕಾಂಗ್ರೆಸ್ ಆರಂಭಿಸಲು ನಿಶ್ಚಯಿಸಿರುವ 'ನರೇಗಾ ಉಳಿಸಿ ಸಂಗ್ರಾಮ'ದ ಕುರಿತು ಅವರು ಆಕ್ಷೇಪ ವ್ಯಕ್ತಪಡಿಸಿದರು.

'ಕಾಂಗ್ರೆಸ್ ಪಕ್ಷವು 'ನರೇಗಾ ಉಳಿಸಿ ಸಂಗ್ರಾಮ' ಎಂಬ ಅಭಿಯಾನವನ್ನು ಘೋಷಿಸಿದೆ. ಇದು ನಿಜವಾದ ಅರ್ಥದಲ್ಲಿ ಭ್ರಷ್ಟಾಚಾರ ಉಳಿಸಿ ಎಂದು ಹೇಳುವಂಥ ಅಭಿಯಾನವಾಗಿದೆ. ಲೋಕಸಭೆಯಲ್ಲಿ ಈ ಯೋಜನೆ ಕುರಿತು ಚರ್ಚೆ ನಡೆದಾಗ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಯಾಕೆ ಗೈರಾಗಿದ್ದರು' ಎಂದು ಪ್ರಶ್ನಿಸಿದರು.

'ನರೇಗಾ ಅಡಿ ನಡೆಸಲಾಗುವ ಕೆಲಸಗಳ ಕುರಿತು ಗ್ರಾಮ ಪಂಚಾಯಿತಿಗಳ ಲೆಕ್ಕಪರಿಶೋಧನೆ ವೇಳೆ 10 ಸಾವಿರದಿಂದ 51 ಸಾವಿರದ ವರೆಗೆ ದೂರುಗಳು ಬಂದಿವೆ. ಒಂದೇ ಕೆಲಸವನ್ನು ಪದೇ ಪದೇ ಮಾಡಿಸಲಾಗುತ್ತದೆ. ಕಾಲುವೆ ಮತ್ತು ರಸ್ತೆಗಳ ಸ್ವಚ್ಛತೆ ಮಾಡುವ ಹೆಸರಿನಲ್ಲಿ ಹಣವನ್ನು ಲೂಟಿ ಮಾಡಲಾಗುತ್ತಿತ್ತು. ಕಾರ್ಮಿಕರಲ್ಲಿ ಶೇ 30ರಷ್ಟು ಮಂದಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಿದ್ದರು' ಎಂದು ದೂರಿದರು.

'ಗಾಂಧಿ ಕನ್ನಡಕ ಪ್ರಚಾರಕ್ಕೆ ಮಾತ್ರ'

'ಕಳೆದ 11 ವರ್ಷಗಳಿಂದ ಗಾಂಧಿ ಅವರ ಕನ್ನಡಕವನ್ನು ಪ್ರಚಾರಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ. ಆದರೆ, ಅವರ ತತ್ವಾದರ್ಶಗಳನ್ನು ನಿರ್ಲಕ್ಷಿಸಲಾಗಿದೆ. ಅಂತೆಯೇ, ಬಿಜೆಪಿಯು ರಾಮನ ಹೆಸರಿನಲ್ಲಿ ಅಧಿಕಾರಕ್ಕೇರಿತು. ಆದರೆ, ಆತನ ತತ್ವಾದರ್ಶಗಳನ್ನು ಮರೆಯಿತು' ಎಂದು ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಭುವನೇಶ್ವರದಲ್ಲಿ ಮಾಧ್ಯಮಗೋಷ್ಠಿ ನಡೆಸಿದ ಅವರು, 'ನರೇಗಾ ಬದಲಿಗೆ ಜಿ ರಾಮ್ ಜಿ ಯೋಜನೆಯನ್ನು ತಂದು ಸುಮಾರು 50 ಕೋಟಿ ಬಡ ಜನರ ಜೀವನೋಪಾಯವನ್ನು ಕಿತ್ತುಕೊಳ್ಳಲಾಗಿದೆ' ಎಂದು ದೂರಿದರು.

'ನರೇಗಾವು ಬೇಡಿಕೆ ಕೇಂದ್ರಿತ ವ್ಯವಸ್ಥೆಯಾಗಿತ್ತು. ಕಾರ್ಮಿಕರು ತಮಗೆ ಕೆಲಸ ನೀಡಿ ಎಂದು ಪಂಚಾಯಿತಿಗಳನ್ನು ಆಗ್ರಹಿಸಬಹುದಿತ್ತು. ಕೆಲವು ದಿನಗಳ ಒಳಗಾಗಿ ಕೆಲಸ ನೀಡದಿದ್ದಲ್ಲಿ, ವೇತನವನ್ನು ಪಾವತಿ ಮಾಡಬೇಕಿತ್ತು. ಇದು ನರೇಗಾ. ಆದರೆ, ಹೊಸ ಕಾಯ್ದೆಯಲ್ಲಿ ಎಲ್ಲ ಕೆಲಸಗಳನ್ನೂ ದೆಹಲಿಯಿಂದಲೇ ನಿರ್ಧರಿಸಬೇಕೆಂದು ಪ್ರಧಾನಿ ಮೋದಿ ಅವರು ನಿಶ್ಚಯಿಸಿದ್ದಾರೆ' ಎಂದರು.

ಮಾಕನ್ ಸಂಚಾಲಕ

'ನರೇಗಾ ಉಳಿಸಿ ಸಂಗ್ರಾಮ' ಅಭಿಯಾನಕ್ಕಾಗಿ ಕಾಂಗ್ರೆಸ್ ಪಕ್ಷವು ಸಮಿತಿಯೊಂದನ್ನು ರಚಿಸಿದ್ದು, ಇದಕ್ಕೆ ಎಐಸಿಸಿ ಖಜಾಂಚಿ ಅಜಯ್ ಮಾಕನ್ ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ. ಈ ಸಮಿತಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಮುಖಂಡ ಸಂದೀಪ್ ದೀಕ್ಷಿತ್, ಎಐಸಿಸಿ ಅಸಂಘಟಿತ ಕಾರ್ಮಿಕರ ವಿಭಾಗದ ಅಧ್ಯಕ್ಷ ಉದಿತ್ ರಾಜ್ ಹಾಗೂ ಕರ್ನಾಟಕದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಮಿತಿಯಲ್ಲಿದ್ದಾರೆ.

'ನರೇಗಾ ಯೋಜನೆಗೆ ಯುಪಿಎ ಸರ್ಕಾರವು ₹2 ಲಕ್ಷ ಕೋಟಿ ನೀಡಿತ್ತು. ಆದರೆ, ಮೋದಿ ಸರ್ಕಾರವು ₹8.48 ಲಕ್ಷ ಕೋಟಿ ನೀಡಿದೆ. ನರೇಗಾ ಮೂಲಕ ಯಾವುದಾದರೂ ಶಾಶ್ವತ ಆಸ್ತಿಯನ್ನು ಸೃಷ್ಟಿಸಲಾಗಿದೆಯೇ? ಅಭಿವೃದ್ಧಿಗಾಗಿ ಹಣ ವಿನಿಯೋಗಿಸಲಾಗಿದೆಯೇ?' ಎಂದರು.

'ಮುಂದಿನ ಆರ್ಥಿಕ ವರ್ಷದಲ್ಲಿ ಜಿ ರಾಮ್ ಜಿಗೆ ₹1.51 ಲಕ್ಷ ಕೋಟಿ ಬಿಡುಗಡೆ ಮಾಡಲಾಗುವುದು. ಇದರಲ್ಲಿ ₹95,600 ಕೋಟಿಯನ್ನು ಕೇಂದ್ರವೇ ನೀಡಲಿದೆ' ಎಂದು ಹೇಳಿದರು.

> **ಜಿ ರಾಮ್ ಜಿ ಯೋಜನೆಯ ಬಗ್ಗೆ ಕಾಂಗ್ರೆಸ್ ಸುಳ್ಳು ಸುದ್ದಿಗಳನ್ನು ಹರಡಬಾರದು. ಬದಲಿಗೆ, ನರೇಗಾವನ್ನು ಉತ್ತಮಗೊಳಿಸಿದ್ದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆ ಹೇಳಬೇಕು**
> **ಶಿವರಾಜ್ ಸಿಂಗ್ ಚೌಹಾಣ್,** ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ

> **ಬಡವರ ಮತ್ತು ಸಮಾಜದ ತಳಸಮುದಾಯಗಳ ಅಭಿವೃದ್ಧಿ, ಉದ್ಯೋಗದ ಕುರಿತು ಕಾಂಗ್ರೆಸ್ ತಲೆಕೆಡಿಸಿಕೊಳ್ಳುವುದಿಲ್ಲ. ರಾಮನ ಕುರಿತು ಮಾತ್ರವೇ ಅವರಿಗೆ ಸಮಸ್ಯೆ ಇರುವುದು**
> **ಗಿರಿರಾಜ್ ಸಿಂಗ್,** ಕೇಂದ್ರ ಸಚಿವ

> **ದೆಹಲಿಯಲ್ಲಿ ಕುಳಿತ ಜನರು ಯಾವ ರಾಜ್ಯದಲ್ಲಿ, ಯಾವ ಜಿಲ್ಲೆಯಲ್ಲಿ ಅಥವಾ ಯಾವ ಗ್ರಾಮದಲ್ಲಿ ಕೆಲಸ ನಡೆಯಬೇಕು ಎಂದು ನಿರ್ಧರಿಸುತ್ತಾರೆ**
> **ರಣದೀಪ್ ಸಿಂಗ್ ಸುರ್ಜೇವಾಲಾ,** ಕಾಂಗ್ರೆಸ್ ನಾಯಕ

ಸುಮಿತ್, ಪ್ರಜ್ವಲ್ ಮೇಲೆ ನಿರೀಕ್ಷೆ

‘ಬೆಂಗಳೂರು ಓಪನ್’ಗೆ ದಶಕದ ಸಂಭ್ರಮ ಸ್ಪರ್ಧಾಕಣದಲ್ಲಿ 19 ದೇಶಗಳ ಆಟಗಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ಭಾರತದ ಸಿಂಗಲ್ಸ್ ಆಟಗಾರರು. (ಎಡದಿಂದ) ಸಾಕೇತ್ ಮೈನೇನಿ, ಮಾನಸ್ ಧಮ್ಮ ಸುಮಿತ್ ನಾಗಲ್, ಪ್ರಜ್ವಲ್ ದೇವ್, ಆರ್ಯನ್ ಶಾ, ದಕ್ಷಿಣೇಶ್ವರ್ ಸುರೇಶ್

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಮಹತ್ವಾಕಾಂಕ್ಷೆಯ ‘ಬೆಂಗಳೂರು ಓಪನ್ ಟೆನಿಸ್ ಟೂರ್ನಿ’ಗೆ ಈಗ ದಶಕದ ಸಂಭ್ರಮ. ಎಟಿಪಿ 125 ಚಾಲೆಂಜರ್ ಟೂರ್ನಿಯ ದರ್ಜೆಗೇರಿರುವ ಹತ್ತನೇ ಆವೃತ್ತಿಯ ಮುಖ್ಯ ಸುತ್ತುಗಳು ಸೋಮವಾರದಿಂದ ನಡೆಯಲಿವೆ.

ಕಳೆದ ಕೆಲವು ತಿಂಗಳುಗಳಿಂದ ಕೆಎಸ್‌ಎಲ್‌ಟಿಎ ಮಹತ್ವದ ಟೂರ್ನಿಗಳನ್ನು ಆಯೋಜಿಸಿದೆ. ಅದರಲ್ಲಿ ಮುಖ್ಯವಾಗಿ ಬಿಲ್ಲಿ ಜೀನ್ ಕಿಂಗ್ ಕಪ್ ಮತ್ತು ವಿಶ್ವ ಟೆನಿಸ್ ಲೀಗ್ ಟೂರ್ನಿಗಳು ಈಚೆಗೆ ನಡೆದಿದ್ದವು. ಬೆಂಗಳೂರು ಓಪನ್ ಟೂರ್ನಿಯಲ್ಲಿ 19 ದೇಶಗಳ ಆಟಗಾರರು ಪಾಲ್ಗೊಳ್ಳಲಿದ್ದಾರೆ.

‘ಮುಂದಿನ ಒಂದು ವರ್ಷದಲ್ಲಿ ಟೆನಿಸ್ ಟೂರ್ನಿಗಳಲ್ಲಿ ಆಡಲು ಸಿದ್ಧರಾಗಿರುವವರಿಗೆ ಬೆಂಗಳೂರು ಓಪನ್ ಮುನ್ನುಡಿಯಾಗಿದೆ. ಅದಕ್ಕಾಗಿ ಕೆಎಸ್‌ಎಲ್‌ಟಿಎಗೆ ಅಭಿನಂದನೆ ಸಲ್ಲಿಸುತ್ತೇನೆ’ ಎಂದು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಿಂಗಲ್ಸ್‌ನ ಅಗ್ರ ಶ್ರೇಯಾಂಕದ ಆಟಗಾರ ಸುಮಿತ್ ನಾಗಲ್ ಹೇಳುತ್ತಾರೆ.

ಹರಿಯಾಣದ 28 ವರ್ಷದ ಸುಮಿತ್ ಅವರು 2025ರಲ್ಲಿ ಕೆಲವು ವೈಫಲ್ಯಗಳನ್ನು ಕಂಡಿದ್ದರು. ‘2017ರಲ್ಲಿ ನನ್ನ ಮೊದಲ ಚಾಲೆಂಜರ್ಸ್ ಪ್ರಶಸ್ತಿಯನ್ನು ಇಲ್ಲಿ ಜಯಿಸಿದ್ದೆ. ಅದಕ್ಕಾಗಿಯೇ ಬೆಂಗಳೂರು ನನಗೆ ಅಚ್ಚುಮೆಚ್ಚು. ಇಲ್ಲಿಯ ಜನರ ಪ್ರೋತ್ಸಾಹ ಮತ್ತು ಪ್ರೀತಿಯನ್ನು ಮರೆಯಲು ಸಾಧ್ಯವಿಲ್ಲ. ನನಗೆ ಮನೆಗೆ ಮರಳಿ ಬಂದ ಅನುಭವವಾಗುತ್ತದೆ’ ಎಂದರು.

ಮೈಸೂರಿನ ಪ್ರಜ್ವಲ್ ದೇವ್ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ. ಹೋದ ತಿಂಗಳು ಭುವನೇಶ್ವರದಲ್ಲಿ ನಡೆದಿದ್ದ ಐಟಿಎಫ್ ವಿಶ್ವ ಟೆನಿಸ್ ಟೂರ್ (ಎ015) ನಲ್ಲಿ ಯಶಸ್ಸು ಸಾಧಿಸಿದ ವಿಶ್ವಾಸದೊಂದಿಗೆ ದೇವ್ ಅವರು ಇಲ್ಲಿಗೆ ಬಂದಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ 629ನೇ ಸ್ಥಾನದಲ್ಲಿದ್ದಾರೆ.

ಆದರೆ ಬೆಂಗಳೂರು ಓಪನ್ ಕಣದಲ್ಲಿ ಚಾಂಪಿಯನ್ ಪಟ್ಟವು ಭಾರತೀಯ ಆಟಗಾರರಿಗೆ ಹೆಚ್ಚು ಒಲಿದಿಲ್ಲ. ಅದರಲ್ಲೂ ಮೊದಲ ಸುತ್ತಿನಲ್ಲಿಯೇ ನಿರ್ಗಮಿಸಿದವರು ಹೆಚ್ಚು. 2018ರಲ್ಲಿ ಪ್ರಜ್ಞೇಶ್ ಗುಣೇಶ್ವರನ್ ಅವರು ಫೈನಲ್‌ನಲ್ಲಿ ಭಾರತದವರೇ ಆದ ಸಾಕೇತ್ ಮೈನೇನಿ ವಿರುದ್ಧ ಜಯಿಸಿದ್ದರು.

ಈ ಸಲ ವಿಶ್ವ ರ‍್ಯಾಂಕಿಂಗ್‌ನಲ್ಲಿ 95ನೇ ಸ್ಥಾನದಲ್ಲಿರುವ ಸ್ಪೇನ್‌ನ ಪೆಡ್ರೊ ಮಾರ್ಟಿನೇಜ್ ಅವರು ಪ್ರಶಸ್ತಿ ಜಯಿಸುವ ಭರವಸೆ ಮೂಡಿಸಿದ್ದಾರೆ. 2021ರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದರು. 2025ರಲ್ಲಿ ಸಿನ್ಸಿನಾಟಿ ಮಾಸ್ಟರ್ಸ್ ಮತ್ತು ಅಮೆರಿಕ ಓಪನ್ ಟೂರ್ನಿಗಳಲ್ಲಿ ಬೇಗನೆ ನಿರ್ಗಮಿಸಿದ್ದರು. ವಿಂಬಲ್ಡನ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಯಾನಿಕ್ ಸಿನ್ನರ್ ಎದುರು ಸೋತಿದ್ದರು.

ಫ್ರಾನ್ಸ್‌ನ ಹೆರಾಲ್ಡ್ ಮೆಯೊಟ್ (ಎಟಿಪಿ 163) ಅವರು ತಮಗೆ ಲಭಿಸಿರುವ ಅವಕಾಶವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವ ಗುರಿಯಿಟ್ಟುಕೊಂಡಿದ್ದಾರೆ. ಎರಡನೇ ಸುತ್ತಿನಲ್ಲಿ ಅವರು ನಾಗಲ್ ಅವರನ್ನು ಎದುರಿಸುವ ಸಾಧ್ಯತೆ ಇದೆ.

ಭಾರತದ ಇನ್ನೊಬ್ಬ ಪ್ರತಿಭಾನ್ವಿತ ಆಟಗಾರ ದಕ್ಷಿಣೇಶ್ವರ್ ಸುರೇಶ್ ಅವರು ಎಸ್‌.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದ ಕೋರ್ಟ್‌ನಲ್ಲಿ ತಮ್ಮ ಛಾಪು ಮೂಡಿಸುವ ವಿಶ್ವಾಸದಲ್ಲಿದ್ದಾರೆ.

‘ಸುಮಿತ್ ಅವರು ಕೆಲವು ದಿನಗಳಿಂದ ಇಲ್ಲಿ ಅಭ್ಯಾಸ ಮಾಡಿದ್ದಾರೆ. ಪ್ರಜ್ವಲ್ ಸ್ಥಳೀಯ ಆಟಗಾರ. ಹೋದ ತಿಂಗಳು ನಾನು ಕೂಡ ಇಲ್ಲಿ ಆಡಿದ್ದೆ. ಅದರಿಂದಾಗಿ ಇಲ್ಲಿಯ ವಾತಾವರಣ ಮತ್ತು ಕೋರ್ಟ್‌ಗಳ ಬಗ್ಗೆ ಅರಿವು ಚೆನ್ನಾಗಿದೆ. ನಮ್ಮಲ್ಲಿ ಯಾರು ಅಗ್ರ ಸಾಧನೆ ಮಾಡುತ್ತಾರೆಂಬುದನ್ನು ನೋಡೋಣ’ ಎಂದು ಸುರೇಶ್ ಹೇಳುತ್ತಾರೆ.

ಪಂದ್ಯ ಆರಂಭ: ಬೆಳಿಗ್ಗೆ 11
ನೇರಪ್ರಸಾರ: ಫ್ಯಾನ್‌ಕೋಡ್ ಆ್ಯಪ್

ಎರಡನೇ ಸುತ್ತಿಗೆ ಸಿದ್ಧಾರ್ಥ್ ರಾವತ್



ಸಿದ್ಧಾರ್ಥ್ ರಾವತ್ ಅವರು ಬೆಂಗಳೂರು ಓಪನ್ ಅರ್ಹತಾ ಪಂದ್ಯಗಳ ಎರಡನೇ ಸುತ್ತು ಪ್ರವೇಶಿಸಿದ ಭಾರತದ ಏಕೈಕ ಆಟಗಾರನಾದರು.

ಭಾನುವಾರ ಸಿದ್ಧಾರ್ಥ್ 6-3, 7-5ರಿಂದ ನಿತಿನ್ ಕುಮಾರ್ ಎದುರು ಗೆದ್ದರು. ಉಳಿದ ಪಂದ್ಯಗಳಲ್ಲಿ ಭಾರತದ ಆಟಗಾರರು ನಿರಾಶೆ ಅನುಭವಿಸಿದರು.

ಅಜೀಜ್ ಒವುಕಾ (ಟ್ಯೂನಿಷಿಯಾ) 6-4, 7-6ರಿಂದ ಆದಿತ್ಯ ವಿಶಾಲ್ ಬಾಲಶೇಖರ್ ವಿರುದ್ಧ; ನೆದರ್ಲೆಂಡ್ಸ್‌ನ ನೀಲ್ಸ್ ವಿಸ್ಕರ್ 6-3, 6-3ರಿಂದ ಮನೀಷ್ ಸುರೇಶ್ ಕುಮಾರ್ ಎದುರು; ಫ್ರಾನ್ಸ್‌ನ ಆರ್ಥರ್ ರೇಮಂಡ್ 7-5, 7-6 ರಿಂದ ರಾಮಕುಮಾರ್ ರಾಮನಾಥನ್ ಎದುರು; ಜೆಕ್ ಗಣರಾಜ್ಯದ ಡಾಮ್ನಿಕ್ ಪಲಾನ್ ಅವರು ದೇವ್ ಜಾವಿಯಾ 3-6, 7-5, 7-6ರಿಂದ, ಫಿನ್ಲೆಂಡ್‌ನ ಈರೊ ವಾಸಾ 3-6, 6-3, 6-0ಯಿಂದ ಆದಿಲ್ ಕಲ್ಯಾಣಪುರ ವಿರುದ್ಧ ಗೆದ್ದರು.

ಟಿ20 ವಿಶ್ವಕಪ್: ತಂಡ ಪ್ರಕಟಿಸಿದ ಬಿಸಿಬಿ • ಲಿಟನ್ ದಾಸ್ ನಾಯಕ

ಭಾರತದಲ್ಲಿ ಪಂದ್ಯ ಆಡಲ್ಲವೆಂದ ಬಾಂಗ್ಲಾ

ಬಾಂಗ್ಲಾದೇಶ ತಂಡದ ನಾಯಕ ಲಿಟನ್ ದಾಸ್

ಢಾಕಾ (ಪಿಟಿಐ): ಮುಂದಿನ ತಿಂಗಳಿಂದ ಆರಂಭವಾಗುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾರತದಲ್ಲಿ ನಡೆಯುವ ಪಂದ್ಯಗಳಲ್ಲಿ ತಮ್ಮ ದೇಶದ ತಂಡವು ಆಡುವುದಿಲ್ಲವೆಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಹೇಳಿದೆ. ಬಾಂಗ್ಲಾದ ಪಂದ್ಯಗಳನ್ನು ಶ್ರೀಲಂಕೆಗೆ ಸ್ಥಳಾಂತರಿಸಬೇಕು ಎಂದೂ ಒತ್ತಾಯಿಸಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕೋಲ್ಕತ್ತ ನೈಟ್ ರೈಡರ್ಸ್ ತಂಡ ದಿಂದ ಬಾಂಗ್ಲಾದ ಮುಸ್ತಫಿಝುರ್ ಅವರನ್ನು ಹೊರಹಾಕಲಾಗಿತ್ತು. ಬಾಂಗ್ಲಾ ದೇಶದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷದಲ್ಲಿ ಹಿಂದೂಗಳ ಹತ್ಯೆಯನ್ನು ಖಂಡಿಸಿ ರೆಹಮಾನ್ ಅವರನ್ನು ಐಪಿಎಲ್ ನಿಂದ ಕೈಬಿಡಬೇಕೆಂದು ಭಾರತದ ಕೆಲ ರಾಜಕಾರಣಿಗಳು ಒತ್ತಾಯಿಸಿದ್ದರು. ಇದಕ್ಕೆ ಸ್ಪಂದಿಸಿದ್ದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ರೆಹಮಾನ್ ಅವರನ್ನು ಕೈಬಿಡಲು ಕೆಕೆಆರ್ ತಂಡಕ್ಕೆ ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಈಗ ಬಿಸಿಬಿ ಪ್ರತಿಕ್ರಿಯಿಸಿದೆ. ಫೆಬ್ರುವರಿ 7ರಿಂದ ಭಾರತ ಮತ್ತು ಲಂಕಾ ಜಂಟಿ ಆತಿಥ್ಯದಲ್ಲಿ ವಿಶ್ವಕಪ್ ಟೂರ್ನಿ ನಡೆಯಲಿದೆ.

‘ನಮ್ಮ ಮಂಡಳಿಯು ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅವಲೋಕಿಸಿದೆ.ಕಳೆದ 24 ಗಂಟೆಗಳಲ್ಲಿ ನಡೆದ ಬೆಳವಣಿಗೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಸದ್ಯದ ಸನ್ನಿವೇಶದಲ್ಲಿ ಆಟಗಾರರ ಸುರಕ್ಷತೆ ಕುರಿತು ಆತಂಕವಿದೆ. ಬಾಂಗ್ಲಾ ಸರ್ಕಾರ ಮತ್ತು ಬಿಸಿಬಿ ನಿರ್ದೇಶಕರು ಚರ್ಚಿಸಿದ ನಂತರ ತಂಡವು ಭಾರತಕ್ಕೆ ಪ್ರಯಾಣಿಸುವುದಿಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ‘ ಎಂದು ಸರ್ಕಾರದ ಸಲಹೆಗಾರ ಆಸಿಫ್ ನಜ್ರುಲ್ ಅವರು ಫೇಸ್‌ಬುಕ್‌ನಲ್ಲಿ ಹಾಕಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಂಗ್ಲಾ ತಂಡವು ಭಾರತದ ತಾಣಗಳಲ್ಲಿ ನಾಲ್ಕು ಲೀಗ್ ಪಂದ್ಯಗಳನ್ನು ಆಡಲಿದೆ. ಪ್ರಸ್ತುತ ಆ ಎಲ್ಲ ಪಂದ್ಯಗಳನ್ನೂ ಶ್ರೀಲಂಕೆಗೆ ಸ್ಥಳಾಂತರಿಸಲು ಬಿಸಿಬಿಯು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ)ಗೆ ಮನವಿ ಮಾಡಿದೆ. ಪಾಕಿಸ್ತಾನ ತಂಡದ ಪಂದ್ಯಗಳನ್ನು ಲಂಕಾದಲ್ಲಿ ನಡೆಸಲಾಗುತ್ತಿದೆ.

ತಂಡ ಪ್ರಕಟ: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಬಾಂಗ್ಲಾ ತಂಡವನ್ನು ಬಿಸಿಬಿಯು ಪ್ರಕಟಿಸಿದೆ. 15 ಆಟಗಾರರ ತಂಡವನ್ನು ಲಿಟನ್ ದಾಸ್ ಮುನ್ನಡೆಸಲಿದ್ದಾರೆ. ಮೊಹಮ್ಮದ್ ಸೈಫ್ ಹಸನ್ ಉಪನಾಯಕರಾಗಿದ್ದಾರೆ. ಮುಸ್ತಫಿಝುರ್ ರೆಹಮಾನ್ ಕೂಡ ತಂಡದಲ್ಲಿದ್ದಾರೆ.

ಉಳಿದಂತೆ; ತಂಝೀದ್ ಹಸನ್, ಮೊಹಮ್ಮದ್ ಪರ್ವೇಜ್ ಹುಸೇನ್ ಎಮೊನ್, ತೌಹಿದ್ ಹೃದಯ್, ಶಮೀಮ್ ಹುಸೇನ್, ಖಾಜಿ ನೂರುಲ್ ಹಸನ್ ಸೊಹನ್, ಶಾಖ್ ಮೆಹದಿ ಹಸನ್, ನಸೂಮ್ ಅಹಮದ್, ತಂಝೀಮ್ ಹಸನ್ ಸಕೀಬ್, ತಸ್ಕೀನ್ ಅಹಮದ್, ಮೊಹಮ್ಮದ್ ಶೈಫೂದ್ದೀನ್, ಶೋರಿಫುಲ್ ಇಸ್ಲಾಮ್ ಇದ್ದಾರೆ.

‘ಐಪಿಎಲ್– ಬಾಂಗ್ಲಾದೇಶ ಆಟಗಾರರಿಗೆ ಅವಕಾಶ ಬೇಡ’



ದಿಲೀಪ್ ಘೋಷ್

ಕೋಲ್ಕತ್ತ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಪಾಕಿಸ್ತಾನದ ಕ್ರಿಕೆಟಿಗರಿಗೆ ಅವಕಾಶ ನಿರಾಕರಿಸಿರುವಂತೆಯೇ, ಬಾಂಗ್ಲಾದೇಶದ ಕ್ರಿಕೆಟಿಗರಿಗೂ ಅವಕಾಶ ನೀಡಬಾರದು ಎಂದು ಪಶ್ಚಿಮ ಬಂಗಾಳ ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ದಿಲೀಪ್ ಘೋಷ್ ಹೇಳಿದ್ದಾರೆ.

ಬಾಂಗ್ಲಾದ ವೇಗದ ಬೌಲರ್ ಮುಸ್ತಫಿಝುರ್ ರೆಹಮಾನ್ ಅವರನ್ನು 2026ರ ಐಪಿಎಲ್ ತಂಡದಿಂದ ಬಿಡುಗಡೆ ಮಾಡುವಂತೆ ಕೋಲ್ಕತ್ತ ನೈಟ್ ರೈಡರ್ಸ್‌ಗೆ (ಕೆಕೆಆರ್) ಬಿಸಿಸಿಐ ನೀಡಿದ ಆದೇಶವನ್ನು ಘೋಷ್ ಸ್ವಾಗತಿಸಿದ್ದಾರೆ.

‘ಬಾಂಗ್ಲಾದಲ್ಲಿ ನಡೆಯುತ್ತಿರುವುದು ಯಾರಿಗೂ ಒಳ್ಳೆಯದಲ್ಲ. ಹಿಂದೂಗಳ ವಿರುದ್ಧ ನಡೆಯುತ್ತಿರುವ ದೌರ್ಜನ್ಯದಿಂದ ಪಶ್ಚಿಮ ಬಂಗಾಳದ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದು ಅಮಾನವೀಯ’ ಎಂದು ಪಶ್ಚಿಮ ಮೇದಿನಿಪುರ ಜಿಲ್ಲೆಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಬಾಂಗ್ಲಾದಲ್ಲಿ ಚುನಾವಣೆ ನಡೆದು ಸ್ಥಿರ ಸರ್ಕಾರ ರಚನೆಯಾಗಲಿ. ಕಾನೂನು ಮತ್ತು ಸುವ್ಯವಸ್ಥೆ ಮರುಸ್ಥಾಪನೆಯಾಗಲಿ ಎಂದು ನಾವು ಬಯಸುತ್ತೇವೆ. ಇದರಿಂದ ಜೀವಗಳು ಮತ್ತು ಆಸ್ತಿಯ ರಕ್ಷಣೆಯಾಗುತ್ತದೆ. ಗಡಿಯಲ್ಲಿನ ಉದ್ವಿಗ್ನತೆಯೂ ಕಡಿಮೆಯಾಗಲಿದೆ’ ಎಂದು ಹೇಳಿದ್ದಾರೆ.

ಸೆಮಿಗೆ ಗುಜರಾತ್ ಕರ್ನಾಟಕಕ್ಕೆ ನಿರಾಸೆ

ಬೆಂಗಳೂರು: ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಗುಜರಾತ್ ವಿರುದ್ಧ ಡ್ರಾ ಸಾಧಿಸಿ, ಈ ಬಾರಿಯ ಅಭಿಯಾನ ಮುಗಿಸಿತು. ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಗುಜರಾತ್ ತಂಡವು ಸೆಮಿಫೈನಲ್‌ಗೆ ಮುನ್ನಡೆಯಿತು.

ವಲ್ಸಾಡ್‌ನ ಸರ್ದಾರ್ ಪಟೇಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೂರನೇ ದಿನದಾಟದ ಅಂತ್ಯಕ್ಕೆ 349 ರನ್‌ಗಳ (171 ರನ್ ಇನ್ನಿಂಗ್ಸ್ ಮುನ್ನಡೆ) ಬೃಹತ್ ಮುನ್ನಡೆಯನ್ನು ಪಡೆದಿದ್ದ ಗುಜರಾತ್ ತಂಡವು ಭಾನುವಾರ ದಿನವಿಡೀ ಕರ್ನಾಟಕದ ಬೌಲರ್‌ಗಳನ್ನು ಕಾಡಿತು.

ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 178 ರನ್‌ಗಳೊಂದಿಗೆ ಕೊನೆಯ ದಿನದ ಆಟ ಆರಂಭಿಸಿದ ಗುಜರಾತ್ 95.4 ಓವರ್‌ಗಳಲ್ಲಿ 7 ವಿಕೆಟ್‌ಗೆ 432 ರನ್ ಗಳಿಸಿ ಡಿಕ್ಲೇರ್ಡ್ ಮಾಡಿಕೊಂಡಿತು. ಶನಿವಾರ ಔಟಾಗದೇ 82 ರನ್ ಗಳಿಸಿದ್ದ ಮಲಯ್ ವಿ ಶಾ (108;180ಎ) ಆಕರ್ಷಕ ಶತಕ ದಾಖಲಿಸಿದರು.

ವಿಕೆಟ್ ಕೀಪರ್ ಪೂರವ್ ಎಂ.ಪೂಜಾರ (60;96ಎ), ಮಾನಸ್ ಎಂ.ಡಿ (78;84ಎ), ಪಟೇಲ್ ಖುಷ್ (68;114ಎ) ಮತ್ತು ನಾಯಕ ರುದ್ರ ಪಟೇಲ್ (70;57ಎ) ಅವರು ಅರ್ಧಶತಕಗಳನ್ನು ದಾಖಲಿಸಿ ತಂಡದ ಮೊತ್ತವನ್ನು ಹಿಗ್ಗಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗುಜರಾತ್: 117.4 ಓವರ್‌ಗಳಲ್ಲಿ 451. ಕರ್ನಾಟಕ: 106.2 ಓವರುಗಳಲ್ಲಿ 280. ಎರಡನೇ ಇನಿಂಗ್ಸ್: ಗುಜರಾತ್: 95.4 ಓವರ್‌ಗಳಲ್ಲಿ 7 ವಿಕೆಟ್‌ಗೆ 432 ಡಿಕ್ಲೇರ್ಡ್ (ಮಲಯ್ ವಿ ಶಾ 108, ಪೂರವ್ ಎಂ.ಪೂಜಾರ 60, ಮಾನಸ್ ಎಂ.ಡಿ 78, ಪಟೇಲ್ ಖುಷ್ 68, ರುದ್ರ ಪಟೇಲ್ 70; ಧ್ಯಾನ್ ಎಂ.ಹಿರೇಮಠ 103ಕ್ಕೆ 3, ಕೃಷವ್ ಎಸ್ ಸೋಮಸುಂದರ್ 77ಕ್ಕೆ 2).

ಚಾಂಪಿಯನ್ ಆದ ಕರ್ನಾಟಕ ಮಹಿಳೆಯರ ಥ್ರೋಬಾಲ್ ತಂಡ. (ನಿಂತವರು) ಎಡದಿಂದ: ಪ್ರತ್ಯಕ್ಷಾ ಡಿ, ಮಧುರಾ ಸಿ, ಅನಿಷ್ಕಾ ಎಸ್, ಅನಾಮಿಕಾ ವಿ.ಎಸ್, ರಾಜಲಕ್ಷ್ಮಿ ಜಿ.ಎಂ, ಪವಿತ್ರಾ ಎಸ್, ಯಶಸ್ವಿನಿ ಗೌಡ, ಆನ್ನಿ ಶ್ಯಾರನ್ ಎಸ್, ಲಿಖಿತಾ ರೆಡ್ಡಿ (ಕುಳಿತವರು) ಮನೀಶಾ ಸುಥಾರ್, ಕಾವ್ಯಶ್ರೀ ಕೆ.ಜಿ. (ನಾಯಕಿ), ಗೋವಿಂದರಾಜ್ (ಭಾರತ ಥ್ರೋಬಾಲ್ ಒಕ್ಕೂಟದ ಪ್ರಧಾನ ಕಾರ್ಯದರ್ಶಿ), ಶ್ರೇಯಾ ಶೆಟ್ಟಿ

ಕರ್ನಾಟಕ ತಂಡಗಳಿಗೆ ಪ್ರಶಸ್ತಿ ಗರಿ

ಸೀನಿಯರ್ ರಾಷ್ಟ್ರೀಯ ಥ್ರೋಬಾಲ್ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪುರುಷರ ಮತ್ತು ಮಹಿಳೆಯರ ತಂಡಗಳು ಮಧ್ಯಪ್ರದೇಶದ ಭಾನಾಪುರದಲ್ಲಿ ಭಾನುವಾರ ಮುಕ್ತಾಯಗೊಂಡ 46ನೇ ಸೀನಿಯರ್ ರಾಷ್ಟ್ರೀಯ ಥ್ರೋಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡವು.

ರಾಜ್ಯದ ಪುರುಷರ ತಂಡವು ಫೈನಲ್ ಹಣಾಹಣಿಯಲ್ಲಿ 25-14, 25-21ರಿಂದ ಮಧ್ಯಪ್ರದೇಶ ತಂಡವನ್ನು ಮಣಿಸಿತು. ರೋಚಕವಾಗಿದ್ದ ಈ ಪಂದ್ಯದಲ್ಲಿ ನಾಯಕ ನಾಗರಾಜ್, ಪ್ರೀತಂ, ಎಡಗೈ ಆಟಗಾರ ಅಜಯ್, ರಾಕೇಶ್ ಅವರು ಕರ್ನಾಟಕದ ಗೆಲುವಿನಲ್ಲಿ ಮಿಂಚಿದರು.

ಗುಂಪು ಹಂತದಲ್ಲಿ ಅಜೇಯವಾಗಿದ್ದ ಕರ್ನಾಟಕ ತಂಡವು ಸೆಮಿಫೈನಲ್‌ನಲ್ಲಿ 25-11, 25-09ರಿಂದ ಆಂಧ್ರಪ್ರದೇಶ ವಿರುದ್ಧ; ಕ್ವಾರ್ಟರ್ ಫೈನಲ್‌ನಲ್ಲಿ 25-19, 25-15ರಿಂದ ಮಧ್ಯಪ್ರದೇಶ ವಿರುದ್ಧ ಗೆಲುವು ಸಾಧಿಸಿತ್ತು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಆಂಧ್ರಪ್ರದೇಶ 25-18, 25-12ರಿಂದ ದೆಹಲಿ ತಂಡವನ್ನು ಮಣಿಸಿತು.

ಮಹಿಳಾ ವಿಭಾಗದ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಕರ್ನಾಟಕ ತಂಡವು 25-14, 25-12ರಿಂದ ಆಂಧ್ರಪ್ರದೇಶ ತಂಡವನ್ನು ಮಣಿಸಿತು. ಶ್ರೇಯಾ ಶೆಟ್ಟಿ, ಕಾವ್ಯಶ್ರೀ ಜಿ. ಗೌಡ, ಮನಿಶಾ ಸುಥಾರ್ ಅವರು ಕರ್ನಾಟಕದ ಗೆಲುವಿಗೆ ವಿಶೇಷ ಕಾಣಿಕೆ ನೀಡಿದರು.

ರಾಜ್ಯದ ಮಹಿಳಾ ತಂಡವೂ ಅಜೇಯವಾಗಿ ನಾಕೌಟ್ ಪ್ರವೇಶಿಸಿತ್ತು. ಕ್ವಾರ್ಟರ್ ಫೈನಲ್‌ನಲ್ಲಿ 25-16, 25-15ರಿಂದ ಒಡಿಶಾ ವಿರುದ್ಧ; ಸೆಮಿಫೈನಲ್‌ನಲ್ಲಿ 25-16, 25-18ರಿಂದ ಮಧ್ಯಪ್ರದೇಶ ವಿರುದ್ಧ ಜಯ ಗಳಿಸಿತ್ತು. ಮೂರನೇ ಸ್ಥಾನಕ್ಕೆ ನಡೆದ ಪಂದ್ಯದಲ್ಲಿ ತೆಲಂಗಾಣ 25-10, 25-14ರಿಂದ ಮಧ್ಯಪ್ರದೇಶ ತಂಡವನ್ನು ಸೋಲಿಸಿತು. ನಾಲ್ಕು ದಿನ ನಡೆದ ಚಾಂಪಿಯನ್‌ಷಿಪ್‌ನಲ್ಲಿ 21 ರಾಜ್ಯಗಳಿಂದ 35 ತಂಡಗಳು ಸ್ಪರ್ಧಿಸಿದ್ದವು.

ಪ್ರಶಸ್ತಿ ಗೆದ್ದ ಕರ್ನಾಟಕದ ಪುರುಷರ ಥ್ರೋಬಾಲ್ ತಂಡ. (ನಿಂತವರು) ಎಡದಿಂದ: ಅಖಿಲ್ ಎಸ್‌.ಎಲ್, ಹರಿಕಿಶನ್ ದುಬೆ, ಯಶವಂತ್ ಬಿ.ಎಸ್., ಎಂ.ಬಿ.ದೇವರಾಜ, ಆರ್‌.ದಿನೇಶ್ ಪ್ರಭು, ರಾಕೇಶ್ ಕುಮಾರ್ ಎನ್, ವರುಣ್ ಸಿ, ಪ್ರೀತಂ ವೈ, ಕುಶಾಲ್ ಯಾದವ್ (ಕುಳಿತವರು) ನಾಗರಾಜ್ ಎಸ್ (ನಾಯಕ), ಗೋವಿಂದರಾಜ್, ಅಜಯ ಕುಮಾರ್ ಎನ್



ಸಿಂಡ್ರೆಲಾ ದಾಸ್

ಟಿ.ಟಿ: ಸಿಂಡ್ರೆಲಾ, ದಿವ್ಯಾಂಶಿಗೆ ಗೆಲುವು

ವಡೋದರಾ (ಪಿಟಿಐ): ಹಾಲಿ ಚಾಂಪಿಯನ್ ಸಿಂಡ್ರೆಲಾ ದಾಸ್, ಅಗ್ರ ಶ್ರೇಯಾಂಕದ ದಿವ್ಯಾಂಶಿ ಭೌಮಿಕ್ ಅವರು ಭಾನುವಾರ ವಿಶ್ವ ಟೇಬಲ್ ಟೆನಿಸ್ ಯೂತ್ ಕಂಟೆಂಡರ್‌ನಲ್ಲಿ 19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಗೆಲುವಿನೊಡನೆ ಅಭಿಯಾನ ಆರಂಭಿಸಿದರು.

ಶನಿವಾರ 17 ವರ್ಷದೊಳಗಿನ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಸಿಂಡ್ರೆಲಾ ಅವರು ಗುಂಪು 3ರ ಪಂದ್ಯದಲ್ಲಿ 11-7, 11-7, 11-8 ರಿಂದ ಅರ್ಚಿಸ್ಮಿತಾ ಮಹಾತೊ ಅವರನ್ನು ಮಣಿಸಿ ಶುಭಾರಂಭ ಮಾಡಿದರು. ದಿವ್ಯಾಂಶಿ ಅವರು ಗುಂಪು 1ರ ಪಂದ್ಯದಲ್ಲಿ ಶ್ರೇಷ್ಠಾ ಕೊಂಥಮ್ ಅವರನ್ನು ಸೋಲಿಸಿದರು.

ಜಪಾನಿನ ಮಿಕು ಮಾತ್ಸುಶಿಮಾ ಅವರು ಗುಂಪು 2ರ ಪಂದ್ಯದಲ್ಲಿ 11-3, 11-6, 11-4ರಿಂದ ಗುಂಜಾನ್ ಕುಮಾರ್ ವಿರುದ್ಧ ಗೆದ್ದರು.

ಬಾಲಕರ ಸಿಂಗಲ್ಸ್‌ನಲ್ಲೂ ಅಗ್ರ ಶ್ರೇಯಾಂಕಿತ ಆಟಗಾರರು ತಮ್ಮ ಗುಂಪುಗಳಲ್ಲಿ ತಲಾ ಎರಡು ಗೆಲುವಿನೊಡನೆ ನಾಕೌಟ್ ಸ್ಥಾನವನ್ನು ಖಚಿತಪಡಿಸಿಕೊಂಡರು.

15 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲೂ ಅಗ್ರ ಶ್ರೇಯಾಂಕಿತರು ತಮ್ಮ ಗುಂಪುಗಳಲ್ಲಿ ಗೆಲುವು ಸಾಧಿಸಿ, ನಾಕೌಟ್ ಹಂತಕ್ಕೆ ಮುನ್ನಡೆದರು.

ಆ್ಯಷಸ್ ಟೆಸ್ಟ್: ಆಘಾತದಿಂದ ಚೇತರಿಸಿಕೊಂಡ ಇಂಗ್ಲೆಂಡ್

ರೂಟ್, ಬ್ರೂಕ್ ಜೊತೆಯಾಟದ ಆಸರೆ

ಇಂಗ್ಲೆಂಡ್ ತಂಡದ ಹ್ಯಾರಿ ಬ್ರೂಕ್ ಮತ್ತು ಜೋ ರೂಟ್ ಎಎಫ್‌ಪಿ ಚಿತ್ರ

ಸಿಡ್ನಿ (ಎಪಿ): ಜೋ ರೂಟ್ ಮತ್ತು ಹ್ಯಾರಿ ಬ್ರೂಕ್ ಅವರಿಬ್ಬರ ಶತಕದ ಜೊತೆಯಾಟವು ಭಾನುವಾರ ಆರಂಭವಾದ ಆ್ಯಷಸ್ ಟೆಸ್ಟ್ ಸರಣಿಯ ಕೊನೆಯ ಪಂದ್ಯದ ಮೊದಲ ದಿನದಾಟದಲ್ಲಿ ಇಂಗ್ಲೆಂಡ್ ತಂಡಕ್ಕೆ ಆಸರೆಯಾಯಿತು.

ಈಚೆಗೆ ನಡೆದ ಬೊಂಡಿ ಭಯೋತ್ಪಾದನಾ ದಾಳಿಯಲ್ಲಿ ಮೃತರಾದವರಿಗೆ ಶ್ರದ್ಧಾಂಜಲಿ ಸಲ್ಲಿಸುವುದರೊಂದಿಗೆ ಪಂದ್ಯ ಆರಂಭವಾಯಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡವು 57 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಯಾದ ರೂಟ್ ಮತ್ತು ಬ್ರೂಕ್ ಅವರು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 154ರನ್ ಸೇರಿಸಿದರು. ಮಂದಬೆಳಕಿನ ಕಾರಣಕ್ಕೆ ದಿನದಾಟ ಮುಕ್ತಾಯವಾದಾಗ ಇಂಗ್ಲೆಂಡ್ 45 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 211 ರನ್ ಗಳಿಸಿತು. ರೂಟ್ (ಬ್ಯಾಟಿಂಗ್ 72; 103ಎ) ಮತ್ತು ಬ್ರೂಕ್ (ಬ್ಯಾಟಿಂಗ್ 78; 92ಎ) ಕ್ರೀಸ್‌ನಲ್ಲಿದ್ದಾರೆ.

ಐದು ಪಂದ್ಯಗಳ ಈ ಸರಣಿಯಲ್ಲಿ ಇಂಗ್ಲೆಂಡ್ ತಂಡದಿಂದ ಹೊರಹೊಮ್ಮಿದ ಅತ್ಯಧಿಕ ರನ್‌ಗಳ ಜೊತೆಯಾಟ ಇದಾಗಿದೆ. ರೂಟ್ ಅವರಿಗೆ ಇದು ಟೆಸ್ಟ್ ಕ್ರಿಕೆಟ್‌ನಲ್ಲಿ 67ನೇ ಅರ್ಧಶತಕ. ಹ್ಯಾರಿಗೆ 15ನೇಯದ್ದು.

ಪ್ರವಾಸಿ ಬಳಗವು ಆರಂಭದಲ್ಲಿಯೇ ಎಡವಿತ್ತು. ಬೆನ್ ಡಕೆಟ್ (27; 24ಎ, 4X5) ಮತ್ತು ಜಾಕ್ ಕ್ರಾಲಿ (16; 29ಎ, 4X3) ಮೊದಲ ವಿಕೆಟ್ ಜೊತೆಯಾಟದಲ್ಲಿ 35 ರನ್ ಸೇರಿಸಿದರು. ಮಿಚೆಲ್ ಸ್ಟಾರ್ಕ್ ಅವರು 7ನೇ ಓವರ್‌ನಲ್ಲಿ ಡಕೆಟ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ನಾಲ್ಕು ಓವರ್‌ಗಳ ನಂತರ ಮೈಕೆಲ್ ನೆಸರ್ ಅವರು ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಕ್ರಾಲಿ ಬಿದ್ದರು. ಆತಿಥೇಯ ವೇಗಿ ಸ್ಕಾಟ್ ಬೊಲ್ಯಾಂಡ್ ಎಸೆತದಲ್ಲಿ ಅಲೆಕ್ಸ್ ಕ್ಯಾರಿಗೆ ಕ್ಯಾಚ್ ಕೊಟ್ಟ ಜೇಕಬ್ ಬೆಥೆಲ್ ಆಟಕ್ಕೆ ತೆರೆ ಬಿತ್ತು. ಈ ಹೊತ್ತಿನಲ್ಲಿ ರೂಟ್ ಮತ್ತು ಬ್ರೂಕ್ ಎಚ್ಚರಿಕೆಯ ಆಟವಾಡುತ್ತ ಇನಿಂಗ್ಸ್‌ಗೆ ಚೇತರಿಕೆ ನೀಡಿದರು.

ಸರಣಿಯ ಕಳೆದ ನಾಲ್ಕು ಪಂದ್ಯಗಳಲ್ಲಿ ಆಸ್ಟ್ರೇಲಿಯಾ 3 ಗೆದ್ದಿದೆ. ಒಂದರಲ್ಲಿ ಮಾತ್ರ ಇಂಗ್ಲೆಂಡ್ ಗೆದ್ದಿತ್ತು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 45 ಓವರ್‌ಗಳಲ್ಲಿ 3ಕ್ಕೆ211 (ಬೆನ್ ಡಕೆಟ್ 27, ಜೋ ರೂಟ್ ಬ್ಯಾಟಿಂಗ್ 72, ಹ್ಯಾರಿ ಬ್ರೂಕ್ ಬ್ಯಾಟಿಂಗ್ 78, ಮಿಚೆಲ್ ಸ್ಟಾರ್ಕ್ 53ಕ್ಕೆ1, ಮೈಕೆಲ್ ನೆಸರ್ 36ಕ್ಕೆ1, ಸ್ಕಾಟ್ ಬೊಲ್ಯಾಂಡ್ 48ಕ್ಕೆ1) ವಿರುದ್ಧ ಆಸ್ಟ್ರೇಲಿಯಾ.

‘2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಪೂರ್ಣ ಸಾಮರ್ಥ್ಯದೊಂದಿಗೆ ತಯಾರಿ’



ನರೇಂದ್ರ ಮೋದಿ

ವಾರಾಣಸಿ (ಪಿಟಿಐ): ‘2036ರ ಒಲಿಂಪಿಕ್ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸಲು ಭಾರತವು ಪೂರ್ಣ ಸಾಮರ್ಥ್ಯದೊಂದಿಗೆ ತಯಾರಿ ನಡೆಸುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

ಇಲ್ಲಿ ಭಾನುವಾರ 72ನೇ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಷಿಪ್‌ನ ಉದ್ಘಾಟನಾ ಸಮಾರಂಭದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ‘2030ರ ಕಾಮನ್‌ವೆಲ್ತ್ ಕ್ರೀಡಾಕೂಟವು ಭಾರತದಲ್ಲಿ ನಡೆಯಲಿದೆ. ಮೆಗಾ ಕ್ರೀಡಾಕೂಟಗಳನ್ನು ಆಯೋಜಿಸುವ ಮೂಲಕ ದೇಶದ ಹೆಚ್ಚು ಹೆಚ್ಚು ಆಟಗಾರರಿಗೆ ಅವಕಾಶ ಒದಗಿಸಲು ತಮ್ಮ ಸರ್ಕಾರ ಬದ್ಧವಾಗಿದೆ’ ಎಂದರು.

‘ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ (ಟಾಪ್ಸ್) ನಂತಹ ಉಪಕ್ರಮಗಳು ಕ್ರೀಡಾಪಟುಗಳಿಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಲು ಸಹಕಾರಿಯಾಗಿದೆ. ಅಲ್ಲದೆ, ಕೇಂದ್ರ ಸರ್ಕಾರವು ಕ್ರೀಡಾ ಬಜೆಟ್ ಅನ್ನೂ ಗಣನೀಯವಾಗಿ ಹೆಚ್ಚಿಸಿದೆ’ ಎಂದು ತಿಳಿಸಿದರು.

‘ಕಳೆದ ಒಂದು ದಶಕದಲ್ಲಿ 17 ವರ್ಷದೊಳಗಿನವರ ಫಿಫಾ ವಿಶ್ವಕಪ್, ಹಾಕಿ ವಿಶ್ವಕಪ್ ಮತ್ತು ಚೆಸ್ ಟೂರ್ನಿಗಳು ಸೇರಿದಂತೆ 20ಕ್ಕೂ ಹೆಚ್ಚು ಪ್ರಮುಖ ಅಂತರರಾಷ್ಟ್ರೀಯ ಕೂಟಗಳು ದೇಶದ ವಿವಿಧ ನಗರಗಳಲ್ಲಿ ನಡೆದಿವೆ’ ಎಂದು ಮೋದಿ ತಿಳಿಸಿದರು.

ಇದೇ 11ರವರೆಗೆ ನಡೆಯಲಿರುವ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ದೇಶದಾದ್ಯಂತ 58 ತಂಡಗಳು ಭಾಗವಹಿಸಿವೆ.

ಚೆನ್ನೈನಲ್ಲಿ 75ನೇ ಸೀನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಟೂರ್ನಿ

ಕರ್ನಾಟಕ ತಂಡಗಳ ಶುಭಾರಂಭ

ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರ ವಿರುದ್ಧದ ಪಂದ್ಯದಲ್ಲಿ ಕರ್ನಾಟಕ ಮಹಿಳಾ ತಂಡದ ಸಂಜನಾ ರಮೇಶ್ (30) ಪಾಯಿಂಟ್ಸ್ ಗಳಿಸಲು ಯತ್ನಿಸಿದರು

ಬೆಂಗಳೂರು: ಕರ್ನಾಟಕದ ಪುರುಷರ ಮತ್ತು ಮಹಿಳೆಯರ ತಂಡಗಳು ಚೆನ್ನೈನ ಜವಾಹರಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ 75ನೇ ಸೀನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ರಾಜ್ಯದ ಪುರುಷರ ತಂಡವು ಎ ಗುಂಪಿನ ಪಂದ್ಯದಲ್ಲಿ 104-69ರಿಂದ ಗುಜರಾತ್ ತಂಡವನ್ನು ಸುಲಭವಾಗಿ ಮಣಿಸಿತು. ಅನಿಲ್ ಕುಮಾರ್ ಬಿ.ಕೆ. 22, ಅರವಿಂದ್ ಆರುಮುಗಂ 15, ಆರನ್ ಮೊಂತೆರೊ 14 ಅಂಕಗಳೊಂದಿಗೆ ಕರ್ನಾಟಕದ ಗೆಲುವಿನಲ್ಲಿ ಮಿಂಚಿದರು. ಗುಜರಾತ್ ಪರ ಮಿರಾಂತ್ ಇಟಾಲಿಯಾ ಮತ್ತು ಜಿಗ್ರಾಜ್ ಸಿನ್ಹಾ ಗೋಹಿಲ್ ತಲಾ 17 ಪಾಯಿಂಟ್ಸ್ ಕಲೆಹಾಕಿದರು.

ಕರ್ನಾಟಕದ ಮಹಿಳಾ ತಂಡವು ಎ ಗುಂಪಿನ ಪಂದ್ಯದಲ್ಲಿ 91-71ರಿಂದ ಮಹಾರಾಷ್ಟ್ರ ವಿರುದ್ಧ ಗೆಲುವು ಸಾಧಿಸಿತು. ರಾಜ್ಯ ತಂಡದ ಶ್ರುತಿ ಅರವಿಂದ್ 24, ಮಹೇಕ್ ಶರ್ಮಾ 21, ಸೋಬಾನ ಎಸ್ 16, ಬಾಂಧವ್ಯ ಎಂ. 14 ಅಂಕ ಗಳಿಸಿದರು. ಮಹಾರಾಷ್ಟ್ರ ಪರ ಸಿಯಾ ದಿಯೋಧರ್ 21 ಅಂಕ ತಂದಿತ್ತರು.

ಮಹಿಳೆಯರ ವಿಭಾಗದ ಇತರ ಪಂದ್ಯಗಳಲ್ಲಿ ಆತಿಥೇಯ ತಮಿಳುನಾಡು 72-65ರಿಂದ ಮಧ್ಯಪ್ರದೇಶ ವಿರುದ್ಧ; ಹಾಲಿ ಚಾಂಪಿಯನ್ ರೈಲ್ವೇಸ್ 101-51ರಿಂದ ದೆಹಲಿ ವಿರುದ್ಧ; ಕೇರಳ 91-22ರಿಂದ ಗುಜರಾತ್ ವಿರುದ್ಧ; ಉತ್ತರ ಪ್ರದೇಶ 42-41ರಿಂದ ತೆಲಂಗಾಣ ವಿರುದ್ಧ; ಪಂಜಾಬ್ 72-28ರಿಂದ ಉತ್ತರಾಖಂಡ ವಿರುದ್ಧ ಗೆಲುವು ದಾಖಲಿಸಿದವು.

ಪುರುಷರ ವಿಭಾಗದ ಇತರ ಪಂದ್ಯಗಳಲ್ಲಿ ಕೇರಳ 80-79ರಿಂದ ಪಶ್ಚಿಮ ಬಂಗಾಳ ಎದುರು; ತೆಲಂಗಾಣ 73-72ರಿಂದ ಹಿಮಾಚಲ ಪ್ರದೇಶ ಎದುರು; ಮಹಾರಾಷ್ಟ್ರ 69-67ರಿಂದ ಗೋವಾ ಎದುರು; ಜಾರ್ಖಂಡ್ 71-6ರಿಂದ ಜಮ್ಮು ಮತ್ತು ಕಾಶ್ಮೀರ ಎದುರು; ಅಸ್ಸಾಂ 68-60ರಿಂದ ಮಿಜೋರಾಂ ಎದುರು; ಅಸ್ಸಾಂ 50-41ರಿಂದ ನಾಗಾಲ್ಯಾಂಡ್ ಎದುರು; ಉತ್ತರ ಪ್ರದೇಶ 112-100ರಿಂದ ಪಂಜಾಬ್ ಎದುರು ಜಯ ಗಳಿಸಿದವು.

ಸೋಮವಾರ ರಾಜ್ಯದ ಪುರುಷರ ತಂಡವು ಸರ್ವಿಸಸ್ ತಂಡವನ್ನು; ಮಹಿಳೆಯರ ತಂಡವು ರೈಲ್ವೇಸ್ ತಂಡವನ್ನು ಎದುರಿಸಲಿದೆ.

ಎಚ್‌ಐಎಲ್: ಬೆಂಗಾಲ್ ಟೈಗರ್ಸ್‌ಗೆ ಜಯ

ಶ್ರಾಚಿ ಬೆಂಗಾಲ್ ಟೈಗರ್ಸ್ (ಆರೆಂಜ್ ಜರ್ಸಿ) ಮತ್ತು ರಾಂಚಿ ರಾಯಲ್ಸ್ ತಂಡಗಳ ಆಟಗಾರ್ತಿಯರು ಚೆಂಡಿಗಾಗಿ ಪೈಪೋಟಿ ನಡೆಸಿದರು ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಹಾಲಿ ಚಾಂಪಿಯನ್ ಶ್ರಾಚಿ ಬೆಂಗಾಲ್ ಟೈಗರ್ಸ್ ತಂಡವು ಭಾನುವಾರ ನಡೆದ ಪುರುಷರ ಹಾಕಿ ಇಂಡಿಯಾ ಲೀಗ್ (ಎಚ್‌ಐಎಲ್) ಪಂದ್ಯದಲ್ಲಿ 3-1 ಅಂತರದಿಂದ ಜೆಎಸ್‌ಡಬ್ಲ್ಯು ಸೂರ್ಮಾ ಕ್ಲಬ್ ತಂಡವನ್ನು ಮಣಿಸಿ ಅಭಿಯಾನ ಆರಂಭಿಸಿತು.

ಟೈಗರ್ಸ್ ಪರ ಸುಖ್‌ಜೀತ್ ಸಿಂಗ್ (33ನೇ ನಿಮಿಷ), ಅಭಿಷೇಕ್ (45ನೇ) ಮತ್ತು ಗುರುಸೇವಕ್ ಸಿಂಗ್ (60ನೇ) ಗೋಲು ಗಳಿಸಿದರೆ, ಸೂರ್ಮಾ ಪರ ಪ್ರಭಜೋತ್ ಸಿಂಗ್ (54ನೇ) ಒಂದು ಗೋಲು ಗಳಿಸಿದರು.

ಮೊದಲೆರಡು ಕ್ವಾರ್ಟರ್‌ಗಳಲ್ಲಿ ಯಾವುದೇ ತಂಡಕ್ಕೆ ಮುನ್ನಡೆ ಲಭಿಸಲಿಲ್ಲ. ಮೂರನೇ ಕ್ವಾರ್ಟರ್ ಆರಂಭವಾದ ಮೂರನೇ ನಿಮಿಷದಲ್ಲಿ ಸುಖ್‌ಜೀತ್ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದರು. ಕ್ವಾರ್ಟರ್‌ನ ಕೊನೆಯಲ್ಲಿ ಅಭಿಷೇಕ್ ಫೀಲ್ಡ್ ಗೋಲು ದಾಖಲಿಸಿದರು. 54ನೇ ನಿಮಿಷದಲ್ಲಿ ಪ್ರಭಜೋತ್ ಅವರು ಸೂರ್ಮಾ ಪರ ಮೊದಲ ಗೋಲು ದಾಖಲಿಸಿದರು. ಕೊನೆಯ ನಿಮಿಷದಲ್ಲಿ ಗುರುಸೇವಕ್ ಅವರು ಟೈಗರ್ಸ್ ಪರ ಗೋಲು ದಾಖಲಿಸಿ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಲ್ಯಾನ್ಸರ್ಸ್‌ಗೆ ಜಯ: ದಿನದ ಇನ್ನೊಂದು ಪಂದ್ಯದಲ್ಲಿ ವೇದಾಂತ ಕಳಿಂಗ ಲ್ಯಾನ್ಸರ್ಸ್ ತಂಡ 4-2ರಿಂದ ರಾಂಚಿ ರಾಯಲ್ಸ್ ವಿರುದ್ಧ ಗೆಲುವು ಸಾಧಿಸಿತು.

ಲ್ಯಾನ್ಸರ್ಸ್ ಪರ ಅಲೆಕ್ಸಾಂಡರ್ ಹೆಂಡ್ರಿಕ್ಸ್ (7ನೇ, 28ನೇ) ಮತ್ತು ಗುರುಸಾಹಿಬ್‌ಜಿತ್ ಸಿಂಗ್ (16ನೇ, 26ನೇ) ಗೋಲು ಗಳಿಸಿದರೆ, ರಾಯಲ್ಸ್ ಪರ ಟಾಮ್ ಬೂನ್ (1ನೇ) ಮತ್ತು ಮನ್‌ದೀಪ್ ಸಿಂಗ್ (9ನೇ) ತಲಾ ಒಂದು ಗೋಲು ದಾಖಲಿಸಿದರು.

ಗೆಲುವಿನಲ್ಲಿ ಮಿಂಚಿದ ಅಗಸ್ಟಿನಾ

ರಾಂಚಿ ವರದಿ: ಅಗಸ್ಟಿನಾ ಗೋರ್ಜೆಲಾನಿ ಗಳಿಸಿದ ಗೋಲಿನ ನೆರವಿನಿಂದ ಶ್ರಾಚಿ ಬೆಂಗಾಲ್ ಟೈಗರ್ಸ್ ತಂಡವು ಭಾನುವಾರ ಮಹಿಳಾ ಎಚ್‌ಐಎಲ್ ಟೂರ್ನಿ ಪಂದ್ಯದಲ್ಲಿ 1-0ರಿಂದ ರಾಂಚಿ ರಾಯಲ್ಸ್ ವಿರುದ್ಧ ಗೆಲುವು ಸಾಧಿಸಿತು.

ಅಗಸ್ಟಿನಾ (37ನೇ ನಿ) ದಾಖಲಿಸಿದ ಗೋಲು ಗೆಲುವಿಗೆ ನಿರ್ಣಾಯಕವಾಯಿತು. ಈ ಗೆಲುವಿನೊಂದಿಗೆ ಟೈಗರ್ಸ್ (8) ಅಂಕ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಏರಿತು.

ಕೋಮಾ ಸ್ಥಿತಿಯಿಂದ ಹೊರಬಂದ ಮಾರ್ಟಿನ್

ಸಿಡ್ನಿ (ಎಎಫ್‌ಪಿ): ಮಿದುಳಿನ ಉರಿಯೂತ ಸಮಸ್ಯೆಯಿಂದ ಬಳಲುತ್ತಿರುವ ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಡೇಮಿಯನ್ ಮಾರ್ಟಿನ್ ಅವರು ಕೋಮಾ ಸ್ಥಿತಿಯಿಂದ ಹೊರಬಂದಿದ್ದಾರೆ.

54 ವರ್ಷದ ಮಾರ್ಟಿನ್ ಚೇತರಿಸಿಕೊಂಡಿರುವುದನ್ನು ಮಾಜಿ ಕ್ರಿಕೆಟಿಗ, ಅವರ ಸ್ನೇಹಿತ ಆ್ಯಡಂ ಗಿಲ್‌ಕ್ರಿಸ್ಟ್ ಖಚಿತಪಡಿಸಿದ್ದಾರೆ. ‘ಇದು ಪವಾಡ. ಕಳೆದ 48 ಗಂಟೆಗಳಲ್ಲಿ ನಂಬಲಾಗದ ಬೆಳವಣಿಗೆ ನಡೆದಿದೆ. ಮಾರ್ಟಿನ್ ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

ಮಿದುಳು ಮತ್ತು ಬೆನ್ನುಹುರಿಯ ಭಾಗದ ಪೊರೆಯ ಉರಿಯೂತದ ಸಮಸ್ಯೆಗೆ ತುತ್ತಾಗಿದ್ದ ಮಾರ್ಟಿನ್ ಅವರನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಡಿ. 26ರಂದು ಗೋಲ್ಡ್‌ಕೋಸ್ಟ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮಾರ್ಟಿನ್ ಅವರು 67 ಟೆಸ್ಟ್‌ಗಳಲ್ಲಿ 46.37ರ ಸರಾಸರಿಯಲ್ಲಿ 4,406 ರನ್ ಗಳಿಸಿದ್ದರು. ಇದರಲ್ಲಿ 13 ಶತಕಗಳು ಒಳಗೊಂಡಿವೆ. 208 ಏಕದಿನ ಪಂದ್ಯಗಳಲ್ಲಿ 5,346 ರನ್ ಗಳಿಸಿದ್ದು 40.8ರ ಸರಾಸರಿ ಹೊಂದಿದ್ದರು.